# ದ್ಯಾವನೂರು

# ನೆನಕೆಗಳು

ಇಲ್ಲಿನ ಕತೆಗಳನ್ನು ಪ್ರಕಟಿಸಿದ ಸಂಕ್ರಮಣ, ಸಾಕ್ಷಿ, ಉದಯವಾಣಿ, ಪ್ರಜಾವಾಣಿ ಪತ್ರಿಕೆಗಳಿಗೆ, ಮೊದಲು ಪ್ರಕಟಿಸಿದ ನೆಲಮನೆ ಪ್ರಕಾಶನದ ಶ್ರೀ ಕೆ.ದೇವೇಗೌಡ ಅವರಿಗೆ, ಇಲ್ಲಿನ ಕತೆಗಳ ಬಗ್ಗೆ ತಮ್ಮ ಬೆಚ್ಚಗಿನ ಅನಿಸಿಕೆಗಳನ್ನು ಬರೆದ ಕತೆಗಾರ ಯಶವಂತ ಚಿತ್ತಾಲರಿಗೆ, ವಿಮರ್ಶಕ ಡಾ.ಕೆ.ವಿ.ನಾರಾಯಣ, ಕಲಾವಿದ ಅನಿಲ್‌ಕುಮಾರ್ ಅವರಿಗೆ ರಕ್ಷಾಪುಟ ವಿನ್ಯಾಸಕಾರ ಗೆಳೆಯ ಸಚ್ಚು ಹಾಗೂ ಛಾಯಾ ಚಿತ್ರ ತೆಗೆದ ಪ್ರೀತಿಯ ಉಲ್ಲಾಸ್ ದೇವನೂರ್‌ಗೆ.

ಮತ್ತು ಪ್ರಕಟಿಸಿದ ಪುಸ್ತಕ ಪ್ರಕಾಶನದ ಶ್ರೀರಾಂಜಿ ಹಾಗೂ ಸಿಬ್ಬಂಧಿ ವರ್ಗಕ್ಕೆ.

ಮಿಗಿಲಾಗಿ ಈ ಕತೆಗಳನ್ನು ಇನ್ನೂ ತಮ್ಮ ಒಡಲಲ್ಲಿಟ್ಟು ಸಲಹುತ್ತಿರುವ ಕನ್ನಡ ಓದುಗ ಔದಾರ್ಯಕ್ಕೆ ಕೃತಜ್ಞತೆಗಳು.

**ದೇವನೂರ ಮಹಾದೇವ**

***

ನನ್ನ ಮೇಲೆ ಅತಿಗಾಢವಾಗಿ ಸೃಷ್ಟ್ಯಾತ್ಮಕ ಪರಿಣಾಮ ಮಾಡಿ ನನ್ನ ಈವರೆಗಿನ ಬರವಣಿಗೆಯ ಮಿತಿಗಳಿಗೆ ನನ್ನ ಕಣ್ತೆರೆಯಿಸಿದ ಈ 'ದ್ಯಾವನೂರು' ಕಥಾ ಸಂಕಲನವನ್ನು ಮೊದಲ ಬಾರಿಗೆ ಓದಿದಾಗ ಅದರ ತಾಜಾತನಕ್ಕೆ ಮನಸ್ಸು ತೆರೆಯುತ್ತಿರುವಗಲೇ ಅದು ಪ್ರಕಟಿಸಿದ ಸತ್ಯಗಳಿಂದಾಗಿ ಓದಿನ ಕೊನೆಯಲ್ಲಿ ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಂತದ್ದು ಹರವಾದ ಕೃತಜ್ಞತಾಭಾವ.

ದೇವನೂರ ಮಹಾದೇವರ ಬರವಣಿಗೆಯಲ್ಲಿ ನಮಗೆ ತಪ್ಪದೇ ಜುಮ್ಮುದಟ್ಟಿಸುವುದು ಇಲ್ಲಿ ಬಂದ ಅನುಭವದ ಪ್ರಾಮಾಣಿಕತೆ ಹಾಗೂ ಈ ಅನುಭವ ಯಾವ ಒಂದು ಸುಳ್ಳಿನ ಅಪಸ್ವರ ಎಬ್ಬಿಸದೇ ಅಷ್ಟೇ ಪ್ರಾಮಾಣಿಕವಾಗಿ ಭಾಷೆಯಲ್ಲಿ ಸಶರೀರವಾಗುವ ಸಾಚಾ ರೀತಿ. ಹೀಗೆ ತಾನು ಹಿಡಿದಿಟ್ಟ ಅನುಭವ ಅದರ ಹುಟ್ಟಿಗೆ ಕಾರಣವಾದ ಸಾಮಾಜಿಕ ಸಂದರ್ಭದಲ್ಲಿ ನಿಜವಾಗುವಾಗಲೇ ಅದರ ಮಾನವೀಯ ಆಯಾಮಗಳನ್ನು ಸ್ಪಷ್ಟವಾಗಿ, ಆದರೂ ಕಲಾತ್ಮಕವಾಗಿ, ಆದ್ದರಿಂದಲೇ ನಮಗೆ ನೇರವಾಗಿ ಮುಟ್ಟುವಂತೆ ತೆರೆದು ತೋರಿಸುವಲ್ಲಿ, ತೋರಿಸಿ ಆ ಸಂದರ್ಭವನ್ನೇ ಹೊಸ ಬೆಳಕಿನಲ್ಲಿ ನೋಡುವಂತೆ ಮಾಡುವುದರಲ್ಲಿ ಇಲ್ಲಿಯ ಪ್ರತಿಯೊಂದು ಕತೆಯೂ ಅಸಾಧಾರಣವಾದ ಯಶಸ್ಸನ್ನು ಗಳಿಸಿದೆ.

**ಯಶವಂತ ಚಿತ್ತಾಲ**

(ಸಾಹಿತ್ಯ, ಸೃಜನಶೀಲತೆ ಮತ್ತು ನಾನು - ಕೃತಿಯಿಂದ)

# ಮಾರಿಕೊಂಡವರು

ಸಂಜೆಯ ಕೆಂಪಿಗೆ ಮೊಖಹಾಕಿ ಕುಂತ ಬೀರನ ತಲೆ ಒಳಗೆ ಕಿಟ್ಟಪ್ಪ ಥರಾವರಿ ಮೂಡತೊಡಗಿದನು. ಕಿಟ್ಟಪ್ಪ ಮದುವೆಗೆ ಒಪ್ಪಿ ಸಾಯುವ ಅಪ್ಪನಿಗೆ ನೆಮ್ಮದಿ ತರಲಿಲ್ಲ. ಅವನಿಗೆ ಅವನ ಹಟವೆ ದೊಡ್ಡದಾಯ್ತು. ಕಾಲೇಜಿಗ ಮಣ್ಣಾಕುವಾಗ ಆದ ಗೆಣಕಾತಿ ಹಿಂದ ಸುತ್ತಿ ಫೇಲಾಗಿ ಹಟ್ಟಿಗೆ ಬಂದರೂ ಅವಳ ಹುಚ್ಚು ಬಿಡಲಿಲ್ಲ. ವಾರ ಹದಿನೈದು ದಿನಕ್ಕೆ ಮೈಸೂರಿಗೆ ಹೋಗುವುದೂ ತಪ್ಪಲಿಲ್ಲ. ಗೌಡರು ಹೇಳುವವರೆಗೂ ಹೇಳಿದರು, ಬೈದರು, ಕೇಳಲಿಲ್ಲ. ವಯಸ್ಸಿಗೆ ಬಂದ ಮಗ, ಈಗೀಗಂತು ಗೌಡರು ಕಿಟ್ಟಪ್ಪ ಏನ ಮಾಡಿದರೂ ಕೇಳುವುದೇ ಇಲ್ಲ. 'ನಾ ಸಾಯೊವರ್ಗಾದ್ರೂ ಸುಮ್ಗಿರೂ ಬಡ್ಡಿಮಗ್ನೆ ಅಂದ್ರೂ ಕೇಳೊಲ್ಲ, ಇನ್ನು ನಾನೇನು ಮಾಡ್ಲಿ? ಮನೆ ಮಾರಿದ್ರೂ ಚಿಂತಿಲ್ಲ, ಎಂದೋ ಹಾಳಾಯ್ತು, ಈ ಖದೀಮ ಬೊಡ್ಡೆದ್ನ ಪಳ್ಳಿಗೆ ಕಳಿಸ್ದೆ ನೇಗಿಲು ಹಿಡಿಸಬೇಕಿತ್ತು. ನಾನೆ ತಪ್ಪು ಮಾಡಿ ಅವ್ನ ಅನ್ನೋದು ಅಂದ್ರೆ....' ಪೂರ್ತಿ ಹೇಳದೆ ಉಳಿದುದ ನುಂಗಿ ಒಂದು ಸಲ ಕಹಿ ಮೋರೆ ಮಾಡಿ ನಕ್ಕುಬಿಡುವರು. ಕೂತೂ ಉಂಡರೂ ಮುಗಿಯದಂಥ ಆಸ್ತೀಲಿ ಕಿಟ್ಟಪ್ಪ ಹೆಂಗಿರಬೇಕು? ಅದುಬಿಟ್ಟು ಈ ಗುಳ್ಳೆಲ್ಲೆ ಎಷ್ಟು ದಿನ ಕುಡಿದು ಬಿದ್ದಿಲ್ಲ? ವಾರ ಹದಿನೈದು ದಿನಕ್ಕೆ ಇದನ್ನೆ ಪಟ್ಟಾಗಿ ಹಿಡಿದುಬುಟ್ಟವನೆ, ಎಷ್ಟು ಹೇಳಿದರೂ ವಸಕಿಬಿಡುತ್ತಾನೆ. ಹೆಚ್ಚಿಗೆ ಮಾತಾಡೋಕೆ ಅನ್ನ ಹಾಕವ ದಣಿ....

ಬರುವ ಯುಗಾದಿಗೆ ಇಲ್ಲಿಗೆ ಬಂದು ವರ್ಷ ಸಂದುತ್ತದೆ. ದಿಕ್ಕುದೆಸೆ ಕಾಣದೆ ಗಂಟುಮೂಟೆ ಕಟ್ಟಿ ಲಕ್ಷ್ಮಿಯೊಡನೆ ಹೊರಟಾಗ ಕೈಲಿ ಬಿಡುಗಾಸಿಲ್ಲ. ರಾತ್ರಿ ರೈಲು ಹತ್ತಿ ಹಿಂದಲ ಡಬ್ಬೀಲಿ ಕೂತು ಮೈಸೂರು ತಲುಪಿದಾಗ ಹೊತ್ತು ಮೀರಿತ್ತು. ಸ್ಟೇಷನ್ನಿನಲ್ಲೆ ಮಲಗಿದ್ದು ನಲ್ಲೀಲಿ ಮೊಖ ತೊಳೆದು ಏನೂ ಮಾಡಲು ತೋಚದೆ ತಲೆ ಮೇಲೆ ಕೈ ಹೊತ್ತು ಕೂತಾಗ ಲಕ್ಷ್ಮಿಯೇ ನಂಜನಗೂಡು ಕಡೆಗೆ ಹೋಗುವ ಅಂದದ್ದು. ಆಗಲಿ ಎಂದು ಹೊರಟಿದ್ದ ರೈಲು ಹತ್ತಿ ಕೂತು ಟಿಕೇಟು ಕೇಳಲು ಬಂದವರ ಕೈಲಿ ಸಿಕ್ಕಿ ಫಜೀತಿ ಪಡುವಾಗಲೇ ಗೌಡರು ಅವರಿಗೆ ಸಮಾಧಾನ ಮಾಡಿ ಕಳಿಸಿ ಯಾರು ಎಂತು ಎತ್ತ ಅಂತ ವಿಚಾರಿಸಿ, 'ಹಾಲು ಮತದವರು, ಕೆಲಸಕ್ಕಾಗಿ ಊರು ಬಿಟ್ಟು ಬಂದಿದ್ದೀವಿ' ಅನ್ನುತ್ತಲೆ ವಸಿ ಹೊತ್ತು ಯೋಚಿಸಿ, "ನಮ್ಮ ತೋಟದಲ್ಲೆ ಕೆಲ್ಸ ಮಾಡಾಕೆ ತಳವಾಗಿ ಇರೊ ಎರಡಾಳು

ಬೇಕು. ಅಲ್ಲೆ ಮನೆಮಠವಿದೆ, ನೀವು ಇರೋದಾದ್ರೆ...." ಅಂದರು. ಗೌಡರು ದೇವರಂತೆ ಕಂಡರು....

ಊರ ಕಡೆ ಬೀರ ತಿರುಗಿ ನೋಡಿದನು. ಆಗಲೇ ಹೊತ್ತು ಮುಳುಗಿ ಕತ್ತಲಾಗಿತ್ತು. ಇಷ್ಟಕ್ಕಾಗಲೆ ಕಿಟ್ಟಪ್ಪ ಬರಬೇಕಿತ್ತಲ್ಲ ಎಂದು ಯೋಚಿಸುತ್ತ ಬೀಡಿ ಹಚ್ಚಿದನು. ದೂರದಲ್ಲಿ ಒಂದು ಬ್ಯಾಟರಿ ಬೆಳಕು ಹತ್ತಿರವಾಗುತ್ತಿತ್ತು. ಕತ್ತಲ ಸೀಳಿ ಹತ್ತಿರವಾಗುತ್ತಿದ್ದ ಬ್ಯಾಟರಿ ಬೆಳಕನ್ನೇ ನೋಡುತ್ತ ಅದು ಓಡಿದ ಕಡೆ ಕಣ್ಣಾಡಿಸುತ್ತ ಹತ್ತಿರ ಬರುತ್ತಲೆ ಆಂತು ನೋಡಿದಾಗ ಮಿಲ್ಲಿನ ಹುಡುಗ ಪಾಷ ಬಂದು ನಿಂತನು. ಬಂದವನೆ "ಮೋಟರ್ನ ಕಾಯಲ್ಲು ಕೆಟ್ಹೋಯ್ತುಲೆ ಕಿಟ್ಟಪ್ಪನೋರು ಮೈಸೂರ್ಗೆ ತಕ್ಕಂಡೋದ್ರು, ಬರಕಿಲ್ವಂತೆ" ಅಂದ. "ಅಂಗಾ" ಅಂದಾಗ ಪಾಷ ತಲೆಯಾಡಿಸಿ "ಹೋಗ್ತೀನಿ ಕನಣ್ಣೋ" ಎಂದವನೆ ಪಕ್ಕಕ್ಕೆ ತಿರುಗಿದಾಗ ಬೀರ "ಬಾರೋ ಸಾಬು ಉಂಡ್ಕಂಡು ಹೋಗುವಂತೆ" ಅಂದನು. "ಆಗಲ್ಲ ಕನಣ್ಣಾ ಜನ ಜಾಸ್ತಿ ಕಾದವ್ರೆ ಮಿಲ್ನಲ್ಲಿ, ಈಗ ಸಣ್ಣ ಮಿಲ್ಲ ಓಡಿಸ್ತ ಅವ್ನಿ, ಹೇಳು ಅಂದ್ರು, ಹೇಳಾಕೆ ಬಂದಿ ಅಷ್ಟೆ" ಎಂದು ಸರಸರನೆ ಹೆಜ್ಜೆ ಇಟ್ಟನು. ಬೀರ ಕೆಮ್ಮಿ ಹತ್ತಿಸಿದ್ದ ಬೀಡಿ ಕೈಗೆ ಸುಡಲು ಮತ್ತೊಂದು ತೆಗೆದು ಅದಕ್ಕೆ ಮುತ್ತಿಕ್ಕಿಸಿ ಗುಡಿಸಲ ಒಳಕ್ಕೆ ನುಗ್ಗಿದನು.

ಲಕ್ಷ್ಮಿ ಅಂದುಕೊಂಡಳು: ಈಗೀಗ ತುಂಬ ಚಳಿ ಹಿಡಿಯುತ್ತೆ. ಒಳಗಿದ್ದರೂ ಇಷ್ಟು ಚಳಿ, ಇನ್ನು ಹೊರಗೆ? ಅಪ್ಪನ ಆಸ್ತಿ ಅಂತ ಬೀರ ಯಾವಾಗಲೂ ಆ ಕಲ್ಲಿನ ಮೇಲೆ ಕೂತಿರುತ್ತಾನೆ. ಹೊರಕ್ಕೆ ಹೋಗಿದ್ದಾಗ ಬೇಕು ಅಂತ ಕೆಮ್ಮಿದರೂ ತಿರುಗಿ ನೋಡಲಿಲ್ಲ, ಕೊತಕೊತನೆ ಮರಳುತ್ತಿದ್ದ ಸಾರಿಗೆ ಉಪ್ಪು ಹಾಕಿದಳು. ಗಮ್ಮನೆ ವಾಸನೆ ಗುಡಸಲಿನ ಪೂರ್ತಿ ಹರಡಿತು. ನೆರಕೆ ಸದ್ದಾಗಲು ಬಗ್ಗಿ ನೋಡಿದಾಗ ಬೀರ ಬರುತ್ತಿದ್ದು ಕಿಟ್ಟಪ್ಪ ಇರಲಿಲ್ಲ. "ಈವತ್ತು ಕಿಟ್ಟಪ್ಪ ಬರಾಕಿಲ್ವಂತೆಕಮ್ಮಿ.... ಮೈಸೂರ್ಗೆ ಹೋಗವನಂತೆ, ಪಾಷ ಹೇಳೋದ" ಎಂದವನೆ ಇಟ್ಟಿದ್ದ ಸರಾಪುಬಾಟಲಿ ಕಡೆ ನಡೆದನು. ಇಂದು ಕಿಟ್ಟಪ್ಪ ಬರದಿದ್ದರೆ ಎಲ್ಲವನ್ನು ಈ ದೈತ್ಯ ಕುಡಿದು ಏನು ಅವಾಂತರ ಮಾಡುವನೊ ಎಂದು ಲಕ್ಷ್ಮಿಗೆ ಅಳುಕೆನಿಸಿದರೂ ಅವ ಹೇಗೆ ಆಡಿದರೂ ತನಗೆ ಪಾಠವಾಗಿದೆಯೆಲ್ಲಾ ಎಂದು ಸಮಾಧಾನವೂ ಆಯ್ತು, ಅದರೊಡನೆ ನಗೂನು ಬಂತು.

ಅತ್ತ, ಬೀರ ಹರಿವಾಣದ ಮುಂದೆ ಕೂತು ಸರಾಪಿನ ಎರಡು ಬಾಟಲಿಯ ಬಿರಡೆಗಳನ್ನೂ ಕಳೆದು ಪಕ್ಕದಲ್ಲಿ ಇಟ್ಟುಕೊಂಡನು. ಹಿಟ್ಟೆನೊಡನೆ ಬಂದ ಲಕ್ಷ್ಮಿಗೆ ನಗು ಬಂತು. "ಏ ನಿನ್ನ ದರಿದ್ರ ಆಸೆಗೆ ಮಣ್ಣಾಕ್ಕ-ವಸಿಕುಡಿ" ಅಂದಳು. ಬೀರ ಕಕಕ ನಕ್ಕು "ಈವೊತ್ತು ಹೊಟ್ಟೆ ಇರೊ ಅಷ್ಟು ಕುಡುದು ತಿಂದು ನಿನ್ನ ಸುಲಿದು ಬಿಡಬೇಕು ಅಂತ"



ಅಂದನು. ಈಗ ಸುಮ್ಮನೆ ಅಂದರೂ ಕುಡಿದ ಮೇಲೆ ಹೇಳಿದ ಹಾಗೆ ಮಾಡುತ್ತಿದ್ದ ಅವ. ಚಳಿ ಅನಿಸಲು ಲಕ್ಷ್ಮಿ ಒಳಕ್ಕೆ ಬಂದು ಬೂದಿ ಮುಚ್ಚಿದ ಕೆಂಡ ಕೆದಕಿ ಕೈ ಕಾಯಿಸತೊಡಗಿದಳು. ಬೀರ ಒಂದೆ ಸಮ ಗಟಗಟ ಕುಡಿಯೋದು ಮೂಳೆ ಕಡಿಯೋದು ಕೇಳಿಸುತ್ತಿತ್ತು. "ಇನ್ನೊಸಿ ತಕ್ಕಂದು ಬಾಮ್ಮಿ" ಅಂದಾಗ ಲಕ್ಷ್ಮಿಗೆ ಅಚ್ಚರಿಯಾಗಿ ಅರೆ ಇವ್ನ ಎಷ್ಟು ತಿಂತಾನಪ್ಪ ಗಾಳಿ ಹಿಡಕಂಡವರಂತೆ ಅಂದಕೊಂಡು ಮುಚ್ಚಲು ತುಂಬ ಮಾಂಸ ತುಂಬಿ ಕೋಣೆಯಿಂದ ಬಂದಳು. ಬೀರನ ಸುತ್ತ ಮೂಳೆಗಳು ಬಗೆಬಗೆಯಾಗಿ ಬಿದ್ದಿದ್ದವು. ಸರಾಪು ಒಂದುವರೆ ಬಾಟಲಿಯಷ್ಟು ಖಾಲಿಯಾಗಿತ್ತು. "ಅವ್ವೀ.... ಇದ್ಯಾನ ಮಾರಾಯ ದಯ್ಯದಂಗೆ ತಿನ್ತಿ" ಅನ್ನಲು ಬಾಯಿಗೆ ಬಂದರೂ, ಕುಡಿದಿರುವನೆಂದು ಸಮ್ಮನಾಗಿ ಮುಚ್ಚಲಲ್ಲಿ ಇದ್ದುದನ್ನು ಹರಿವಾಣಕ್ಕೆ ಬಗ್ಗಿಸಿದಳು. ಬೀರನ ಸುತ್ತ ಗಬ್ಬು ವಾಸನೆ ಹರಡಿತ್ತು. ಲಕ್ಷ್ಮಿಗೆ ತಲೆ ತಿರುಗಿ ವಾಕರಿಗೆ ಬರುವಂತಾಗಲು ಬಾಯಿಗೆ ಸೆರಗಿನ ಬಟ್ಟೆ ತುರುಕಿ ಕೋಣೆಗೆ ಓಡಿ ಬಂದು ಕುಂತಳು. ಬೀರ ಈಗೀಗ ಬದಲಾಯಿಸಿ ಹೋಗವನೆ. ಕುಡಿಯೋದು ಆಮೇಲ ಉಸಿರು ತೆಗೆದರೂ ಬೀಡಿ ಬೀಡಿ ಅಂತ ಇಳಿದುಹೋಗವನೆ. ಮೊದಲ ಕಳೆಯೇ ಇಲ್ಲ. ಎಷ್ಟು ಹೇಳಿದರೂ ತಳ್ಳಿ ಬಿಡುತ್ತಾನೆ. ಮಲ್ಲಿಪುರದ ಸಾವ್ಕಾರ್ರು ಕುಡುದೂ ಕುಡುದು ಎದೆಯೊಡೆದು ಸತ್ತೋದ ವಿಷ್ಯ ಹೇಳ್ತಲೆ ವಸಿ ಹೊತ್ತು ಸುಮ್ಮನಿದ್ದು "ಯಾರು ಸಾಸ್ವತ ಹೇಳು" ಅಂದು ಒಂಥರಾ ನಕ್ಕ. ಅದಕ್ಕೆ "ಕುಡಿಯೋದು ಬಿಟ್ಟರೆ ಮುಳುಗಿಹೋಗದು ಏನ?" ಅಂದುದಕ್ಕೆ ಒಂದು ರೀತಿ ನನ್ನನ್ನೆ ನೋಡಿ 'ನಾನು' ಅಂದು ಸುಮ್ಮನಾದನು.

ಬಗ್ಗಿ ನೋಡಿದರೆ ಬೀರ ಕಾಲುಚಾಚಿ ಆರಾಮ ಬಿದ್ದುಕೊಂಡಿದ್ದನು. ಒಂದು ತೊಟ್ಟು ಸರಾಪೂ ಇರಲಿಲ್ಲ. ಹರಿವಾಣದಲ್ಲಿ ಎರಡು ತುಕಡ ಮಾಂಸ ಉಳಿದಿತ್ತು. "ಥೂ ಇವ್ನ ಗೋಳೆ ಇಷ್ಟು" ಎಂದು ಗೊಣಗಿ ಹೊರಕ್ಕೆ ಬಂದು ಸುತ್ತ ಇದ್ದ ಮೂಳೆ ಗೋರಿ ಹರಿವಾಣಕ್ಕೆ ಹಾಕಿದಳು. ಅರೆಗಣ್ಣು ಬಿಟ್ಟಿದ್ದ ಬೀರ ಅಗಲವಾಗಿ ಕಣ್ಣು ತೆಗೆದರೆ ಕೆಂಡ ಕಂಡಂತಾಯ್ತು. ಅವನು ಒಂದೆರಡು ಸಲ ಹಾಹೊ ಅಂದು "ಯಾವನೋ ಅವ್ನು ನನ್ನ ತವಕ ಬಂದಿರೋ ಧೀರ?" ಅಂದನು. ಲಕ್ಷ್ಮಿ ಕ್ಯಾಣಸಾರದಿಂದ "ಸುಮ್ನೆ ಬಿದ್ಕೊ ಇನ್ನು" ಅಂದಾಗ "ಓಯ್ ನನ್ನ ಲಚಮಿ.... ಬಾ ಚಿನ್ನ ಬಾ, ನಾ ಯಾರೊ ಅಂತೀನಿ". ತವೆಯಲು ಯತ್ನಿಸಿ ಆಗದೆ ನೆಲಕ್ಕೆ ಒರಗಿ ಕಣ್ಣು ಮುಚ್ಚಿ ಲಚಮಿ ಲಚಮಿ ಎಂದು ಗೊರಗುಟ್ಟತೊಡಗಿದನು. ಲಕ್ಷ್ಮಿ ಕೋಣೆಯ ಮೂಲೆಯಲ್ಲಿ ಚಾಪೆಹಾಸಿ ಗೋಡೆ ಕಡೆಗೆ ತಿರುಗಿ ಬಿದ್ದುಕೊಂಡಳು. ರಗ್ಗನ್ನು ಮೊಖತುಂಬ ಹೊದ್ದು ದೀಪವಾರಿಸಿದಳು.

ಕತ್ತಲು ಕವುಚುತ್ತಲೆ "ನಮ್ಮ ಸೂರ್ಯಪ್ನ ಕಿತ್ಕೊಂಡವ ಯಾರ್ಲ" ಬೀರ ನಿಧಾನವಾಗಿ ಕೇಳಿದನು. ಲಕ್ಷ್ಮಿಗೆ ತಡೆಯಲಾಗಲಿಲ್ಲ, ನಗುಬಂತು. ಗಟ್ಟಿಯಾಗಿ ನಕ್ಕುಬಿಟ್ಟಳು. "ನಕ್ತಿಯಾ?

ನಗು ನಗು, ನೀನೆಲ್ಲೊ ರಾವ್ರುಗೀವ್ರು ಇರ್ಬೇಕು". ಅದಕ್ಕೂ ಲಕ್ಷ್ಮಿ ಕಿಸಕಿಸ ನಕ್ಕಳು. "ನೀ ಎಲ್ಲೋದ್ರೂ ಬುಡಕಿಲ್ಲ ನೋಡು. ಒಳ್ಳೆ ಮಾತ್ನಲ್ಲಿ ಬುಡು. ಇಲ್ದಿದ್ರೆ...." ಗಟ್ಟಿಯಾಗಿ ಕೂಗಿದ್ದಕ್ಕೆ ಲಕ್ಷ್ಮಿಗೆ ತಲೆ ಚಿಟ್ಟೆನಿಸಿತು. "ಸುಮ್ನೆ ಬಿದ್ಕೊಳ್ಳದ ಕಲ್ತಕೊ, ಇನ್ನು ನನ್ನ ಗೋಳುಹುಯ್ಕೋಬೇಡ" ಅಂದಳು. ಬೀರ ಸ್ವಲ್ಪ ಹೊತ್ತು ಸುಮ್ಮನಿದ್ದನು. ದನಿ ಗುರುತು ಹಿಡಿದವನಂತೆ ನಕ್ಕು "ಹೊಯ್ ಈಗ ಗೊತ್ತಾಯ್ತು. ನನ ಲಚಮಿ. ಚಂದುಳ್ಳಿ ಲಚಮಿ" ಅಂದನು. ಲಕ್ಷ್ಮಿ ಮಾತಾಡಲಿಲ್ಲ. "ಇನ್ನೂ ನಾಚ್ಕೆಯಾ ನಿಂಗೆ? ಈಟು ದಿನ ಆದ್ರೂ! ಬಾ ಅಂದರೆ ಬರ್ಬೇಕು". ಲಕ್ಷ್ಮಿ ಈಗಲೂ ಮಾತಾಡಲಿಲ್ಲ. ಎಳೆ ಕೂಸಂತೆ ನಕ್ಕಳು. ಬೀರನಿಗೆ ಕೋಪ ನೆತ್ತಿಗೇರಿತು. "ನಾ ಕರದ್ರೂ ನೀ ಬರಾಕಿಲ್ವಮ್ಮಿ" ಅಂತಲೆ ಲಕ್ಷ್ಮಿ "ಸುಮ್ನೆ ಬಿದ್ಕೊ ಇನ್ನು" ಗಡಸಿನಿಂದ ಹೇಳಿದಳು. "ಏನಮ್ಮಿ ನಿನ್ನ ಧಿಮಾಕು! ಇಷ್ಟಕೂ ಬಂದುಬುಟ್ಯಾ" ಚೀರಿದ. ಲಕ್ಷ್ಮಿ ಏನನ್ನೊ ಗೊಣಗಿದಳು. "ನೀ ಮಾತಾಡದಿಲ್ವ? ನನ್ನೊಂದ್ಗ ಯಾಕೆ ಮಾತಾಡ್ತಿ ಹೇಳು-ಕಿಟ್ಟಪ್ಪನೊಂದಿಗೆ ಮಾತಾಡೋದ ಬಿಟ್ಟು, ಎಷ್ಟಾದ್ರೂ ಅವ ನಿನ್ನ ಮಿಂಡ್ಗಾರ ಅಲ್ವಾ?" ಎಂದನು. ಲಕ್ಷ್ಮಿಗೆ ಬಾನೇ ಬಂದು ಮೊಗಚಿಕೊಂಡಂತಾಯ್ತು. ಮೈಕೈ ಸಣ್ಣಕೆ ನಡುಗಿದವು. ತುಂಬಾ ಧೈರ್ಯ ತಂದು "ನೀ ಯ್ಯಾನ್ನ ಅನ್ನೋದು?" ಅಂದು ಕಿವಿನಿಮಿರಿಸಿ ಕೂತಳು. "ನಾ ಯ್ಯಾನ್ನ ಅನ್ನೋದು ಅಂತೀಯೇನಮ್ಮಿ? ಕೊತ್ತಿ ಕಣ್ಮುಚ್ಕಂಡು ಹಾಲ್ಕುಡಿದ್ರ ಗೊತ್ತಾಗಲ್ವಂತೆ! ಹೆಹ್ಹೆಹ್ಹೆ ಗತಿ ಕಾಣಸ್ತೀನಿ ಕಂದಾ.... ಬೆಳ್ಗಾಗಲಿ. ನೀನೂ ಇಲ್ಲ. ಅವ್ನೂ ಇಲ್ಲ. ಬಾವ್ಗ ತರದ್ ತರದ್ ಹಾಕ್ತೀನಿ. ನನ್ನನ್ನ ಅಷ್ಟಕ್ಕು ತಪರ ಅಂತ ತಿಳ್ಕೊಂಡಿವಿರಿ! ಈಗ ಏನಾಯ್ತು ತಕ್ಕೊ.... ಬೆಳಗಾಗೋದೆ ಇಲ್ವಾ? ನಾಳೆ ಅವ್ನ ಬರೋದೆ ಇಲ್ವಾ? ಬಂದೇ ಬತ್ತಾನೆ. ಮಿಂಡಗಾತಿ ಮೊಖ ನೋಡಕೆ...." ಹಹಾ ನಕ್ಕು ಸ್ವಲ್ಪ ಹೊತ್ತು ಎಡಬಿಡದೆ ಕೆಮ್ಮಿ ಕ್ಯಾಕರಿಸಿ ಅಲ್ಲೆ ಉಗುದು 'ಉಸ್ಸಪ್ಪೊ' ಅಂದು ಉಗುಳು ನುಂಗಿದನು. "ಮಚ್ಚು ಮಡಗಿವನಿ ತೊಲೆಮ್ಯಾಗ..... ರಡಿ ರಡಿಯಾಗ್ಯತೆ" ಅಂದದ್ದು ಗಟ್ಟಿಯಾಗಿತ್ತು. ನೆಲಕ್ಕೆ ಕೈಯೂರಿ ಕೂತಳು. ಅವ ನಕ್ಕ, ಕೆಮ್ಮಿದ, 'ಉಸ್ಸಪ್ಪೊ' ಅಂದ, ಕ್ಯಾಕರಿಸಿ ಉಗಿದ, ಚಣ ಹೊತ್ತು ಸದ್ದಿಲ್ಲ. ಲಕ್ಷ್ಮಿ ಕುಳಿತೇ ಇದ್ದಳು. ತಲೆಗಿರ್ ಅನ್ನುತ್ತಿತ್ತು. ತೊಡೆಗಳು ನಡುಗುತ್ತಿದ್ದವು. ಎದೆ ಡವ ಡವ ಹೊಡೆದುಕೊಳ್ಳುತ್ತಿತ್ತು. ವಸಿಹೊತ್ತಾದ ಮೇಲೆ ಗೊರಕೆ, ಯಮದ ಗೊರಕೆ ಕೇಳಿಸಿತು.

ಲಕ್ಷ್ಮಿಗೆ ಗರ ಹಿಡಿದಂತಾಯ್ತು. ಸುಳಿವು ಹತ್ತದೆ ಮಾತು ಹೆಂಗೆ ಬತ್ತದೆ? ಕುಡುದು ಮಾತಾಡಿದರೂ....? ಬೀರನಿಗೆ ಎಲ್ಲವೂ ಗೊತ್ತಾಗಿದೆ. ಏನು ಮಾಡುವನೊ ದೇವರೆ, ಅವನ ಆಟವ ಈಗೇನು ನೋಡುತ್ತಿಲ್ಲ, ಎರಡು ಬೇಳೆ ಪೈರಿನಿಂದಲೂ ಚೆಂದಾಗಿ ಗೊತ್ತು. ಹಾಸ್ಟಲಿನ ಊಟದ ಬೆಲ್ಲು ಹೊಡದು ಸುಮಾರೆ ಹೊತ್ತಾಗಿತ್ತು. ಈಗೀಗ ಸಮರಾತ್ರಿ ಹತ್ತಿರವಾಗಿರಬೇಕು. ಗುಡಿಸಲ ಪೂರ್ತ ಗೊರಕೆ. ಸಾರಪಿನ ನಾತ ಗಬ್ಬೊ



ಅನ್ನಿಸುತ್ತಿತ್ತು. ಬೀರ ಹೊರಳಾಡಿದ. ಸ್ವಲ್ಪ ಹೊತ್ತು ಸಮಾ ಕೆಮ್ಮಿದ. ಆಮೇಲೆ ಪುನಃ ಗೊರಕೆ. ಲಕ್ಷ್ಮಿಗೆ ಮಲಗಬೇಕೆನಿಸಿತು. ಆಕಳಿಸಿದಳು. ತಲೆಯನ್ನು ಮಂಡಿಗೆ ಅದುಮಿ ಕುಂತು ಕಣ್ಣು ಮುಚ್ಚಿದಳು.... ತೋಟಕ್ಕೆ ಕಾಲಿರಿಸಿದ ಮಾರನೆ ದಿನವೆ ಕಿಟ್ಟಪ್ಪ ಬಂದದ್ದು. ಬೀರ "ನಮ್ಮ ಸಾವ್ಕಾರ್ರ ಮಗನೋರು' ಅಂದ. ಕಿಟ್ಟಪ್ಪ ನನ್ನನ್ನೆ ಒಂಥರಾ ನೋಡಿದರು. ಬೀರ ಕೆಮ್ಮಿದ. ನಾನು ಕತ್ತನ್ನು ಬಾವಿ ಕಡೆ ತಿರುಗಿಸಿ ನೆಲ ನೋಡುತ್ತಿದ್ದು ಬೆವತು ನಿಲ್ಲಲೂ ಆಗದೆ ಕಸಗುಡಿಸಬೇಕೆಂದು ಒಳಕ್ಕೆ ನುಗ್ಗಿದೆ. ಕಿಟ್ಟಪ್ಪ ಹೊರಗೆ ಇದ್ದರೂ ಇನ್ನೂ ನನ್ನನ್ನೇ ನೋಡುತ್ತಿರುವನೇನೊ ಅನ್ನಿಸುತ್ತಿತ್ತು. ಹೋಗುವವರೆಗೂ, ಹೋದ ನಂತರವೂ....

....ಒಂದು ದಿನ ಸರಾಪಿನ ಬಾಟಲಿಗಳನ್ನು ಬೀರನೆ ಹಲ್ಲು ಕಿರಿಯುತ್ತ ತಂದನು. ಆವತ್ತಿನ ಮಾಂಸವೂ ಹೆಚ್ಚಾಗಿಯೆ ಇತ್ತು. ಇಂದು ಕಿಟ್ಟಪ್ಪ ಬರುವರು ಅಂದ. ಅದಕ್ಕೇನೂ ಮಾತಾಡಲಿಲ್ಲ. ಮಾಡಿಕೊಟ್ಟೆ. ಕತ್ತಲಾಗಿ ಚಣಹೊತ್ತು ಕಳೆಯಲು ಕಿಟ್ಟಪ್ಪ ಬಂದರು. ತುಂಬವೆ ಶಿಸ್ತು ಮಾಡಿಕೊಂಡಿದ್ದರು. "ಏನಾರ ಮದ್ವೆ ಹೆಣ್ಣ ನೊಡಾಕ ಬಂದಿದಿರಾ ಕಿಟ್ಟಪ್ಪ?" ಬೀರ ನಗುನಗುತ್ತ ಅಂದಾಗ ಕಿಟ್ಟಪ್ಪನೂ ನಕ್ಕನು. ಹುಟ್ಟುತ್ತಲೆ ನಗುತ್ತ ಹುಟ್ಟಿದನೇನೊ ಅವ.

ತಿಂದರು. ಇಬ್ಬರೂ ತಿಂದರು. ಕುಡಿದರು, ಬೀರನೆ ಹೆಚ್ಚು ಬಗ್ಗಿಸಿಕೊಂಡನು. ಆಮೇಲ ಕಣ್ಣು ತೇಲಿಸಿ ಕಾಲುಚಾಚಿ ಬಿದ್ದುಕೊಂಡನು. ಕಿಟ್ಟಪ್ಪ ಎಷ್ಟು ಹೊತ್ತಾದರೂ ಹೋಗಲಿಲ್ಲ. ನಾನು ಕೋಣೆ ಒಳಕ್ಕೆ ಹೋದೆ. ಕಿಟ್ಟಪ್ಪ ಕೆಮ್ಮಿ, ನಾವು ಬರುವುದಕ್ಕೆ ಮುಂಚಿನಿಂದಲೂ ಇದ್ದ ಹಗ್ಗದ ಹುರಿ ಮಂಚದ ಮೇಲೆ ಕುಂತು ಹಾಗೆ ಇದ್ದು ಆಮೇಲ ನಿಧಾನಕ್ಕೆ ಅಲ್ಲೆ ಒರಗಿದನು. ಜೀವ ಕೈಲಿಡಿದು ಕೋಣೆ ಒಳಗೆ ಕಂಬಳಿ ಹಾಸಿ ಮಲಗಿ ರಗ್ಗು ಹೊದ್ದು ದೀಪವಾರಿಸಿದೆ. ಕತ್ತಲಾಯಿತು. ಕಣ್ಣು ಮುಚ್ಚಿದರೂ ನಿದ್ದೆ ಸುಳಿಯಲಿಲ್ಲ. ಏನೇನೊ ಊರ ಕಡೆಯ ನೆನಪುಗಳು....

ಸ್ವಲ್ಪ ನಿದ್ದೆಯ ಮಂಕು. ಹಜಾರದಿಂದ ಬೀರನ ಗೊರಕೆ ಚೆನ್ನಾಗಿ ಕೇಳಿಸುತ್ತಿತ್ತು. ಕಿಟ್ಟಪ್ಪನ ಆಗಾಗಲ ಕೆಮ್ಮು. ಹೊರಳಿದಾಗ ಸರಸರ ಸದ್ದು ಬೀಡಿ ಎಳೆದಾಗಿನ ಕೆಂಪು ಬೆಳಕು. ಪುನಃ ಬೀರನ ಗೊರಕೆ. ಎಲ್ಲವನ್ನೂ ಕಾಣದ ಹಾಗೆ ಕರಗಿಸಿಕೊಂಡಿರುವ ಗವಗತ್ತಲು. ಬಿಗಿಯಾಗಿ ಕಣ್ಣು ಮುಚ್ಚಿದರೂ ನಿದ್ದೆಯ ಸುಳಿವೇ ಇಲ್ಲ. ಕೆಮ್ಮುವುದೂ ಕಷ್ಟ. ಉಗುಳು ನುಂಗಲೂ ಆಗದು. ನುಂಗಿದರೆ ಗೊಳಕ್ ಅಂತ ಸದ್ದಾಗುತ್ತದೆ. ಸುತ್ತಲೂ ಎಂಥದೊ ಬಿಗುವು. ಅದೇ ದೊಡ್ಡದಾಗಿ ಕೇಳಿಸುತ್ತದೆ. ಬೀರನೇನೊ ಗೊರಕೆ ಹೊಡೆಯುತ್ತಿದ್ದಾನೆ. ಕಿಟ್ಟಪ್ಪನಂತೂ ಕಣ್ಣು ಮುಚ್ಚಿಲ್ಲ ಅಂತ ಕಾಣುತ್ತೆ. ಬೀಡಿ ಸೇದೋದು ಕೆಮ್ಮುವುದು

ಮಾಡುತ್ತವನೆ. ಕಳೆ ಕೀಳಲು ಬಂದಿದ್ದ ಪುಟ್ಟಿ ಕಿಟ್ಟಪ್ಪನ ಚರಿತ್ರಾನೆ ಒದರಿ ಹೋಗವಳೆ. ನಂಗೂ ನಿದ್ದೆ ಇಲ್ಲ ಅಂತ ಗೊತ್ತಾಗಿಬಿಟ್ಟರೆ? ಥೂ.

"ಲಕ್ಮೀ" ಮೆಲ್ಲನೆ ಕರೆದು ಮೈ ಮುಟ್ಟಿ ಅಲ್ಲಾಡಿಸಿದಾಗ ತಟ್ಟನೆ ಎಚ್ಚರವಾಗಿ ಬೆಚ್ಚಿಬಿದ್ದಳು. ಯೋಚನೆ ದಿಗಿಲಿನ ಮಧ್ಯೆ ಯಾವಾಗ ನಿದ್ದೆ ಬಂತೊ ಗೊತ್ತಿರಲಿಲ್ಲ. ಜೋಪಡಿ ಹಾರಿಹೋಗುವಂತೆ ಎದೆಬಡಿದುಕೊಳ್ಳತೊಡಗಿತು. ಮೆಲ್ಲನೆ ಮೈ ಸವರಿದ. ಉಸಿರ ಹಿಡಿತ ತಪ್ಪಿತು. ಒಂದು ಕಯ್ಯ ತೊಡೆಯ ಮೇಲ ಇಟ್ಟು ಇನ್ನೊಂದು ಕಯ್ಯಿಂದ ಗಲ್ಲ ಹಿಡಿದು ಅಲ್ಲಾಡಿಸಿದನು. ಇನ್ನು ಸರಿಯಲ್ಲ ಅಂದುಕೊಂಡು ಬೆಚ್ಚಿತ್ತವಳಂತೆ 'ಯಾರು?' ಅಂದಾಗ 'ನಾನು ಕಿಟ್ಟಪ್ಪ' ಅಂದನು. ಬೀರನ ಗೊರಕೆ ಕೇಳಿಸಿದಾಗ ಮೈ ನಡುಗಿತು. ಕಿಟ್ಟಪ್ಪನ ಕೈ ತೊಡೆ ಸವರುತ್ತಿತ್ತು. ತೋಚದೆ ಬೆಬಗುಟ್ಟುತ್ತ 'ಬೀರ ಮಲಗವನೆ' ಅನ್ನಲು ಕಿಟ್ಟಪ್ಪ ಅಂದದ್ದು - 'ಹ್ಞಿ ಕುಡಿದು ಬಿದ್ದೈತೆ....'

* * *

ಹೊತ್ತು ಮೂಡಲು ಎಚ್ಚರವಾಗಿ ಮೈಮಾಲು ಮುರಿಯಲು ಬೀರನಿಗೆ ಹಗೂರವಾದಂತೆ ತೋರಿತು. ಹಾಗೂ ಬೀರನಿಗೆ ವಸಿ ರಾತ್ರಿ ನಿಶ ಉಳಿದಿತ್ತು. ಎರಡು ಕೈಯನ್ನು ಗಸಗಸನೆ ತೀಡಿ ಮುಖಕ್ಕೆ ಎದುರು ತಂದು ಅಂಗೈ ನೋಡಿಕೊಂಡು ಮೆಲ್ಲನೆ 'ಲಚಮಿ' ಅಂದಾಗ ಉತ್ತರ ಬರಲಿಲ್ಲ. ಇಷ್ಟು ಹೊತ್ತಾದರೂ ಹೆಂಗಸಿಗೆ ಅಷ್ಟು ನಿದ್ದೆಯೆ ಅಂದುಕೊಂಡು ಬಲಮೊಗ್ಗಲಿಗೆ ಹೊರಳಿ ಕಂಬಳಿ ಸರಿಸಿ ಕೋಣೆಕಡೆ ನೋಡಿದಾಗ ಲಕ್ಷ್ಮಿ ಮೊಖದ ತುಂಬಾ ಹೊದ್ದು ಕೊಕ್ಕರಿಸಿಕೊಂಡು ಮಲಗಿದ್ದಳು. ಅವಳು ಹೊದ್ದಿದ್ದ ಪಟ್ಟೆ ಪಟ್ಟೆ ರಗ್ಗಿಗೆ ದಿಟ್ಟಿ ನೆಟ್ಟಿತು. ಕಳೆದ ಸೋಮವಾರ ಕಿಟ್ಟಪ್ಪ ರಗ್ಗು ಚಾಚಿ 'ತಕ್ಕೋ ಬೀರ, ಬರೋದು ಚಳಿಗಾಲ' ಅಂದು ಕೊಟ್ಟರು. ರಾತ್ರಿ ಮಲಗುವಾಗ ಲಚುಮಿ ಒಳಗೊಳಗೆ ನಗುತ್ತ ಅದನ್ನು ತನ್ನ ಕಡೆ ಎಳೆದುಕೊಂಡು 'ಇದು ನಂಗೇ ಬೇಕು' ಎಂದು ಬಿಮ್ಮನೆ ಬೀರಿ ಹಿಡಿದುಕೊಂಡಳು. ಅವಳನ್ನೆ ಬಾಚಿ ತಬ್ಬಿಕೊಂಡು ಎದೆಗೆ ಅಮುಕಿ 'ಹೋಗ್ಲಿ ಅದನ್ನ ನೀನೆ ತಕ್ಕೊ.... ನಿನ್ನನ್ನ ನಂಕೊಡು. ಅದ್ಕಿಂತ ನೀನೆ ಬೆಚ್ಚಗೆ' ಅಂದಾಗ ಕಿಸಕಿಸ ನಕ್ಕಳು. ಈಗ ಅವಳಿಗೆ ಬೆಚ್ಚಗಾಗುತ್ತಿರಬೇಕು....

ಕಿಟ್ಟಪ್ಪ ಕೊಟ್ಟಿರುವ ರಗ್ಗು ಲಚಮೀನ ಕವುಚಿಕೊಂಡಿದೆ. ಕಿಟ್ಟಪ್ಪ ಕಟ್ಟಿಸಿರುವ ಮನೆ ಇಬ್ಬರನ್ನೂ ಕವುಚಿಕೊಂಡಿದೆ. ನನ್ನನ್ನ ಆದರೆ ಚಿಂತಿಲ್ಲ. ಲಚಮಿಯನ್ನಾದರೆ.... ಪಟೇಲರ ಹಟ್ಟಿಗೆ ಚಲ್ಲಣ ಸಿಕ್ಕಿಸಿಕೊಂಡು ಬಂದಿದ್ದವ ಲಚಮೀನ ಕೆಣಕಿದನಂತೆ ಅಂತ



ಕಿವಿಗೆ ಬಿದ್ದುದೆ ತಡ, ಜಗಲಿಮ್ಯಾಗ ಕಾಲಮ್ಯಾಲ ಕಾಲ ಹಾಕಿ ಕುಳಿತಿದ್ದವನ ಕತ್ತಿನ ಪಟ್ಟಿಹಿಡಿದು ಎಳೆದು, 'ನಿನ್ನ ಸಾವ್ಕಾರಿಕೆ ಇದ್ರೆ ನಿನ್ನ ಹಟ್ಟಿಗೆ ಕನ್ಲ. ನಂಗೂ ವಸಿ ತೋರಿಸೋಕೆ ಬತ್ತೀಯ?' ಎಂದು ಬಿಗೀಬೇಕು, ಅಷ್ಟಕ್ಕೆ ಪಟೇಲರು ಮಧ್ಯಕ್ಕೆ ಬಂದು ಕೈ ಮುಗಿದು 'ಬೇರೆ ಊರ್ನ ಹೈದ, ಏನೂ ತಿಳಿದೇ' ಅಂತ ಸುಮ್ಮನಾಗಿಸಿದರು. ಹಟ್ಟಿಗೆ ಬಂದಾಗ ಲಚಮಿ ಎದೆಗೆ ಆತುಬಿದ್ದಳು....

ಎಡಗೈಯಿಂದ ಹೊಟ್ಟೆ ಸವರಿ ಮೇಲಕ್ಕೆ ತಂದು ಎದೆಯ ಮೇಲಿಟ್ಟನು. ಎದೆಯೊಳಗೆ ಸಣ್ಣಕ್ಕೆ ನೋವು ಹರಿಯಿತು. 'ಕುಡಿಬೇಡಿ ಅಂತ ಎಷ್ಟು ಬಡ್ಕಂಡ್ರೂ ಕೇಳೊಲ್ಲ. ಮಲ್ಲಿಪುರ್ದ ಸಾವ್ಕಾರ್ರು ಕುಡ್ದು ಎದೆ ಒಡೆದು ಸತ್ತೊಂದ್ರಂತೆ, ಕುಡ್ದರೆ ಕಳ್ಳನ್ನೆಲ್ಲ ಕೊರೆದು ಹಾಕ್ಬಿಡ್ತಂದಂತೆ,' ಏನಾರು ಸಾವ್ಕಾರರಿಗೆ ಆದಂಗೆ ನಂಗೂ ಆಗಿಬಿಟ್ಟರೆ? ಲಚಮಿಗೆ ದಿಕ್ಕು? ಯಾಕೆ? ಹೆಂಗೆಂಗೊ ಆಗತೊಡಗಿತು. ಬೀಡಿ ಸೇದಬೇಕೆನಿಸಿ ದಿಂಬು ಸರಿಸಿ ನೋಡಿದಾಗ ಇರಲಿಲ್ಲ. ಹೊರಗೆ ಇಬ್ಬನಿ ಬೀಳುತ್ತಿತ್ತು. ಮೊದಲ ಚಳಿ. ಬೀಡೀನೂ ಇಲ್ಲ. ಬಿಸಲು ಬರುವವರೆಗೂ ಹಿಂಗೇ ಇರಬೇಕು.

"ಇನ್ನೂ ಬೆಳೆಯೊ ಹೊತ್ತು, ಮಲ್ಗವನೆ ಎಳೆಕೊಸಂಗೆ, ನಾಚ್ಕೆ ಆಗಾಕಿಲ್ವ ನಿನ್ನ ಘಟಕ್ಕೆ?" - ಇಷ್ಟು ಮೊಬ್ಬಿಗೆ ಕಿಟ್ಟಪ್ಪ? ಚಳಿ ಬಿಟ್ಟವನಂತೆ ಕಂಬಳಿ ಹೊದ್ದು ಮೇಲಕ್ಕೆ ಎದ್ದು ಕೋಣೆ ಕಡೆ ನೋಡಲು ಲಚಮಿ ಇನ್ನು ಮಲಗವಳೆ. ಏಳಿಸಬೇಕೆನಿಸಿದರೂ ಮನಸಾಗಲಿಲ್ಲ. ಬಲಗಡೆ ನೇತು ಹಾಕಿದ್ದ ಚಾಮುಂಡವ್ವನ ಫೋಟೋಗೆ ಕೈಮುಗಿದು ತಡಿಕೆ ಬಿಚ್ಚಲು ಮೂಡಣ ದಿಕ್ಕಿಗೆ ಎದುರಾಗಿದ್ದ ಜೋಪಡಿ ಒಳಕ್ಕೆ ಗಾಳಿ ನುಗ್ಗಿತು. ನೋಡಿದರೆ ಕಿಟ್ಟಪ್ಪ ನಿಂತಿದ್ದರು.

ಲಕ್ಷ್ಮಿ ಎದ್ದು ಚಣಹೊತ್ತು ಸುಧಾರಿಸಿಕೊಂಡರೂ ಮಂಕು ಆರಲಿಲ್ಲ. ರಾತ್ರಿಯ ನೆಪ್ಪ ಚುರುಗುಟ್ಟಿಸಲು ತೊಲೆ ಕಡೆ ಕಣ್ಣೋಡಿಸಿದಾಗ ಮಚ್ಚು ಅಲ್ಲೆ ಇತ್ತು. ಹೇಗೇಗೊ ಆಗಿ ಹೊರಕ್ಕೆ ಬಗ್ಗಿ ನೋಡಿದಳು. ಬೀರ ಆಗಲೆ ಎದ್ದು ಹೊರಗೆ ಯಾರ ಜೊತೆಯಲ್ಲೊ ಮಾತಾಡುತ್ತಿದ್ದನು. ಸದ್ದು ಮಾಡದೆ ಬಾಗಿಲ ಬಳಿ ಬಂದು ನೆರಕೆ ಕಿಂಡಿಗೆ ಕಣ್ಣು ಹಾಕಿದಾಗ ಅಚ್ಚರಿ ಆಯ್ತು. ಕಿಟ್ಟಪ್ಪ ನಿಂತಿದ್ದನು.

ಯಾತಕ್ಕೊ ಕಿಟ್ಟಪ್ಪ ನಕ್ಕ

ಬೀರನೂ ನಕ್ಕನು.

(1968)

# ಗ್ರಸ್ತರು

ಹೀಗೇ ಯೋಚಿಸುತ್ತಾ ಕುಳಿತುಬಿಟ್ಟರೆ ನೆಲಕ್ಕೆ ಹೂತುಹೋಗುವಷ್ಟು ಭಾರ ಬಂದು ಬಿಡುವ ಭಯ ಬಂತು. ಹಿಂದುಮುಂದು ನೋಡದೆ ಮೇಲಕ್ಕೆ ನಿಂತು ಮಾಡುವುದು ಏನೂ ಕಾಣಲಿಲ್ಲ. ಅಲ್ಲೇ ನೀಟಾಗಿ ಹೆಜ್ಜೆ ಹಾಕುವಾಗ ಲಾಟೀನು ಬೆಳಕಿಗೆ ನೆರಳು ಹಿಗ್ಗುತ್ತ ಕುಗ್ಗುತ್ತ ಇಲ್ಲವಾಗುತ್ತ ತುಂಬ ಕಸಿವಿಸಿ ಹೆಚ್ಚಿತು. ಸುತ್ತ ಕಣ್ಣಾಡಿಸಲು ಎದುರು ಗೋಡೆಯಲ್ಲಿ ಬಸವಣ್ಣ, ತಪಸ್ಸು ಮಾಡುತ್ತಿರುವ ಶಿವ, ದೊಡ್ಡದು ಮಾಡಿಸಿರುವ ಅಪ್ಪನ ಫೋಟೊ ದೃಷ್ಟಿಗೆ ಬಂದವು. ಮುಂದಿನ ಕಿರುಮನೆ ದಾಟಿ ಕಣ್ಣು ಹೋಗಲಿಲ್ಲ. ಅವ್ವ ಕಣ್ಣು ಮುಚ್ಚಿರಬೇಕು. ಇಲ್ಲದಿದ್ದರೆ ಗೌಡರ ಹಟ್ಟಿಗೆ ಹೋಗಲೇ ಇಲ್ಲವಾ ಎಂದು ಕೇಳುತ್ತಿದ್ದಳು. ಕಿರುಮನೆ ಹೊಸ್ತಿಲ ಬಳಿ ಹೋಗಿ ನಿಂತೆ. ಕುತ್ತಿಗೆವರೆಗೆ ದುಪ್ಪಟಿ ಹೊದ್ದು ಗೋಡೆ ಕಡೆ ತಿರುಗಿ ಅವ್ವ ಮಲಗಿದ್ದಳು. ಲಾಟೀನು ಬೆಳಕು ಕಿರುಮನೆಗೆ ನುಗ್ಗಿ ಆದಷ್ಟು ಸ್ಪಷ್ಟ ಮಾಡಲು ನೋಡುತ್ತಿತ್ತು.

ಅವ್ವ ಎದ್ದು ಓಡಾಡಿದ್ದು ಮರೆತು ಹೋಗುವಷ್ಟು ದಿನಗಳಾದವು. ಜಡ್ಡು ಬಿದ್ದ ಹಟ್ಟಿಗೆ ಅವ್ವನ ಎದೆ ಬಡಿತ ಒಗ್ಗಿಬಿಟ್ಟಿದೆ. ನೆನೆಸಿಕೊಳ್ಳುವುದಕ್ಕೆ ಅಸಹನೀಯವಾಗಿ ತೋರಿತು. ಗೌಡರು ಬಂದು ಕಿರುಮನೆ ಮುಂದು ನಿಂತು ಠೀವಿಯ ಮಾತು ಒಗೆಯತೊಡಗಿದಾಗ ಅವ್ವನ ಜೀವ ಏಳುವುದಕ್ಕಾಗದೆ ಕೂರುವುದಕ್ಕಾಗದೆ ಒದ್ದಾಡಿ ಹೋಗಿರಬೇಕು. ಬಂದ ತಕ್ಷಣವೇ ಅಳು ಕಚ್ಚಿಕೊಂಡು ಹೇಳಿದಳು: 'ಗೌಡರು ಚಾರಮಾರ ಅಂದರು. ನೀನು ಎದುರು ನಡೆಯುವುದು ಎಂದರೇನು? ಎಷ್ಟಾದರೂ ಅವರು ದೊಡ್ಡೋರು.' ಅವ್ವನ ಮಾತುಗಳಿಂದ ಗೌಡರು ಮೂಡಿಬಂದರು: ಒಂದು ಕೈಲಿ ಉರಿಯುವ ಸಿಗರೇಟು, ಇನ್ನೊಂದು ಕೈ ಅಲ್ಲಾಡಿಸುತ್ತ "ಹುಡ್ಗ ಯೋಗ್ಯ ಅಂತ ಸಾವಿರ್ದವರ್ಗೂ ಸಾಲ ಕೊಟ್ಟೆ. ಸ್ವಾಮಿಗಳ ಕಾಲ್ಗೆ ಬಿದ್ದು ಕೆಲ್ಸ ಕೊಡ್ಸದವ ನಾನು ಇವ್ಳೆ. ಈಗ ಎಷ್ಟರವನು ಅಂತ ಗೊತ್ತಾಯ್ತು ತಕ್ಕೊ. ನಾ ಹೇಳೋದು ಇಷ್ಟೆ. ಅಸ್ಲು ಬಡ್ಡಿ ಜೊತ್ಮಾಡ್ಕೊಂಡು ಹಟ್ಟಿ ಬಾಗ್ಲು ಮೆಟ್ಟೋದಕ್ಕೆ ಹೇಳು. ಇಲ್ಲ, ನೀನೆ ಕಂಡಿದ್ದಿ ಹೊಲ ಅಂಗೈಯಗ್ಲ ಉಳಿಯಾಕಿಲ್ಲ". ಇದಕೇಳಿ ಅವ್ವಗೆ ಮಾತು





ನಿಂತುಹೋಗಿ ಗೌಡರು ಗತ್ತಿನಿಂದ ಹೆಜ್ಜೆ ಹಾಕಿ ಹೋಗಿರಬೇಕು. ಕಲ್ಲಿನಂತೆ ಒಂದೆ ಸಮ ನಿಂತಿರುವುದಕ್ಕೆ ಆಗಲಿಲ್ಲ. ಅವ್ವಾ ಎಂದರೆ ಕಣ್ಣು ತೆರೆಯಬಹುದು. ಕಣ್ಣಲ್ಲೆ ಜೀವ ತುಂಬಿಕೊಂಡು ಇಡೀ ನನ್ನನ್ನು ನೋಡಬಹುದು. ನಿಲ್ಲಲು ಆಗಲಿಲ್ಲ. ಬಾಗಿಲು ತೆರೆದುಕೊಂಡು ದೊಡ್ಡವ್ವ ಒಳಬಂದಳು. ಇಷ್ಟೊತ್ತಿಗೇನೆ ಎಷ್ಟೊಂದು ಕತ್ತಲು ನೋಡು ಅಂದಳು. ದೊಡ್ಡವ್ವನ ದಿಟ್ಟಿಸಿದೆ. ನೋಡುವುದಕ್ಕಾಗದಷ್ಟು ಕಂಗೆಟ್ಟಿದ್ದಳು. ದುಡಿದುಡಿದೂ ಹಗಲೂ ರಾತ್ರಿ ಮಾಡುವುದು. ಯಾತಕ್ಕಾಗಿ ಇದು ಅನಿಸಿತು. ಟೀ ಬೇಕಾದರೆ ಇಡ್ತೀನಿ ಅಂದಾಗ 'ಹ್ಞೂ' ಅಂದೆ. ಏನಾದರೂ ಮಾತಾಡಬಹುದು ಅನಿಸಿ ಕೋಣೆಗೆ ಬಂದು ಮಣೆ ಹಾಕಿ ಕುಳಿತುಕೊಂಡೆ. ದೊಡ್ಡವ್ವ ಬೆಂಕಿ ಹಾಕಿ ನಿಮಿಷಕ್ಕೆ ದಗ ದಗ ಒಲೆ ಉರಿಸತೊಡಗಿದಳು. ಬೆಂಕಿ ಉರಿಯಿಂದ ಮೊಖ ತೆಗೆದು "ನೀನು ಮದ್ವೆಯಾಗ್ದೆ ದಿನಾ ನಂಗೆ ಈ ಕಷ್ಟ ಕೊಡ್ತಿ ನೋಡು. ಎಲ್ಡು ದಿಕ್ಲ ಕೆಲ್ಸ" ಅಂದಳು. "ಏನು ದೊಡ್ಡವ್ವ" ಅಂದೆ. "ನೀ ಇನ್ನು ಕೂಸು" ಅಂದುದು ಬಾಳ ಅಕ್ಕರೆ ಅನ್ನಿಸಿತು. ದೊಡ್ಡವ್ವ ಕರಗುವ ಹಾಗೆ ಬೆಂಕಿಗೆ ಮೈ ಕೊಟ್ಟು ಕುಳಿತಿದ್ದಳು. ಬಹಳ ಹೊತ್ತು ಬಿಟ್ಟು "ಮದ್ವೆ ಅಂದ್ರೆ ನಿಂಗ್ಯಾಕಪ್ಪ ಮಾತೇ ಬರಲ್ಲ" ಅಂದಳು. ಚಿಗುರು ಮೇಯುವ ಜಿಂಕೆ ಥರ ಅವಳ ನೆನಪು ಒಡೆದುಕೊಂಡು ಬಂತು. ದೊಡ್ಡ ದೊಡ್ಡ ಎರಡು ಕಣ್ಣು, ದೊಡ್ಡ ಹಣೆ, ದೊಡ್ಡ ಹೃದಯ. ಅಲ್ಲೇ ತಾನು ಮಲಗುವಷ್ಟು ತಾವು. ಅಲ್ಲಿ ರಾತ್ರಿಯೆಲ್ಲ ಸಿಗರೇಟು ಸೇದಿ, ಬೆಳಗ್ಗೆ ಹೊತ್ತಾಗಿ ಎದ್ದು ಅವಳ ಕೈಲಿ ಬೈಗಳು-ಬಹಳ ಗೆಲು ಗೆಲು ಅನಿಸಿತು. ನಗು ತಡಹಿಡಿದುಕೊಂಡು ದೊಡ್ಡವ್ವನ ಕಡೆ ನೋಡಿದೆ. ದೊಡ್ಡವ್ವ ನಕ್ಕು ಏನು ಅಂತ ಕೇಳಿದಳು. ಏನೋ ನೆನಪು ಬಂತು ಅಂದೆ. ಹೊಡೆದ ಹಾಗೆ "ನಂಗೊತ್ತು. ಆಗದಿದ್ದನ್ನೆಲ್ಲ ಕಟ್ಕೊಂಡು ಕೊರಗ್ತೀಯಾ" ಎಂದು ಟೀ ಬಸಿದು ಲೋಟದೊಡನೆ ನಡುಮನೆಯಲ್ಲಿರಿಸಿ ಬಂದು ಅಲ್ಲೆ ಕುಳಿತಳು. ನಡುಮನೆಗೆ ಬಂದು ಟೀ ಕಚ್ಚಿ ದೊಡ್ಡವ್ವನ ಕಡೆ ನೋಡಿದೆ. ಉರಿಯುವ ಬೆಂಕಿಯಲೆ ದೊಡ್ಡವ್ವನ ಮುಖಕ್ಕೆ ರಾಚುತ್ತಿತ್ತು.... ಎದ್ದು ಗೌಡರ ನೋಡಿ ಬರುವೆ ಹೇಳಿ ಹೊರಬಂದೆ. ಬಹಳ ಹೊತ್ತಾಗಿ ರಾತ್ರಿ ಹೆಚ್ಚು ಕತ್ತಲು ಕೂಡಿ ಹಾಕಿತ್ತು.

ಅವ್ವ, ದೊಡ್ಡವ್ವರ ಬಿಳುಚಿಕೊಂಡ ಮುಖಗಳು ಬೆನ್ನ ಹಿಂದೆ ಬರುತ್ತಿರುವ ಹಾಗೆ ಅನ್ನಿಸಿ ಹಿಂದಕ್ಕೆ ನೋಡಬೇಕು ಎನ್ನುವಷ್ಟು ಅನುಮಾನ - ಬಹಳ ಸಲ ಹೀಗೆ. ಗೆದ್ದಲು ತಿನ್ನುತ್ತ ನಿಂತ ಹಟ್ಟಿಯ ಥರ ಅವ್ವ ತೋರಿದಳು. ಅಲ್ಲಾಡದೆ ಮಲಗಿ ಕಣ್ಣು ತೆರೆದಿದ್ದರೆ ಕಿರುಮನೆಯಲ್ಲಿ ಸುತ್ತುವರೆದುದ ನೋಡುವುದು. ಅದು ಮುಗಿದರೆ ನನ್ನ ನೆನೆಸಿಕೊಂಡು ಮನೆ ದೇವರ ನೆನೆಯುವುದು. ಆ ಹಟ್ಟಿ ಕೆಲ್ಸ ಮುಗಿಸಿ ದೊಡ್ಡವ್ವ ಬಂದು ಕುಂತರೆ "ಕಾಗ್ದ ಏನಾದ್ರು ಬರ್ದಿದ್ನಾ, ಎಂದು ಬತ್ತಾನಂತೆ" ಎಂದು ಕೇಳುವುದು-ಇಲ್ಲಿಗೆ ಮುಗಿಯುತ್ತದೆ. ಇನ್ನು ದೊಡ್ಡವ್ವನದು-ಹೊಲ ಮನೆ ಕೆಲಸಕ್ಕೆ ದೇಹ ತೇಯುವುದು.

ಅವ್ವನಿಗೆ ಎರಡು ಹೊತ್ತು ಗಂಜಿ ಕುಡಿಸಿ ನಿಂಬಳ ಕಾಣುವುದು. ನನ್ನನ್ನು ಯಾರಾದರೂ ಹಾಗೆ ಹೀಗೆ ಅಂದರೆ ರೇಗುವುದು. ಇವರ ಇದು ತನ್ನನ್ನು ಇಲ್ಲವಾಗಿಸುತ್ತದೆ ಎನ್ನಿಸಿ ಚಿಟ್ಟಾಯಿತು. ಅವ್ವನ ಲಕ್ವ ಹೊಡೆದ ಬಿಳುಪು ದೇಹ ಊರ ತುಂಬ ಓಡಾಡಿದ ಹಾಗೆ ಕಲ್ಪಿಸಿಕೊಂಡೆ. ಕತ್ತಲಿಗೆ ಊರ ಮುಂದಲಿನ ಅರಳಿ ಮರಗಳು ಗವ್ವ ನಿಂತಿದ್ದವು. ಹಟ್ಟಿಗಳ ಕಿಂಡಿಗಳಿಂದ ನೆಸೆಯುವ ಬೆಳಕುಗಳು ಹೊರ ಬಂದು ಕರಗಿ ಹೋಗುತ್ತಿದ್ದವು. ರೋಡಿನ ದಿಕ್ಕಿಗೆ ಮೊಖಹಾಕಿ ನಿಂತ ಗೌಡರಹಟ್ಟಿಯ ದೊಡ್ಡನಿಲುವು ಕತ್ತಲಿಗೆ ಮುಚ್ಚಿಹೋಗಿತ್ತು.

ಎರಡು ಸಲ ದಾರಂದ ಕುಟ್ಟಿದ ಮೇಲೆ ತೆರೆದುಕೊಂಡು ನಾಗವ್ವ ಕಾಣಿಸಿ ಎಂದು ಬಂದುದು ಕೇಳಿ ಒಳಹೋದರು. ಗೌಡರು ಹಜಾರಕ್ಕೆ ಸೇರಿದ ಮಂಚದ ಮೇಲೆ ಮುಂದಕ್ಕೇ ಲಾಟೀನು ಇರಿಸಿ ಕಾಗದ ಪತ್ರ ಹರಡಿ ನಡುವೆ ಗುಂಡತಗೆ ಕುಳಿತಿದ್ದರು. ಅಂತು ಕತ್ತು ಎತ್ತಿ ಕುಣಿಸಿ "ಬಾ ಇವನೆ" ಅಂದರು. ಹೋಗಿ ಸಾವರಿಸಿಕೊಂಡು ಮುಂಡಿಗೆಗೆ ಒರಗಿ ಕೂತು ಕೊಟ್ಟಿಗೆಯಲ್ಲಿ ಸಾಲಾಗಿ ಉದ್ದಕ್ಕೆ ಕಟ್ಟಿದ್ದ ದನಕರುಗಳ ನೋಡಿದೆ. ಯಾರಾರ ಹಟ್ಟಿಯವು ಯಾವಾವು ಎಂದು ನೋಡಿದ್ದಕ್ಕೆ ಗುರುತಾಗಲಿಲ್ಲ. ಗೌಡರು "ಇವಳೇ ಟೀ ಕಾಯ್ಸು" ಎಂದುದು ನಾಗವ್ವ "ಆಯ್ತು" ಅಂದುದು ನಾನು "ಏನು ಬೇಡಿ" ಅಂದೆ. ಗೌಡರು "ಪರವಾಯಿಲ್ಲ" ಹೇಳಿ ಕಾಗದ ನೋಡಿ ತಲೆ ಎತ್ತಿ "ನಿನ್ನದನ್ನೆ ನೋಡುತ್ತಿದ್ದೆ" ಅಂದರು. ಮಾತಾಡುವುದಕ್ಕೆ ತೊಡಕಾಗಿ ಉಗುಳು ನುಂಗಿ "ನಿಧಾನಿಸಿದರೆ ಆಗುತ್ತಿತ್ತು" ಅಂದೆ. ಸಿಗರೇಟು ಹಚ್ಚಿ ಹೊಗೆ ಬಿಟ್ಟು ಮೇಲಕ್ಕೆ ನೋಡಿ "ಹೇಗಾಗುತ್ತೆ ಹೇಳು" ಅಂದು ಬಹಳ ಹೊತ್ತು ನನ್ನ ಕಡೆ ನೋಡಲೆ ಇಲ್ಲ. ನಾಗವ್ವ ಟೀ ತಂದು ಮುಂದೆ ಇರಿಸಿ ಒಳ ಹೋದರು."ಈಗೆಲ್ಲಿಂದ ತರ್ಲಿ ಹೇಳಿ. ಕೆಲ್ಸ ಬಿಟ್ಟು ಬಂದುದು ಗೊತ್ತೆ ಇದೆ". ಗೌಡರು ಗುರುಗಾಯಿಸುವ ಥರ ನೋಡಿದರು. ಆಡುವ ಮಾತುಗಳಿಗೆ ಭಾರ ಹಾಕುತ್ತ "ಸರಿಯಪ್ಪ, ನೀಯೇನೊ ಕೆಲ್ಸ ಬಿಟ್ಟೆ. ಕೆಲ್ಸ ಕೊಡ್ಸಿದವ್ರ ಮಾನ ಏನಾಗಬೇಕು" ಎಂದು ಅವರದೇ ನಗು ತಂದುಕೊಂಡಾಗ ಹೇಗೆ ಹೇಳಬೇಕೊ ಗೊಂದಲಿಸಿಕೊಂಡಿತು. "ಹಾಗಲ್ಲ. ಅದು ನಿಮಗೆ ಗೊತ್ತಾಗಲ್ಲ" ಅಂದೆ. ತಗುಲಿದ ಹಾಗೆ ಎಗರಿ ಕುಳಿತರು. "ಏನಂದೆ?" ಜೋರಾಗಿ ಅಂದು ದನಿ ಏರಿಸಿ "ನಂಗೆಲ್ಲಯ್ಯ ಗೊತ್ತಾಗುತ್ತೆ? ಸ್ವಾಮಿಗಳ ಮುಂದೆ ಎಷ್ಟರವ್ನು ನೀನು? ಸ್ವಾಮಿಗಳೆಲ್ಲ ಹಾಗೆ ಹೀಗೆ ಅಂಥ ಭಾಷಣ ಬೇರೆ ನಿಂಗೆ. ಈಗ್ಯಾಕೆ ಪಂಚಾಯ್ತಿ. ನಂದೂ ನಿಂದೂ ವ್ಯವಹಾರ ಮುಗೀತು. ಅಸ್ಲು ಬಡ್ಡಿ ತಂದೊಪ್ಪಿಸು. ಮುಂದಕ್ಕೆ ನೀನು ನಿನ್ನ ಹಾದಿ". ದುಮುಗುಡುತ್ತ ಕುಳಿತುಬಿಟ್ಟರು. ಸುಮ್ಮನೆ ಕೂರಲು ಆಗಲಿಲ್ಲ. "ಹಾಗಲ್ಲ ಗೌಡರೆ" ಅಂದೆ. ನೋಡಿದರು. "ಹೇಳಿದ್ರೆ ನಿಮ್ಗೆ ಗೊತ್ತಾಗಲ್ಲ" ಎಂದು ಮುಂದೆ ಹೇಳಹೊರಟೆ. ಗೌಡರು ಕತ್ತರಿಸಿದ ಹಾಗೆ "ಈಗ ಗೊತ್ತಾಗುತ್ತೆ ತಕ್ಕೊ" ಎಂದು ಸೀಳುವ ಥರ ನೋಡಿದರು. ಚಡಪಡಿಸಿ ಮೇಲಕ್ಕೆ ಎದ್ದು "ಸರಿ ಬರ್ತೀನಿ" ಎಂದು



ತಿರುಗಿ ನೋಡದೆ ಹೊರ ಬಂದೆ. ನಿಂತ ಕತ್ತಲೊಳಗೆ ಹಾದಿ ಸಿಕ್ಕದ ಥರ ಆಯಿತು.

ದೊಡ್ಡವ್ವ ಬಾಗಿಲು ತೆರೆದುಕೊಂಡು ನಿಂತಿದ್ದಳು. ಕಂಡವಳೆ "ಯಾಕಿಷ್ಟೊತ್ತು ಮಾಡ್ದೆ" ಎಂದು ನೋಡಿದಳು. "ಇಷ್ಟೊತ್ತಾಯ್ತು" ಅಂದೆ. "ನಿನ್ನೊಂದ್ಗ ಎಷ್ಟು ಮಾತಾಡ್ತ್ರ ಅಷ್ಟೇನೆ" ಎಂದಳು. ನಗಲು ನೋಡಿದೆ. ತಟ್ಟನೆ "ಬಾಳನೆ ಹೊತ್ತಾಯ್ತು. ಆ ಹಟ್ಟೀಲು ಏನಾರು ಮಾಡ್ಬೇಕಲ್ಲ ಹೊಯ್ತಿನಿ" ಅಂದಳು. ಒಂದೆರಡು ಹೆಜ್ಜೆ ಹಾಕಿ ತಿರುಗಿ "ಅವ್ವಗೂ ನೀನೆ ಗಂಜಿ ಕೊಡು" ಎಂದು ಸರಸರ ನಡೆದಳು. ತೆರಕೊಂಡ ಬಾಗಿಲಿನಿಂದ ಬೆಳಕು ಚಾಚಿದ್ದವರೆಗೂ ದೊಡ್ಡವ್ವ ಕಾಣುತ್ತಿದ್ದು ಆಮೇಲೆ ಕಾಣಲಿಲ್ಲ. ಸುಮಾರು ಹೊತ್ತು ಅಲ್ಲೆ ನಿಂತೆ. ಗಾಳಿ ಜೋರು ಬೀಸಿ ಅಲ್ಲೊಂದು ಇಲ್ಲೊಂದು ಮಳೆ ಹನಿ ಉದುರುತೊಡಗಿದಾಗ ಒಳಕ್ಕೆ ಬಂದುದು.

ಊಟ ಒಗ್ಗಲಿಲ್ಲ. "ಉಣ್ಣಾಕೆ ತರಲವ್ವ" ಎಂದು ಕೇಳಿದೆ. ಕಿರುಮನೆಯಿಂದ "ಎರ್ಡು ದಿಕ್ಲ ರೈಲು ಹೊಯ್ತಾ" ಎಂದುದು ಕೇಳಿಸಿತು. "ಹೋಗಿರಬೇಕು, ಇನ್ನೂ ಇದ್ದದಾ" ಅಂದೆ. ಇನ್ನೊಸಿ ಹೊತ್ತೋಗ್ಲಿ ಎಂದ ಅವ್ವನ ದನಿ ಜೊತೆ ಸೊಯ್ಯ ಬೀಸಿದ ಗಾಳಿಯ ಸದ್ದು ಅಲೆಯಿತು. ಸ್ವಲ್ಪ ಹೊತ್ತು ಬಿಟ್ಟು "ಮಳೆ ಬಂದದಾ" ಎಂದು ಕೇಳಿದಳು. ಬರಬಹುದು ಅಂದೆ. "ನಾನು ಬಡ್ಕೊಂಡೆ. ಬೇಸಿಗೇಲೆ ಹಂಚು ಕೈಯಾಡ್ಸು ಅಂತ. ಈಗ ಹಟ್ಟಿ ತುಂಬ ಸೋರ್‍ತಾದೆ". ಅವ್ವ ದನಿ ಜೋರು ಮಾಡಿ ಅಂದುದು ಚಿಟ್ಟು ಹಿಡಿಸಿತು. ದಿಕ್ಕಾಪಾಲು ಹಂಚಿಹೋದಂತೆನಿಸಿ ಸರಿಯಾಗಿ ಕುಳಿತೆ. ಸಿಗರೇಟು ಹಚ್ಚಿ ಬಲವಾಗಿ ಹೊಗೆ ಎಳೆದು ಹೊಗೆಯೊಡನೆ ಅವಳ ನೆನಪು ಕೂಡಿಸಲು ನೋಡಿದೆ. ನಡುಗುವ ಚಳಿಯಲ್ಲಿ ಕುಳಿತು "ನನಗೂ ಮದುವೆಗೂ ದೂರ" ಅಂದಳು. "ಎಷ್ಟು ದೂರ" ಎಂದು ಕೇಳಲು ಅನಿಸಿ ಆಗದೆ ಅವಳ ತುಂಬಿಕೊಳ್ಳುತ್ತ ಕುಳಿತೆ. ತಂಬ ಕ್ಲಿಷ್ಟವಾಗಿ ಕಂಡಳು. ಯಾಕೊ ಗೊತ್ತಿಲ್ಲ, ನನಗೆ ದುಃಖವಾದಾಗಲೆಲ್ಲ ನೀನು ಬೇಕು ಅನಿಸುತ್ತೆ ಎಂದು ಹೇಳುವುದು ಹುಚ್ಚಾಗಿ ತೋರಿತು. ಹೇಳಿದರೆ ಬರೀ ಮಾತಾಗಿ ಬಿಡುತ್ತವೆ. ಅನ್ನಿಸುತ್ತಿದ್ದುದನ್ನೆಲ್ಲ ಒಟ್ಟಾಗಿಸಿ ನೋಡಿದೆ. ನನಗೆ ನಿಜವಾಗಿ ಯಾರೂ ಇಲ್ಲ ಅನಿಸುತ್ತೆ. ಇರೋದೆಲ್ಲ ಸುಳ್ಳು ಅನಿಸುತ್ತೆ. ನೀನು ಎಲ್ಲ ಅನಿಸುತ್ತಿ. ಅವ್ವ ಅಕ್ಕ ತಂಗಿ ಮಗು ಗೆಳತಿ ಹೆಂಡತಿ ಎಲ್ಲ. ತುಂಬ ಅಸಹಜವಾಗಿ ಕಂಡವು. ಅವಳಿಗೆ ಏನು ಅನಿಸಬಹುದು ಅಂತ ಅನುಮಾನ ಬಂತು. "ಹೀಗೆ ಪದೇ ಪದೇ ನೋಡುವುದು ಬೇಡಿ, ಗುಲ್ಲಾಗುತ್ತೆ" ಅಂದಳು. ಬಾರದ ನಗುವನ್ನಾದರು ಬರಿಸಿಕೊಂಡು ನಗಬೇಕು. ಅವಳು, ಅವಳ ಅಪ್ಪ ಅಮ್ಮ, ಕತ್ತರಿಸಿ ಇಟ್ಟಿರುವ ಜಾತಿ, ಬಂಧು ಬಳಗ, ಇವುಗಳ ನಡುವೆ ನಾನು ಅವಳು ಹದ್ದುಗಳಿಗೆ ಎಸೆದ ಹೆಣಗಳ ಹಾಗೆ - ಎದ್ದು ನಿಂತು 'ಹೋಗಲಾ' ಅಂದೆ.

ಬಲವಾಗಿ ಬೀಸಿದ ಗಾಳಿಗೆ ದಾರಂದ ಅರೆತೆರೆದು ಮುಚ್ಚಿ, ತುಂಬಿ ಮಿಗುವಷ್ಟು ಗಾಳಿ ಒಳಕ್ಕೆ ಬಂದು ಲಾಟೀನು ಬೆಳಕು ಕತ್ತು ಹಿಚುಕಿಸಿಕೊಂಡ ಥರ ಆಡಿತು. ಅವ್ವ ಜ್ಞಾಪಿಸಿಕೊಂಡು 'ಗೌಡರ ಹಟ್ಟಿಗೆ ಹೋಗಿದ್ಯಾ' ಎಂದು ಕೇಳಿದಳು. ನಿಧಾನಿಸಿಯೆ 'ಹೋಗಿದ್ದೆ' ಎಂದೆ. ಏನಂದರು ಅಂದುದಕ್ಕೆ ಏನು ಹೇಳಬೇಕು ಕಾಣಲಿಲ್ಲ. ಅವ್ವ ಮತ್ತೆ ಅದೇ ಕೇಳಿದಾಗ "ಇನ್ನೇನಂತಾರೆ ಅದೇ" ಅಂದೆ. ಅವ್ವ ಸಿಡುಕಿ 'ಅದೇ ಅಂದ್ರ ಏನ?' ಅಂದಳು. ಎಂಥದು ಮಾತಾಡಲು ಆಗದೆ ಸಹಿಸುವುದಕ್ಕಾಗದಂತೆ ತೋರಿತು. 'ಸುಮ್ಮನೆ ಮಲಿಕವ್ವ' ಅಂದೆ. ಉಸಿರು ಹಿಡಿದುಕೊಂಡೆ "ನನ್ಮಾತು ಅಂದ್ರ ನಿಂಗ್ಯಾಕ ಹಿಂಗ ಹೇಳು". ಜೋರು ಅಂದಳು. ಮಾತು ಹಟ್ಟಿ ತುಂಬೆಲ್ಲ ತುಂಬಿ ದಿಕ್ಕು ದಿಕ್ಕು ಅಲೆಯಿತು. ರೋಸಿ ಎದ್ದು ಹೋಗಿ ಕಿರುಮನೆ ಬಾಗಿಲಿಗೆ ನಿಂತು "ಏನು ಕೇಳು" ಅಂದೆ. ಹಾಗೆ ಮಲಗಿದ್ದಳು. ದಿನಕ್ಕಿಂತ ಹೆಚ್ಚು ಬಿಳಿಚಿಕೊಂಡ ಥರ ತೋರಿತು. ಮೊಖದ ತುಂಬ ದಿನಾ ಬೆಳೆಯುತ್ತಿದ್ದ ಸುಕ್ಕುಗಳು ದಿಗಿಲು ಬೀಳುವಷ್ಟು ಹೆಚ್ಚಾಗಿಬಿಟ್ಟಿದ್ದುವು. ಕಣ್ಣುಗಳು ತೆರೆದುಕೊಂಡು ನೋಡುತ್ತಿದ್ದುವು. ಎದೆ ಏರಿಳಿತಕ್ಕೆ ಹೊದುಪು ನಿಧಾನ ಮೇಲು ಕೆಳಗಾಗುತ್ತಿತ್ತು. 'ಬಾ ಕೂತುಕೊ' ಅಂದಳು. ಹೋಗಿ ಹಾಸಿಗೆಯ ಪಕ್ಕ ಕುಳಿತು ಹೇಗೆ ಹೇಳಬೇಕು ಎಂದು ತೊಡಕಾಡಿದೆ. 'ಹೇಳು' ಅಂದು ನೋಡಿದಳು. ಎಷ್ಟೋ ಹೊತ್ತು ಸುಮ್ಮನಿದ್ದು ಹಾಗೂ ಇರಲು ಆಗದೆ "ನಂಗ ಸರಿ ಅನ್ಸಿದ್ದನ್ನು ಹೇಳೋದು ತಪ್ಪಾ" ಅಂದೆ. "ಸರಿ" ಅಂದಳು. "ನಂಗೆ ಸರಿಕಾಣ್ತು. ಧರ್ಮ ಕರ್ಮ ಮಠ ಸ್ವಾಮಿಗಳೆಲ್ಲ ಸೋಗು ಅಂತ ಹೇಳ್ದೆ". ಅವ್ವ ದುರುದುರು ನೋಡತೊಡಗಿದಳು. "ಯಾವುದೂ ಬೇಡ. ಹೊಲ ಮನೆ ಅಂತ ಇರೋದು ಅಂತ ಬಂದ್ರೆ ಈಗ ಗೌಡ್ರಿಗೆ ಚುಚ್ಕೊಟ್ಟವರೆ...." ಎಂದು ಅಂದು ನೋಡಿದೆ. ತುಂಬ ನೋವು ತಿನ್ನುತ್ತಿದ್ದಳು. ಸುಮ್ಮನೆ ನೋಡಿದೆ. ಅವ್ವ ಜೋರು ಉಸಿರು ತೆಗೆದುಕೊಂಡು ಹಣೆ ಚಚ್ಚಿಕೊಂಡಳು. ಬಹಳ ಕಷ್ಟ ಪಟ್ಟು ಕಣ್ಣು ತೆಗೆದು ಸೂರಿಗೆ ನೆಟ್ಟು ಆಗದೆ ಮತ್ತೆ ನೋಡಿದಾಗ ಅವ್ವನ ಬಿರಿಯುವ ತುಟಿಗಳು, ಕಣ್ಣಿಂದ ದೊಳ ದೊಳ ನೀರು. ದಿಮುಗುಡುತ್ತಿದ್ದ ಅವ್ವ ಕೆಟ್ಟ ದನಿಯಲ್ಲಿ "ಈಗ್ಲೆ ಹೋಗಿ ತಪ್ಪಾಯ್ತು ಅಂತ ಕೇಳ್ಕೊ. ದೇವ್ರಂಥವರತ್ರ ನಿಂದು ನಿಷ್ಠುರ. ಇಷ್ಟಕ್ಕೂ ನಾ ಮಾಡ್ದ  ಕರ್ಮ. ಈಗ್ಲೇ ಹೋಗು". ತವಕಿಸತೊಡಗಿದಳು. "ಆಗೋದಿಲ್ಲ" ಅಂದೆ. ತಕ್ಷಣ "ನಾನೇ ಕೇಳ್ತೀನಿ" ಎಂದುದಕ್ಕೆ "ಯಾರೂ ಕೇಳೊದು ಬೇಕಾಗಿಲ್ಲ" ಎಂದು ಎರಡು ಕೈಗಳಿಂದಲೂ ತಲೆ ಅದುಮಿ ಸಮನಾಗಲು ನೋಡಿದೆ. ಸೊರಕಿನೊಡನೆ ಕಳೆಯುತ್ತಿದ್ದ ಕೆಟ್ಟ ಮೌನ ನಿಂತು ಅವ್ವ "ಹೀಗಂದ್ರೆ ನಾವು ಬದ್ಕೋದು?" ಅವ್ವ ಚೀರಿದ್ದು ಕೇಳಲಾಗಲಿಲ್ಲ. ಚೂಪಾಗಿ ನೋಡಿ "ಈಗ ನಾವು ಬದ್ಕಿದ್ದೀವಾ" ಅಂದೆ. ಅವ್ವನ ಕತ್ತಿನ ನರಗಳು ಬಿಗಿದುಕೊಂಡು ಉಬ್ಬಿದುವು. ಎದ್ದು ದಪ ದಪ ಹೆಜ್ಜೆ ಹಾಕಿ ದಾರಂದ ತೆಗೆದು ಹೊರ ಬಂದು ಕತ್ತಲಲ್ಲೆ ತಡವರಿಸಿ ಜಗುಲಿಯ ಮುಂಡಿಗೆ ಹಿಡಿದು ಕುಸಿದು ನಿಂತೆ, ಬಹಳ ಹೊತ್ತು.

(1970)

# ಒಂದು ದಹನದ ಕಥೆ

ಬಿಟ್ಟ ಕಣ್ಣ ಬಿಟ್ಟಹಾಗೆ ಬಿಟ್ಟು ಮಲಗಿದ್ದೆ. ಗೋಡೆಯ ಮೇಲೆ ಹರಡಿಕೊಂಡಿದ್ದ ಅಡ್ಡಾದಿಡ್ಡಿ ಗೆರೆಗಳ ಮೇಲೆ ದೃಷ್ಟಿ ನೆಟ್ಟಿತ್ತು. ನಿಧಾನವಾಗಿ ಕಪ್ಪುಗಟ್ಟುತ್ತಿದ್ದ ಲಾಟೀನ ಬೆಳಕಿಗೆ ಗೆರೆಗಳು ಕ್ಷಣ ಕಳೆದಂತೆ ಮಸುಕಾಗುತ್ತಿದ್ದವು. ನೋಡುತ್ತ ನೋಡುತ್ತ ನೋಡುತ್ತಿದ್ದಂತೆ ಗೆರೆಗಳಿಗೆ ರೂಪ ಬಂದಂತೆ. ಬಂದ ರೂಪವನ್ನು ಎಲ್ಲೊ ನೋಡಿದ್ದ ಹಾಗೆ. ಅದಕ್ಕೆ ಎಲ್ಲಿಲ್ಲದ ಆವೇಶ ಬಂದಂತೆ. ಹೆದರಿ ಕಣ್ಣು ಮುಚ್ಚಿದರೆ ಭಯಂಕರ ಬೆಳೆದು ಮನೆ ತಂಬ ನಿಂತು ಅಲ್ಲಾಡಿಸಿ ಕುಣಿದು ಅಂಗಳಕ್ಕೆ ಧುಮುಕಿ ಅಲ್ಲಿ ಉರಿಯುತ್ತಿದ್ದ ಸೌದೆ ಸೀಳು ಹಿಡಿದು ಮತ್ತೂ ಕುಣಿಯತೊಡಗಿದರೆ ಅದರ ಸುತ್ತ ಅದರಂತೆ ನಾಲ್ಕಾರು ರೂಪಗಳು. ಕಣ್ಣುಗಳು ಭೊಗ ಭೊಗ ಉರಿದಂತೆ ಅನಿಸಿ ಬೆದರಿ ಕಣ್ಣು ಬಿಟ್ಟರೆ ಮತ್ತೆ ಅದೇ ಗೋಡೆ ಮೇಲಿನ ಗೆರೆಗಳು.

ಯಾಕೆ ಹೀಗೆ? ಬೆಚ್ಚಗೆ ಕಂಬಳಿ ಹೊದ್ದು ಮಲಗಿಸಿ ಮೈ ತಟ್ಟುತ್ತ ಅಜ್ಜಿ ಹೇಳುತ್ತಿದ್ದ ಅಡವಿ ಅರಣ್ಯ ಕತೆಯಲ್ಲಿ ದಿಕ್ಕು ತಪ್ಪಿದ ಹಾಗೆ. ಹಟ್ಟಿತುಂಬ ಅಂಗಳತುಂಬ ದನಿ ತುಂಬಿಕೊಂಡ ಹಾಗೆ. ವಾಸನೆ ಹೋಗಲಿ ಅಂತ ಪೊಟ್ಟಣಗಟ್ಟಲೆ ಹಚ್ಚಿದ್ದ ಊದುಬತ್ತಿ ವಾಸನೆಯೆ ವಾಂತಿ ಬರಿಸುತ್ತಿತ್ತು. ಅಂಗಳದಿಂದ ಬರುವ ಸೌದೆಸೀಳಿನ ಹೊಗೆ ಉಸಿರು ಸಿಕ್ಕಿಸುತ್ತಿತ್ತು. ನಿಂತರೂ ಕಂತರೂ ಎಂಥದೊ ಚಡಪಡಿಕೆ. ದೇಹ ಪೂರ್ತ ತಳಮಳಿಸುತ್ತಿತ್ತು. ಹೊರಗಾದರೂ ಹೋಗಿ ಕೆಂಡ ಕಾರುವ ಬೆಂಕಿ ನೋಡುತ್ತಾ ಇಲ್ಲವೆ ಸೊರಟಿಗೊಂಡು ಜಗಲಿ ಮೇಲೆ ತಣ್ಣಗೆ ಮಲಗಿರುವ ಅಜ್ಜಿಯ ದೇಹ ನೋಡುತ್ತ ಕೂರಬೇಕೆನಿಸಿತು. ಮನಸ್ಸಾದರೂ ಹಾಗೆ ಮಾಡಲಾಗುತ್ತಿಲ್ಲ. ಇಲ್ಲೆ, ಈ ಮಂಚದ ಮೇಲೆಯೆ ಅಂಟಿಸಿಬಿಟ್ಟಂತಾಗಿದೆ. ಗೋಡೆ ಗೆರೆಗಳು ಹೊರಗೆ ಹೋಗಲು ಬಿಡದೆ ಸುತ್ತುಗಟ್ಟಿವೆ ಅನಿಸುತ್ತದೆ. ಹನ್ನೆರಡು ವರ್ಷದಿಂದ ಕೊಳೆತು ಮುಗ್ಗಲುಗಟ್ಟಿರುವ ಹಟ್ಟಿ ತನ್ನೊಳಗೇ ಒಂದು ಕಾಡನ್ನು ಸೃಷ್ಟಿಸಿಕೊಂಡು ಅಲ್ಲಿಂದ ಇಲ್ಲಿಯವರೆಗೆ ಪೂರ್ವಿಕರು ಮಾಡಿದ ಪಾಪದ

ಹಾಗೆ-ಮೂಲೆಯಲ್ಲಿ ಒಂದೆರಡು ನನ್ನುದ್ದದ ಎಕ್ಕದ ಗಿಡಗಳು. ಅದರ ಪಕ್ಕದಲ್ಲಿ ಮಂಡಿ ಉದ್ದದ ಹುತ್ತ. ಮನೆ ತುಂಬ ಬಲೆ ನೇದಿರುವ ಜೇಡಗಳು. ಮೇಲಿಂದ ಕೆಳಕ್ಕೆ ಕಪ್ಪಗೆ ಇಳಿಬಿದ್ದಿರುವ ಎಂಥದೊ ದಾರದ ಥರ. ತೊಟ್ಟಿಯ ಪಕ್ಕ ಉದುರಿ ಉದುರಿ ಚಿಂದಿ ಹಿಡಿದು ನೆಲಕ್ಕಂಟಿದ ತೊಂಬಗಳ ಅವಶೇಷ. ಸುತ್ತಮುತ್ತ ಸಕತ್ತು ಚೂರುಪಾರು ಹೆಂಚು. ಅದರ ಮೇಲೆ ಕವುಚಿ ಅಂಗೈ ಮಂದದ ಬೂದುದೂಳು. ಕುಟ್ಟ ಹಿಡಿದು ಹಳದಿ ಪುಡಿ ಉದುರಿಸುತ್ತ ಒಟ್ಟಿನಲ್ಲಿ ನಿಂತ ಮುಂಡಿಗೆ ಕಂಬಗಳು. ಮನೆ ತುಂಬ ಇಲಿಗಳು ದರಿಕೊರೆದು ಹೊರಕ್ಕೆ ಕೆಡವಿದ ರಾಶಿ ಮಣ್ಣು. ಚಿಕ್ಕಂದಿನ ನಾನು ಹುಟ್ಟಿ ಬೆಳೆದ ಹಟ್ಟಿ ಕಣ್ಣಲ್ಲಿ ಇಳಿದು ಇದು ಹೌದೆ ಅಂತ ಅನುಮಾನ ಹುಟ್ಟಿಸುತ್ತದೆ. ಹೊರಗೆ ತಮಟೆ ಸದ್ದು. "ನ್ಯಾಯಕ್ಕೆ ಬನ್ನಿ. ಎಲ್ಲಾ ಸೇರ್ತಾ ಅವ್ರೆ" ಎಂದು ಅನ್ನುತ್ತ ಚಕ್ರ ನಮ್ಮ ಹಟ್ಟೀ ಮುಂದೂ ಹಾದುಹೋದುದ ಕಿಟಕಿ ತೆರೆದು ಕಣ್ಣು ಹೊರ ಹಾಕಿದ್ದರೆ ನೋಡಬಹುದಿತ್ತು.

....ಮುಖದಲ್ಲಿ ಕೆಲಸ ಸಿಕ್ಕಿದ ಕಳೆ ಹೊತ್ತು ಊರಿಗೆ ಬಂದರೆ ದೊಡ್ಡಪ್ಪ ಅಳೆದು ಸುರಿದು ನೋಡಿದ. ಒಳಗೊಳಗೇ ಅಳುಕು. ಅಚ್ಚರಿ ಹುಟ್ಟಿಸುವ ಹಾಗೆ ಅಜ್ಜಿ ಬಾಯಿಕಟ್ಟಿ ಕುಳಿತಿದ್ದಳು. "ಕೆಲ್ಸ ಏನೋ ಸಿಕ್ತು. ಆದ್ರೆ ತುಂಬಾ ದೂರ" ಅಂದೆ. ಯಾರೂ ಮಾತೇ ಇಲ್ಲ. ಮತ್ತೂ ಅದೇ ಅವರ ವಕ್ರದೃಷ್ಟಿ ಸಹಿಸಲಾಗಲಿಲ್ಲ. ಚಿಮ್ಮಿದಂತೆ "ಏನಾಗಿದೆ ನಿಮಗೆಲ್ಲ" ಅಂದೆ. ದೃಷ್ಟಿ ತೆಗೆಯದೆ ದೊಡ್ಡಪ್ಪ ಸರಾಗವಾಗಿ 'ಚೆನ್ನಾಗಿದೆ' ಅಂದ. ಉಸಿರು ಕಟ್ಟತೊಡಗಿ ದೊಡ್ಡತಗೆ ಉಸಿರು ಬಿಟ್ಟು ಪೆಟ್ಟಿಗೆ ಮೇಲೆ ಕೂತು "ಅಲ್ಲಾ" ಅಂತ ದೊಡ್ಡಪ್ಪ ಅಂದಾಗ ತಿರುಗಿ ಅವನನ್ನೇ ನೋಡಿದಾಗ ಕೆಮ್ಮಿ "ದೇವರು ಬಂದಂಗೆ ಊರಿಗೆ ಬರ್ತಿದ್ದವ, ಇಂದೇ ಬರಬೇಕಿತ್ತ" ಅಂದ. ಏನಾಯ್ತು ಏನಾಗಿದೆ ಮುಖದಿಂದ ಮನೆ ಸುತ್ತ ಕಣ್ಣಾಡಿಸಿ ಮತ್ತೆ ದೊಡ್ಡಪ್ಪನ್ನೆ ನೋಡಿದೆ. "ನಾವೆಲ್ಲ ಮೊಖ ಎತ್ತಿ ತಿರಗದಂಗೆ ಮಾಡ್ದೆ. ಅಪ್ಪ ಅವ್ವ ಇಲ್ಲದ ತಬ್ಬಲಿ ಅಂತ ನಿನ್ಗಾಗಿ ಅತ್ತೇರೂ ಜೀವ ತೇದದ್ದಕ್ಕೆ, ನಾನೂ ಅಷ್ಟು ಇಷ್ಟು ನನ್ನ ಕೈಲಾದ ಸಹಾಯ ಮಾಡಿದ್ದಕ್ಕೆ ಸರಿಯಾಗೆ ಮಾಡ್ದೆ! ಇನ್ನೇನ ತಕ್ಕೊ. ನೀ ಯಾನ ಇಲ್ಲೆ ಇರ್ತಿದ್ಯಾ. ಅನುಭೋಸವರು ನಾವು ತಾನೆ?". ಕೊಂಕಣ ಸುತ್ತಿ ಮೈಲಾರಕ್ಕೆ ಬರುವ ಮಾತುಗಳು. ಅಸಹ್ಯವನ್ನು ಹೊಟ್ಟೆಯಲ್ಲಿ ತುಂಬಿಟ್ಟುಕೊಂಡಹಾಗೆ ಕೂತೆ.

ಅಷ್ಟು ಹೊತ್ತಿಗೆ ಹೊರಕ್ಕೆ ಹೋಗಿದ್ದ ದೊಡ್ಡವ್ವ, ಅಕ್ಕ, ನಾಗಿ ಒಬ್ಬೊಬ್ಬರೆ ಒಳ ಬಂದರು. ಕಂಡವಳೆ ದೊಡ್ಡವ್ವ "ಈಗ ಬಂದ್ಯಾ" ಅಂದು ಮಿನುಗುಡುತ್ತಿದ್ದ ದೀಪ ಬೆಳಕು ಎತ್ತರಿಸ ಹೋದಳು. ನಾಗಿ ನನ್ನ ಕಡೆ ನೋಡಿ ಸರಕ್ಕನೆ ಕಣ್ಣು ಬದಲಾಯಿಸಿ ನಡುಮನೆ ಹೊಸ್ತಿಲ ಬಳಿ ಕೂತು ದೀಪದ ಬೆಳಕ ದೊಡ್ಡದು ಮಾಡುತ್ತಿದ್ದ ದೊಡ್ಡವ್ವನನ್ನೇ ನೋಡಿದಳು. ಇವರೆಲ್ಲ ಹೀಗೆ ನಡೆದುಕೊಳ್ಳುತ್ತಿರುವುದು ಒಂದೂ ಅರ್ಥವಾಗುತ್ತಿಲ್ಲ. ದೊಡ್ಡಪ್ಪ ದನಿ



ತೆಗೆದು "ಇವೊತ್ತು ನ್ಯಾಯ" ಅಂದ. ಸುಮ್ಮನೆ ನೋಡಿದೆ. ಮುಂದಕ್ಕೆ ಮಾತಾಡದ್ದ ಕಂಡು "ಯಾಕೆ ನ್ಯಾಯ" ಅಂದೆ. ಸೀಳಿದ ಹಾಗೆ "ಯಾಕೆ? ಅಂತ ಬೇರೆ ಕೇಳ್ತಿ ಅಲ್ಲಯ್ಯಾ! ನೀ ಮಾಡ್ದ ಅತಂತ್ರಕ್ಕೆ. ನಾ ಏನಾದ್ರೂ ಇಲ್ದಿದ್ರೆ ನಿನ್ನ ಮಾನಾನೂ ಇಲ್ಲ. ನನ್ನ ಮಾನಾನೂ ಇಲ್ಲ. ಆ ನಿನ್ನ ಕಮ್ಲಿ ಬೆಂಮನ್ಸೆಯಾಗವ್ಳೆ. ಜಾತಿಯಲ್ಲದ ಜಾತಿ, ಓದ್ದೋವ ನೀನು. ತಿಳುವಳ್ಕೆ ಇಲ್ದವನ ಹಂಗೆ ಚೆ ಚೆ ತಗಿ ತಗಿ" ಎಂದು ದೊಡ್ಡಪ್ಪ ಸುಸ್ತಾದವನಂತೆ ಉಸಿರು ಬಿಟ್ಟು ಮೇಲಕ್ಕೂ ಕೆಳಕ್ಕೂ ನೋಡಿ ಕೊನೆಗೆ ತೊಟ್ಟಿ ಬಾಯಿಂದ ಕಾಣುವ ಆಕಾಶ ನೋಡುತ್ತ ಕೂತಾಗ ಕಕ್ಕಾವಿಕ್ಕಿ ಆಯಿತು. ತಳಮಳಿಸತೊಡಗಿ ಕೂರಲಾಗದೆ ಸಿಗರೇಟನ್ನಾದರೂ ಸೇದಬೇಕೆಂದೆನಿಸಿ ಮೇಲಕ್ಕೆ ಎದ್ದಾಗ ದೊಡ್ಡಪ್ಪ ನನ್ನ ಕಡೆ ನೋಡಿ "ಈಗೇನು ಆಗಿಲ್ಲ ತಕ್ಕೊ. ಅವರ ಜಾತೀಲೆ ಒಬ್ಬ ಕಾರಣ ಅಂತ ಒಪ್ಪಿಸಿಬಿಟ್ಟೆವಿನಿ. ಆ ಕಾಟವೇ ಇಲ್ಲ" ಅಂದು ಮಾತು ನಿಲ್ಲಿಸಿ ಮತ್ತೆ ಆರಂಭಿಸಿ ತಡೆದೂ ತಡೆದೂ "ಅಂದಹಾಗೆ ಜಾತಕ ಕೂಡಿ ಬಂತು, ಹೆಂಗೂ ಎಲ್ರೂ ಒಪ್ಪವ್ರೆ. ಲಗ್ನ ಕಟ್ಸಾಯ್ತು. ನನ್ನ ಆಸ್ತಿ ಇನ್ನಾರಿಗೆ ಸೇರಬೇಕು ಹೇಳು. ನಮುಗ್ಯಾವ ಗಂಡು ಮಕ್ಕಳು ಇದ್ದಾವ್ರು? ಏನೆ ಆಗ್ಲಿ ಕಾಡು ಮಾಡಕ್ಕೆ ಆಗೋಲ್ಲ ನೋಡು" ಎಂದು ನನ್ನ ನೋಡಿದಾಗ ನಡುಕ ಬಂದಂತೆ, ಕಣ್ಣಿಗೆ ಕತ್ತಲು ಹಿಡಿದಂತೆ. ತಡಬಡಾಯಿಸಿಕೊಂಡು ಹೊರಕ್ಕೆ ಬಂದೆ. ಕಡ್ಡಿ ಕೊರೆದು ಸಿಗರೇಟು ಹಚ್ಚಿ, ಹಚ್ಚಿದ ಬೆಳಕಲ್ಲೆ ನನ್ನ ಮುಖ ನೋಡಿಕೊಳ್ಳಬೇಕೆನಿಸಿತು....

ಯಾವ ಕಡೆ ಹೊರಳಿದರೂ ಗೆರೆಗಳು. ನೋಡುನೋಡುತ್ತಿದ್ದಂತೆಯೇ ರೂಪು ಪಡೆದುಕೊಳ್ಳುವ ಜೀವ ಪಡೆದುಕೊಳ್ಳುವ ಗೆರೆಗಳು. ಇದಕ್ಕೆ ಕೊನೆಯೆ ಇಲ್ಲವೆ. ಮೊಗ್ಗಲು ಬದಲಾಯಿಸಿದೆ. ಮಯ್ಯಿ ಹೆಣಬಾರ. ಶಕ್ತಿ ಎಲ್ಲಾ ಎಲ್ಲೊ ಹುದುಗಿ ಹೋಗಿ ಮಾಂಸದ ತುಂಬ ನೋವು ಮರಿಮಾಡುತ್ತಿರುವಂತೆ. ಹೀಗೆ ಮೊಗ್ಗಲು ಬದಲಿಸಿ ಬದಲಿಸಿ ಕಾಲ ನೂಕುವುದರ ಬದಲು ಹೊರಕ್ಕಾದರೂ ಹೋಗಿ ಕೂತುಕೊಳ್ಳಬೇಕೆನಿಸಿ ಎದ್ದು ಹಜಾರಕ್ಕೆ ಬಂದೆ. ಕೊಟ್ಟಿಗೆ ಕಡೆ ಒಂದಿಷ್ಟು ಹಾರಾಡುವ ಪಟಪಟ ಬಡಿದುಕೊಳ್ಳುವ ಕೀಚುಬಾಲದ ಹಕ್ಕಿಗಳು. ಹಜಾರದಲ್ಲಿ ನೇತುಹಾಕಿದ್ದ ಲಾಟೀನು ಗಾಜು ಮಸಿ ತುಂಬಿಕೊಂಡು ಕಪ್ಪುಬೆಳಕನ್ನೆ ಕಕ್ಕುತ್ತಿರುವ ಹಾಗೆ ಕಂಡು ದಿಗಿಲಾಯಿತು. ಹುತ್ತ ಎಕ್ಕದ ಗಿಡ ಇದ್ದ ಕಡೆ ನೋಡಲಾಗಲಿಲ್ಲ. ಒಂದೆರಡು ಕೀಚುಬಾಲದ ಹಕ್ಕಿ ಹತ್ತಿರದಲ್ಲೇ ಹಾರಿ ಹೋಗಿ ಭಯ ಆಯಿತು. ತಕ್ಕನೆ ಲಾಟೀನು ಬತ್ತಿ ಎತ್ತಿ ದೊಡ್ಡದು ಮಾಡಿದೆ. ಧಗಧಗ ಹೊಗೆ ಕಡೆಯತೊಡಗಿತು. ನೇತು ಹಾಕಿದ್ದ ಗಳದಿಂದ ಲಾಟೀನು ಕಸಿದು ಹೊರಕ್ಕೆ ಬಂದೆ. ಅಂಗಳದಲ್ಲಿ ಇರಿಸಿದ್ದ ಸೌದೆಗಳು ತಮ್ಮ ಸುತ್ತ ಕೆಂಡ ಹರಡಿಕೊಂಡು ಅಂಗಳ ಕೆಂಪು ಮಾಡಿದ್ದವು. ಜಗಲಿ ಮೇಲೆ ತಲೆ ಮಾತ್ರ ಕಾಣಿಸುವ ಹಾಗೆ ಹೊದಿಸಿದ್ದ ಬಿಳಿ ಬಟ್ಟೆಯೊಳಗೆ ಅಜ್ಜಿಯ ದೇಹ ಅಡುಗಿತ್ತು. ತಲೆದೆಸೆಯಲ್ಲಿ ಉರಿಯಲು ಸೆಣಸುತ್ತ ಕೈಯೆಣ್ಣೆ ದೀಪ ಉರಿಯುತ್ತಿತ್ತು. ದೀಪದ

ಪಕ್ಕದಲ್ಲಿ ಏಳೆಂಟು ಊದುಬತ್ತಿ ಪೊಟ್ಟಣ, ಅವಕ್ಕೆ ಸಿಕ್ಕಿಸಿರುವ ಉರಿದೂ ಉರಿದೂ ಉರಿಯುತ್ತ, ಬೂದಿದಾರ ಕೆಳಕ್ಕೆ ಇಳಿಬಿಟ್ಟ ಊದುಕಡ್ಡಿಗಳು, ನೋಡಲಾಗದೆ ಮೇಲಕ್ಕೆ ನೋಡಿದೆ. ಬಚ್ಚಲಲ್ಲಿ ಮಿಸುಕಾಡುವ ಬಿಳಿ ಹುಳಗಳಂತೆ ನಕ್ಷತ್ರಗಳು.

ತಣ್ಣಗೆ ಗಾಳಿ ಬೀಸಿಹೋಯಿತು. ಚಾವಡಿಯಲ್ಲಿ ಏನೊ ಗದ್ದಲ. ಯಾರೊ ಒಬ್ಬ ಕೀರಲು ದನಿಯಲ್ಲಿ ಬಡಬಡ ಮಾತಾಡುತ್ತಿದ್ದ. ಕಿವಿಗೊಟ್ಟು ಕೇಳಿದರೂ ಯಾರ ದನಿ ಅಂತ ತಿಳಿದು ಬರಲಿಲ್ಲ. ಸ್ವಲ್ಪ ದೂರ ನಡೆದು ಹೋಗಿ ಆಲಿಸಿದೆ. "ಅದದ್ದು ತಿರುಗಿ ಬರೊಲ್ಲ. ಏನೊ ಆಯ್ತು. ತಪ್ಪು ತಕ್ಕಳವ. ಸತ್ತ ಹೆಣನಾ ಮುಂದು ಮಡಿಕಂಡು ನಮ್ಮ ವೈಮನ್ಸು ಬೇಡ" ಎಂದು ಒಬ್ಬರು. ಅದಕ್ಕೆ ನಾಲ್ಕಾರು ಜನ ಒಟ್ಟೊಟ್ಟಿಗೆ ಮಾತಾಡಿ ಏನೆಂದು ತಿಳೀಲಿಲ್ಲ. ಆದದ್ದು ಆಗುತ್ತೆ, ಯಾಕೆ ಹೀಗೆ ನಿಲ್ಲುವುದು ಅಂದುಕೊಂಡು ಬಂದು ಲಾಟೀನು ಗಾಜಿನ ಮಸಿ ವರಸಿದೆ. ಕಡ್ಡಿ ಗೀರಿ ಲಾಟೀನು ಹಚ್ಚಿ ಆ ಬೆಂಕೀಲೆ ಸಿಗರೇಟು ಹಚ್ಚಿದೆ. ಲಾಟೀನು ಪಳ ಪಳ ಹೊಳೆಯತೊಡಗಿತು. ದೊಡ್ಡಪ್ಪನ ಸುಕ್ಕುಗಟ್ಟಿದ ಯೋಚನೆಗಳು ತಲೆಗೆ ಬಂದವು.

....ಜಗತ್ತು ಗೆದ್ದವನಂತೆ ದಾಪುಗಾಲು ಹಾಕುತ್ತ ಬಂದ ದೊಡ್ಡಪ್ಪ "ಎಲ್ಲ ಮುಗೀತು. ದೇವರ ದಯ" ಅಂದ. ಸಂಕಟ ಆಯಿತು. ಕಮಲಿ ಒಪ್ಪಿಕೊಂಡ್ಲಾ ಅಂದೆ. ದೊಡ್ಡಪ್ಪ ಹುಬ್ಬೇರಿಸಿ ನಕ್ಕು "ಒಪ್ಪದೆ? ಅಷ್ಟಕ್ಕೂ ನಾಯೇನ ತಪರನಾ? ಒಪ್ಪಿದ್ರು. ಅವ್ರು ಬೇರೆ ಜಾತಿಯವರಾದ್ದರಿಂದ ಅವರ್ಗೂ ಅವಮಾನ ನೋಡು" ಎಂದು ನಿರಾಯಾಸ ಅಂದು ಒಳಕ್ಕೆ ಹೋದ. ಬಾಗಿಲಲ್ಲಿ ನಿಂತಿದ್ದ ದೊಡ್ಡವ್ವ ತಾನೂ ಸರಕ್ಕನೆ ಒಳಹೋದಳು. ದೇವರಿಗೆ ತುಪ್ಪದ ದೀಪ ಹಚ್ಚುವುದಕ್ಕೆ ಇರಬೇಕು. ನೆಲ ಸಿಡಿಯತೊಡಗಿತು. ಬಹಳ ಹೊತ್ತು ಹೀಗೆ. "ಚಳೀಲಿ ಯಾಕೆ ಕುಂತಿದ್ದಿ, ಬಾ ಒಳಕ್ಕೆ" ಎಂದು ಮತ್ತೆ ಬಂದು ದೊಡ್ಡಪ್ಪ ಅಂದು ಮಲಗಲು ಹೋದ. ಹೊಟ್ಟೆಯೊಳಗೆ ಸಿಗರೇಟಿನ ಹೊಗೆ ಬೆಂಕಿ ಹಚ್ಚುತ್ತಿರುವ ಹಾಗೆ. ಸಣ್ಣಕ್ಕೆ ಎರಚಲು ಮಳೆ ಸುರುವಾಯಿತು. ಗವಗುಟ್ಟುವ ಕತ್ತಲಲ್ಲಿ ಕಾಲಿಟ್ಟೆ. ಹಟ್ಟಿ ಕಂಟಕ ಕಳೆದ ಹಾಗೆ ನಿರಾಳ ಮಲಗಿತ್ತು.

ಕಮಲಿ ಕಂಡವಳೆ ಮುಖ ಮುಚ್ಚಿಕೊಂಡಳು. ಸುಮಾರು ಹೊತ್ತು ಬಿಕ್ಕಳಿಸುತ್ತ ಇದ್ದು ಆಮೇಲೆ ತಲೆ ಎತ್ತಿ ದಿಟ್ಟಿಸಿ ನೋಡಿದಳು. ಮೈಮೇಲೆ ಬಂದಂತೆ "ಹೋಗಿ ಹೋಗಿ ಬರ್ಬೇಡಿ" ಎಂದು ಸಿಡಿದು ನಿಂತಳು. ಮೈ ತುಂಬ ಕೂದಲು ಸಿಕ್ಕ ಸಿಕ್ಕ ಕಡೆ ಹರಡಿಕೊಂಡಿತ್ತು. ಅತ್ತೂ ಅತ್ತು ಆದ ಕೆಂಪು ಕಣ್ಣಲ್ಲಿ ದೊಳ ದೊಳ ಕಣ್ಣೀರು ಸುರಿಸುತ್ತ ನೋಡಿದಳು. ಮೆಲ್ಲಗೆ "ಕಮಲೀ" ಅಂದೆ. ತುಟಿಯಲ್ಲಿ ಕಿಚ್ಚು ನಗೆ ತಂದುಕೊಂಡು "ನಾನು ಬದ್ಕಿದ್ದೀನಿ



ಅಂತ ನೋಡೋಕೆ ಬಂದಿದ್ದೀರಾ" ಅಂದಳು. 'ಶ್' ಅಂದೆ. "ನಂಗೆ ಹುಚ್ಚು ಹಿಡಿಸಬೇಡಿ. ನಿಮ್ಮ ದಮ್ಮಯ್ಯ ಹೋಗಿ" ಅನ್ನುತ್ತ ಕಾಲು ಹಿಡಿಯಲು ಚಾಚಿದಳು. ಅವಳ ಕೈಗಳೆರಡನ್ನು ಭದ್ರವಾಗಿ ಹಿಡಿದುಕೊಂಡೆ. ದೀನವಾಗಿ ಆಂತು ನೋಡಿದಳು. ಎದೆ ಹತ್ತಿರಕ್ಕೆ ಅವಳ ಕೈ ತಂದುಕೊಂಡು "ನಡೀ ಮತ್ತೆ, ಹೋಗುವಾ" ಅಂದೆ. ಬೆಚ್ಚಿ ಕೈ ಕೊಸರಿ ದುರದುರ ನೋಡಿದಳು. ಅವಳ ನಾಲಿಗೆ ತುಟಿಗಳು ಒದ್ದಾಡಿದವು. "ನಾನಿರುವಲ್ಲೆ ನೀನೂವೆ, ಹೆಚ್ಗೆ ಮಾತೇ ಬೇಡ" ಎಂದು ಅವಳ ಕೈಗಳನ್ನು ಬಿಗಿ ಹಿಡಿದು ಹೊರಬಂದೆ. ಕತ್ತಲು ಸರಿದು ಹಾದಿ ಮಾಡಿಕೊಡುತ್ತಿರುವಂತಿತ್ತು. ಹೇಗೂ ತಡವಿಕೊಂಡು ಟಾರುರಸ್ತೆಗೆ ಬಂದಾಗ ಅದೃಷ್ಟಕ್ಕೆ ಟ್ಯಾಕ್ಸಿ ಸಿಕ್ಕಿತು. ಕಾರು ಬೆಳಕಿಗೆ ಕಾಣುವ ಕಪ್ಪು ಟಾರುರಸ್ತೆಯಲ್ಲಿ ದೃಷ್ಟಿನೆಟ್ಟು ಕಮಲಿ ಮಿಸುಕಾಡದೆ ಕೂತಳು. ರೋಡಿನುದ್ದಕ್ಕೂ ಆಕಾಶ ಮರೆ ಮಾಡಿದ ಮರಗಳು. ಗವಿಯಲ್ಲಿ ಹೋದಹಾಗೆ. ಹೆದರಿಕೆಯಾಗುತ್ತ ಕಮಲಿ ಅಂದೆ. ದೃಷ್ಟಿಕಿತ್ತು ನನ್ನ ಕಣ್ಣಿಗೆ ನೆಟ್ಟಳು. ನೀನು ಏನೇ ಹೇಳು, ನಾನು ಮಾಡಿದ್ದು ಸರಿ ಅನ್ನುತ್ತೆ ಅಂದೆ. ಸುಮ್ಮನೆ ನೋಡಿದಳು....

ಚಳಿಯಾಗತೊಡಗಿತು. ಚಲನೆ ಕಳೆದುಕೊಂಡ ಅಜ್ಜಿಯ ದೇಹದ ಕಡೆ ನೋಡಿದೆ. ಹಾಗೇ ಕೊರಡಿನ ಹಾಗೆ ಚೂರು ಬದಲಿಲ್ಲ. ಊದುಬತ್ತಿ ಉರಿದು ಕೊನೆ ಕಂಡಿತ್ತು. ಕೆಂಡಕ್ಕೆಲ್ಲ ಬೂದಿ ಮುಚ್ಚಿಕೊಂಡು ಅಂಗಳವೆಲ್ಲ ಮಸುಕಾಗಿತ್ತು. ಹೋಗಿ ಕೆಂಡ ಕೆದಕಿ ಮತ್ತಷ್ಟು ಸೌದೆ ಸೀಳು ಹಾಕಿ ಬಂದು ಹಾಗೆ ಕೂತೆ. ನ್ಯಾಯ ಮುಗಿದಂತೆ ಕಾಣಲಿಲ್ಲ. ಹೊಗೆಯನ್ನು ಹೊಮ್ಮಿಸುತ್ತಿದ್ದ ಸೌದೆ ಹೊತ್ತಿಕೊಳ್ಳುವುದ ನೋಡತೊಡಗಿದೆ.

....ವಾರ ಕಳೆಯುವುದರೊಳಗೆ ಅಜ್ಜಿಯಿಂದ ಕಾಗದ ಬಂತು. ನೀನು ಮಾಡಿದ ಕೆಲಸಕ್ಕೆ ಇಲ್ಲಿ ನ್ಯಾಯ ಮಾಡಿ ನನ್ನನ್ನು ಕಟ್ಟು ಮಾಡಿ ಈಗ ನೀರು ಬೆಂಕಿಗೇ ತೊಂದರೆ. ಸರಿಯಾಗಿ ಕಣ್ಣು ಕಾಣಿಸದ ನಾನು ಏನು ಮಾಡಬೇಕು? ನಿನ್ನ ದೊಡ್ಡಪ್ಪನಂತೂ ಕೆಂಡ ಕಾರುತ್ತಾನೆ. ಕೊಡಬೇಕಾಗಿದ್ದ ಸಾಲ ಅಂತ ನಿನ್ನ ಹೊಲಾನ ಉಳ್ತಾನಂತೆ. ತನ್ನ ಮೊಮ್ಮಗಳ ಮದ್ವೆ ಆಗಲಿಲ್ಲವಲ್ಲ ಅಂತ ಅವನ ಕಿಚ್ಚು. ಈ ಕಿಚ್ಚಿನ ಮಧ್ಯೆ ನಾನು ಹೆಂಗಿರಲಿ ಹೇಳು. ಸಾಯೋಕಾಲದಲ್ಲಿ-ಹೀಗೆಲ್ಲ ಏನೆಲ್ಲ ಕಾಗದ ತುಂಬ. ಅಜ್ಜಿ ಕರೆದುಕೊಂಡು ಹೋಗಲು ಧೈರ್ಯಮಾಡಿ ಊರಿಗೆ ಬಂದರೆ ಊರೆ ಮುನಿಸಿನಿಂದ ನೋಡಿ ಮಾತಾಡಿಸದೇ ಹೋದಾಗ ನಗುಬಂತು....

ಮೇಲಕ್ಕೆ ಆಂತು ನಕ್ಷತ್ರಗಳನ್ನಾದರೂ ನೋಡಬೇಕು. ಆದರೆ ಭಯ, ಹಾಳು ಬಚ್ಚಲ ಹುಳು ನೆನಪಿಗೆ ಬರುತ್ತವೆ. ಮಿಲಮಿಲ ಒದ್ದಾಡುತ್ತವೆ. ಕಕ್ಕಾವಿಕ್ಕಿ ಮಾಡುತ್ತವೆ.

ಉಸಿರು ಕಟ್ಟಿಸುತ್ತವೆ. ಜೊತೆ ಜೊತೆಗೆ ಬರುವ ದೊಡ್ಡಪ್ಪನ ಸುಕ್ಕುಕಟ್ಟಿದ ಯೋಚನೆಗಳು. ಅಸಹನೆಯಿಂದ ಅಜ್ಜಿಯ ದೇಹದ ಕಡೆ ನೋಡಿದೆ. ಕನಿಕರವೆನಿಸಿತು. ನನ್ನ ಬಗ್ಗೊ ಹೆಣದ ಬಗ್ಗೊ. ಅಜ್ಜಿ ಹೀಗೆ ಮಾಡಬಾರದಿತ್ತು. ಹನ್ನೆರಡು ವರ್ಷ ಕಮಲಿ ಜೊತೆಗೇ ಹೊಂದಿಕೊಂಡು ಬದುಕಿದವಳು, ಸಾಯೋಕಾಲದಲ್ಲಿ ಸತ್ತರೆ ನನ್ನ ನೆಲದಲ್ಲೆ ಸಾಯೋದು ಅಂತ ಪಟ್ಟು ಹಿಡಿಯಬಾರದಿತ್ತು. ಅನ್ನ ನೀರು ಬಿಟ್ಟು ಕಾಣದ ಕಣ್ಣಲ್ಲಿ ಏನೇನೋ ಕಾಣುತ್ತ ಕೂತದ್ದು ಕಂಡು ಕಮಲಿ ತಾನೂ ಏನನ್ನು ಮುಟ್ಟದೆ, 'ಕೊನೆ ಆಸೆ, ಕರೆದುಕೊಂಡುಹೋಗಿ' ಎಂದು ತುದಿಗಾಲಲ್ಲಿ ನಿಂತಳು.

ಈಗ ಹನ್ನೆರಡು ವರ್ಷದ ಕಟ್ಟ ಬಿಟ್ಟುಕೊಡಲ್ಲ ಅಂತ ಯಾರೋ ಪಟ್ಟು ಹಿಡಿದಿರಬೇಕು. ದೊಡ್ಡಪ್ಪನ ಮಾತುಕತೆ ಹೇಗಿರಬಹುದೆಂದು ಕುತೂಹಲ ಬಂತು. ಇದೊಂದು ಕೊನೆಗಾಣದ ನ್ಯಾಯವಾಗಿ ಬಿಟ್ಟರೆ ಅಂತ ತಲೆಗೆ ಯೋಚನೆ. ಮೇಲಕ್ಕೆ ಎದ್ದು ಚಳಿಗೆ ಮೈಕೊಡವಿ ಲಾಟೀನು ಬತ್ತಿ ಏರಿಸಿ ಹಜಾರಕ್ಕೆ ಬಂದೆ. ಹಟ್ಟಿಯೊಳಗಿನ ಕಾಡನ್ನು ಲಾಟೀನು ಬೆಳಕು ಸ್ಪಷ್ಟ ಮಾಡಿತು. ನೋಡುವುದಕ್ಕಾಗದೆ ಲಾಟೀನನ್ನು ಗುಳವಿಗೆ ಸಿಕ್ಕಿಸಿ ರೂಮಿಗೆ ಬಂದು ಮೊಗ್ಗಲು ಕೊಟ್ಟೆ. ಮತ್ತೆ ನೆನಪುಗಳು ಕಿತ್ತು ತಿನ್ನ ತೊಡಗಿದವು.

....ಊರು ಹತ್ತಿರವಾಗುತ್ತಿದ್ದಂತೆ ಊರ ಹತ್ತಿರದ ನೆನಪುಗಳು. ಅಜ್ಜಿಯ ತಲೆ ನನ್ನ ಹೆಗಲಿಗೆ ಜೋತು ಜೋಕಾಲಿಯಾಡುತ್ತಿತ್ತು. ಎಳೆಕೂಸಿನ ಹಾಗೆ ಅಜ್ಜಿ ಅಸಂಬದ್ಧ ಕನವರಿಸುತ್ತಿದ್ದಳು. ಊರು ಮೈಲು ಇದೆ ಅನ್ನುವಾಗ ತಳಕ್ಕನೆ ಕಳಸ ಬಿದ್ದಂತೆ ಅಜ್ಜಿ ತಲೆ ನನ್ನ ಮಂಡಿಗೆ ಬಿತ್ತು. ದಿಕ್ಕೆಟ್ಟಂತಾಯಿತು. ಅಜ್ಜಿ ತಣ್ಣಗಾಗತೊಡಗಿದಳು. ಹಿಂದಕ್ಕೆ ಕಾರು ತಿರುಗಿಸಲು ಹೇಳಿದರೆ ಹೇಗೆ ಎಂದು ಯೋಚನೆ ಬಂತು. ಹೇಳುವುದಕ್ಕೆ ಏನೊ ತಡೆ. ಕಾರು ನಿಧಾನ ಚಲಿಸುತ್ತಿತ್ತು. ಊರು ಮುಂದಲು ಬಂದಾಗ ಅಲ್ಲೆ ನಿಂತಿದ್ದ ಚಕ್ರ ಚಿಕ್ಕಣ್ಣನಿಗೆ ಗುರುತು ಹೇಳಿಕೊಳ್ಳಬೇಕಾಯಿತು. ಹಣ್ಣು ಹಣ್ಣಾಗಿದ್ದ ಅವನಿಗೆ ನಾನು ಅಂತಲೆ ಕುಣಿಯುವುದು ಬಾಕಿ. ವಿಷಯ ತಿಳಿದ ಬೆಪ್ಪಗೆ ನಿಂತ. ಅಜ್ಜಿ ಹಾಗೆ ಹೀಗೆ ಅಂತ ಹೊಗಳ ತೊಡಗಿದ. ದೊಡ್ಡಪ್ಪನಿಗೆ ಸಮಾಚಾರ ತಿಳಿಸಲು ಹೇಳಿದೆ. ಬಂಧುಗಳು ಬಹಳ ವರ್ಷ ಕಾಣದಿದ್ದರೆ ಪೂಜೆ ಮಾಡಿಸಿ ಎಣ್ಣೆಯಲ್ಲಿ ಮೊದಲು ಮೊಖ ನೋಡಬೇಕೆಂದು ತಿಳಿಹೇಳಿದ. ಮೊದಲು ಸುದ್ದಿ ಹೇಳಿಬರಲು ಕಳಿಸಿದೆ....

ಹೊರಗೆ ಯಾರೊ ಕೆಮ್ಮುತ್ತ ನಡೆದು ಬರುವಂತಿತ್ತು. ನ್ಯಾಯ ಮುಗಿದಿರಬೇಕು. ಏನು ಸುದ್ದಿಯೊ. ತವಕದಿಂದ ಗಕ್ಕನೆ ಕೂತೆ. ಹೊರಗಿನಿಂದ "ನೋಡಪ್ಪಾ" ಅಂದರು. ಹೊರಕ್ಕೆ ಬಂದಾಗ ಯಜಮಾನ ಸಿದ್ದಪ್ಪ ನಿಂತಿದ್ದರು. ಗಾಬರಿಯಿಂದ ಏನಾಯಿತು ಅಂದೆ.



ಕೈ ಅಲ್ಲಾಡಿಸಿ "ನಾನೂನು ಬೇಕಾದಷ್ಟು ಯತ್ನ ಮಾಡ್ದೆ. ಸರಿ ಹೊಂದ್ಲಿಲ್ಲ. ಊರ ಮಾನ ತೆಗೆದವನೆ ಅವ. ವಿಷದ ಹಾವ ಎಲ್ಲಾರು ಸೇರಿಸಿಕೊಳ್ಳೋದು ಉಂಟಾ ಅಂತಾನೇ ಪಟ್ಟು ಕುಂತುಬಿಟ್ಟರು. ನಿಮ್ಮ ದೊಡ್ಡಪ್ಪನಂತೂ ಗುಂಡುಕಲ್ಲಿನ ಹಾಗೆ ಮುಗಿಯೊವರ್ಗ್ಗೊ ಸುಮ್ನೆ ಕುಂತಿದ್ದ. ಏನೂ ಮಾಡಕ್ಕಾಗಲಿಲ್ಲ." ಎಂದು ಸತ್ತು ಮಲಗಿದ್ದ ಅಜ್ಜಿ, ಉರಿಯುತ್ತಿದ್ದ ಬೆಂಕಿ, ಆಮೇಲೆ ಮೇಲಕ್ಕೆ ನೋಡಿದರು. "ಮನುಷ್ಯರಾ ನೀವು? ತೊಲಗಿ ಇಲ್ಲಿಂದ" ಅಂತ ಚೀರಿದೆ. ಸಿದ್ದಪ್ಪ ಕಣ್ಣು ದೊಡ್ಡದು ಮಾಡಿ ಮೇಲಿಂದ ಕೆಳಕ್ಕೆ ನೋಡಿ "ತೊಲಗುವುದು ಯಾರ?" ಅಂದು ಉರಿಗಣ್ಣಲ್ಲಿ ನೋಡಿದರು. ಆಮೇಲೆ ಉಸಿರು ಬಿಟ್ಟು ಸಣ್ಣಕ್ಕೆ ನಕ್ಕು ಬರಬರ ಹೋಗಿಬಿಟ್ಟರು.

ಹಾಗೆ ಕಣ್ಣು ದೊಡ್ಡತು ಮಾಡಿ ಏನೂ ಕಾಣದಿದ್ದರೂ ನಿಂತೆ. ಹೀಗೆ ಬಹಳ ಹೊತ್ತು ಕಳೆದರೂ ಹೀಗೆ. ಜೋರು ಉಸಿರು ಬಿಟ್ಟು ಅಜ್ಜಿಯ ಕಡೆ ನೋಡಿದೆ. ಅಂಗಳದಲ್ಲಿ ಬೆಂಕಿ ಬೆಳಕು. ಅಷ್ಟಗಲ ಬಿಟ್ಟು ಊರ ಕವುಚಿರುವ ಕತ್ತಲು. ಅಂಗಳದಲ್ಲಿ ಅಡ್ಡಾದಿಡ್ಡಿ ಬಿದ್ದಿದ್ದ ಸೌದೆ ಸೀಳುಗಳನ್ನು ಬೆಂಕಿಗೆ ಜೋಡಿಸಿದೆ. ಹಜಾರಕ್ಕೆ ಬಂದು ಕಣ್ಣುಗ್ಗಿಳಿಯುವ ಹಾಗೆ ಎಲ್ಲವನ್ನು ಒಂದು ಸಲ ನೋಡಿದೆ. ನೇರ ಚಣೆಗೆ ಹತ್ತಿರಕ್ಕೆ ಬಂದು ಅದರ ಮೇಲೆ ಹತ್ತಿ ಜೀವ ಕೈಲಿಡಿದು ನೇತು ಹಾಕಿಕೊಂಡಿದ್ದ ಗಳುಗಳನ್ನು ಹಿರಿದಿರಿದು ಕೆಳಕ್ಕೆ ಒಗಾಯಿಸತೊಡಗಿದೆ. ಕಣ್ಣು ತುಂಬುವಷ್ಟು ಕಂಡಾಗ ಕೆಳಕ್ಕೆ ಇಳಿದು ಗಳಗಳನೆಲ್ಲ ಒಕ್ಕಡೆ ಜೋಡಿಸಿ ತಬ್ಬು ಮಾಡಿದೆ. ನಾಲ್ಕಾರು ಸಲ ಒಳಗಿನಿಂದ ಅಂಗಳಕ್ಕೆ ಅವನೆಲ್ಲ ಸಾಗಿಸುವುದರೊಳಗೆ ಬೆವರಿಳಿದುಹೋಯಿತು. ಮೈಕೈಗೆಲ್ಲ ದೂಳು ತುಂಬಿ ಕಪ್ಪು ಹಿಡಿಯಿತು. ಅಜ್ಜಿ ಬೆಂಕಿ ಎಲ್ಲ ಹಾಗೆ ಹಾಗೆ.

ಯಾವ ದಿಕ್ಕೂ ಬಿಡದೆ ನಾಲಿಗೆ ಚಾಚುತ್ತಿದ್ದ ಬೆಂಕಿಸುತ್ತೂ ಗಳುಗಳು ಹರಡಿದೆ. ಅವು ಹೊತ್ತಿ ಉರಿಯತೊಡಗಿ ದಿಗಿಲಾಗುವಷ್ಟು ಬೆಳಕಾಯಿತು. ಅಜ್ಜಿಯ ಹತ್ತಿರಕ್ಕೆ ನಿಧಾನ ಹೆಜ್ಜೆಹಾಕಿದೆ. ಒಂದು ಕ್ಷಣ ನಿಂತು ಆಮೇಲೆ ಅಜ್ಜಿ ತಲೆದೆಸೆಯ ದುಪ್ಪಟಿ ಸರಿಸಿದೆ. ಒಂದಿಷ್ಟು ಸುಕ್ಕುಗಳು ಕೂಡಿ ಕೂಡಿ ಆದಂತೆ. ನಿಧಾನತೆಗೆ ಮೊದಲಿನ ಹಾಗೆ ದುಪ್ಪಟಿ ಸರಿಸಿ ಮತ್ತೂ ಹತ್ತಿರಕ್ಕೆ ಹೋಗಿ ಕೈಗಳನ್ನು ಚಳಿ ಕೊರೆಯುವ ಅಜ್ಜಿ ದೇಹಕ್ಕೆ ಬಳಸುಹಾಕಿ ಬಿಮ್ಮಗೆ ಬಿಗಿ ಹಿಡಿದು ಮೇಲಕ್ಕೆ ಜಗ್ಗಿಸಿದೆ. ಎತ್ತಲು ಆಗದಷ್ಟು ಭಾರ. ಕೈಗಳು ತೊಡೆಗಳು ಗಡಗಡ ಒದರತೊಡಗಿದವು. ಕ್ಷಣ ಹೊತ್ತು ಹಾಗೆ ಇರಿಸಿಕೊಂಡಿದ್ದು ಆವೇಶ ಬಂದಂತೆ ಕಣ್ಣು ಮುಚ್ಚಿ ಮೇಲಕ್ಕೆ ಚಿಗಿಸಿದೆ. ಅಜ್ಜಿಯ ದೇಹ ನನ್ನ ಎದೆಗೆ ಆತುಕೊಂಡು ಅಲ್ಲಾಡಿಸತೊಡಗಿತು. ತೂರಾಡುತ್ತ ಬೆಂಕಿಯ ಮೇಲಕ್ಕೆ ತಂದು ಕೈ ಬಿಟ್ಟಾಗ ಭುಗಿಲ್ಲೆಂದಿತು. ಭೂಮಿ ಒಂದು ಸಲ ಗರ್‍ರನೆ ತಿರುಗಿ ಟಕ್ಕಂತ ನಿಂತ ಹಾಗೆ. ತಲೆ ಕಣ್ಣೊಳಕ್ಕೆ ಕಪ್ಪು

ಬೆಳಕು ತುಂಬಿ ಚಿಮ್ಮಿದ ಹಾಗೆ. ಬೆಂಕಿ ಚಾಚಿ ನನ್ನನ್ನೂ ಸೆಳಕೊಂಡ ಹಾಗೆ. ಚೇತರಿಸಿಕೊಂಡು ಹಿಂದಕ್ಕೆ ಚಿಗಿದು ಕುಸಿದು ಕೂತೆ. ಕಣ್ಣಿಗೆ ಕತ್ತಲು ಕವಿದುಕೊಂಡು ಕಣ್ಣು ಬಿಟ್ಟರೆ ಅಜ್ಜಿಯನ್ನು ಆವರಿಸಿಕೊಂಡ ಬೆಂಕಿ ಚಾಚುತ್ತ ಹತ್ತಿರ ಹತ್ತಿರ.... ಹಿಂದಕ್ಕೆ ಜಿಗಿದು ನಿಂತೆ. ಸುತ್ತು ಇನ್ನಷ್ಟು ಗಳು ಬಿದ್ದಿದ್ದವು. ಅವೆಲ್ಲ ಮುಗಿಯುವವರೆಗೂ ಆಳುದ್ದಕ್ಕೆ ಇದ್ದ ಉರಿಗೆ ಎಸೆದೆ. ಬೆಂಕಿ ಹಿಗ್ಗತೊಡಗಿತು. ಹಿಗ್ಗೀ ಹಿಗ್ಗೀ.... ನಿಲ್ಲುವುದಕ್ಕಾಗಲಿಲ್ಲ. ತಡಬಡಾಯಿಸಿಕೊಂಡು ಸಿಕ್ಕ ಸಿಕ್ಕ ಕಡೆ ಓಡತೊಡಗಿದೆ. ಊರಿಗೆ ಊರೇ ನನ್ನ ಹಿಂದೆ ಬರುತ್ತಿರುವಂತೆ. ಇದ್ದ ಇದ್ದ ಬಲವನ್ನೆಲ್ಲ ಒಟ್ಟಾಯಿಸಿ ಓಡಿದೆ. ಕಾಲು ಸೋತುಹೋಗುವವರೆಗೂ, ಕಣ್ಣಿಗೆ ಕತ್ತಲು ಹಿಡಿಯುವವರೆಗೂ, ಸುತ್ತ ಕೆನೆಗಟ್ಟಿದ್ದ ದಟ್ಟ ಗಟ್ಟಿ ಕಪ್ಪು ಕತ್ತಲು ಕಾಣದಾಗುವವರೆಗೂ.

(1970)

# ದತ್ತ

ಹಾದಿ ಎರಡು ದಿಕ್ಕು ಒಡೆದುಕೊಂಡು ಆನಂದುವಿಗೆ ಕೂರಿಸಿತು. ಯಾವ ಕಡೆ ನೋಡಿದರೂ ಒಂದು ನರಪಿಳ್ಳೆಯೂ ಕಂಡುಬರಲಿಲ್ಲ. ಹೊಸೂರಿಗೆ ದಾರಿ ಕೇಳಿದ್ದಕ್ಕೆ ಮೂಗಿನ ನೇರಕ್ಕೆ ಹೋಗಿ ಎಂದು ಯಾರೋ ಹೇಳಿದ್ದಕ್ಕೆ ಬಂದದ್ದು. ತಂದಿದ್ದ ಬ್ಯಾಗು ಒಂದು ಕೈಗೆ ಮೀರಿದ ಭಾರವಾಗಿತ್ತು. ಬಲಗೈ ಸಣ್ಣಕ್ಕೆ ನೋವು ತೋರುತ್ತಿತ್ತು. ಹಸಿರು ಹರಡಿದ ಕಡೆ ಹೋಗಿ ಸಾವರಿಸಿ ಕುಳಿತ. ಸಿಗರೇಟು ನೆನಪಿಗೆ ಬಂದು ಹಚ್ಚಿ ಸುತ್ತೂ ನೋಡಿದ. ಅಂದುಕೊಂಡಿದ್ದಕ್ಕೆ ತಾಳ ಬೀಳುತ್ತಿದೆ ಅಂದುಕೊಂಡ. ಅಡ್ಡಾದಿಡ್ಡಿ ಬೆಳೆದ ಮರಗಳ ನಡುವೆ ಹರಿದಿರುವ ಥರ ಹಾದಿ, ಎರಡು ದಿಕ್ಕಲ್ಲು ನಿಂತು ಚಾಚಿದ ಬೇಲಿ, ಹೊಸ ಬಗೆಯ ಆಕಾಶ, ಪಾಳುಬಿದ್ದ ಹೊಲ, ಮುಂಟಿ - ಎಲ್ಲ ಹೊಸದು. ಅಪ್ಪ ಅನ್ನಿಸಿಕೊಂಡವ ಬರೆದಿದ್ದುದೂ ಹೀಗೆ-ಹೊಸದಾಗಿ ಹುಟ್ಟಿದೆ ಅಂತ ತಿಳಿದುಕೊಂಡಾದರೂ ಊರಿಗೆ ಬಾ.

ಹೆತ್ತ ಸಂಬಂಧ ಅನ್ನುವುದಕ್ಕೆ ಅರ್ಥವೆ ಇಲ್ಲವೆ ಎಂದು ಮತ್ತೂ ಯೋಚನೆಗೆ ಬಂತು. ದತ್ತು ಕೊಡುವಾಗ ಏಳು ವರ್ಷದ ಹುಡುಗನಂತೆ. ಊರನ್ನು ನೆನಸಿಕೊಳ್ಳಲು ನೋಡಿದ್ದಕ್ಕೆ ಒಂದಿಷ್ಟು ಮುಖಗಳು ಮಾತಿಲ್ಲದೆ ಬಹಳ ದೂರದಲ್ಲಿ ನಿಂತ ಹಾಗೆ. ಮುಂದಕ್ಕೆ ಏನಂದರೂ ಬರುತ್ತಿರಲಿಲ್ಲ. ಅಪ್ಪನ ಪತ್ರದಿಂದ ಎಲ್ಲರನ್ನು ಮೂಡಿಸಲು ನೋಡಿದ. ಅವ್ವ, ಮಗ ಮಗ ಎಂದು ಹಲಬುತ್ತಿದ್ದಾಳೆ. ತಮ್ಮನ ಹೆಂಡತಿ ಹೆರಿಗೆಗೆ ತವರಿಗೆ ಹೋಗಿದ್ದಾಳೆ. ತಂಗಿ ಮೈನೆರೆದು ಮದುವೆಗೆ ಬಂದಿದ್ದಾಳೆ. ನಾಲ್ಕನೆ ಕ್ಲಾಸು ಓದುವ ತಮ್ಮ ಚೋಟಿ ಚೋಟಿ. ಅಪ್ಪನಿಗೆ ಸಾಲ ಸೋಲ. - ಹದಿನಾರು ವರ್ಷ ತನ್ನನ್ನು ಸತತ ಮರೆತ ಜನ ಹೀಗೆ ಅಳಲುವುದು ಅನುಮಾನ ನಿಲ್ಲಿಸಿತು. ಈಗ ಒಟ್ಟಿನಲ್ಲಿ ಎಲ್ಲ ಮರೆಯಬೇಕು. ಹೋಗಿ ಅಲ್ಲಿಯವನಾಗಿ ಹೊಂದಬೇಕು. ಊರು ಮುಂದಲು ತಲುಪುವುದಕ್ಕೆ ಮೊದಲು ತನ್ನ ಹಿಂದಿನದು ಇಲ್ಲವಾಗಬೇಕು. ಕಣ್ಣುಬಿಟ್ಟು ಅಪ್ಪ ಅವ್ವ ಅಂದುಕೊಂಡು ಬೆಳೆಯಬೇಕು

ಬೆಳೆಯಲೇಬೇಕು ಎಂದು ಆನಂದು ಉಸಿರು ಬಿಗಿದು ದೃಢವಾಗಿ ಅಂದುಕೊಂಡ. ಸಿಗರೇಟು ಎಸೆದು ಮುಂದೆ ಎರಡು ದಿಕ್ಕೂ ಹರಿದಿದ್ದ ಹಾದಿಯನ್ನು ಸೀಳಿ ನೋಡಿದ. ಎಡಗಡೆಯ ದೂರದಲ್ಲಿ ಒಂದು ಗಾಡಿ ತನ್ನತ್ತ ತೆವಳುತ್ತ ಗವಿಯೊಳಗಿಂದ ಬರುವ ಹಾಗೆ. ಆನಂದು ಗಾಡಿಯನ್ನು ಸೆಳೆದುಕೊಳ್ಳುವವನ ಥರ ದಿಟ್ಟಿಸುತ್ತಾ....ಗಾಡಿ ಹತ್ತಿರ ಬಂತು.

ಗಾಡಿ ಹೋದುದಕ್ಕೆ ಮೂಡುತ್ತ ನಡೆದ ಪಟ್ಟೆಯ ಗುರುತು ಹಿಡಿದು ಕೂತ ಆನಂದುವಿಗೆ “ನೋಡಿ, ಊರು ಕಾಣ್ತದೆ” ಎಂದು ಗಾಡಿಯವ ಅಂದುದು ನಿಗರಿ ನೋಡುವಂತೆ ಮಾಡಿತು. ತುಂಬ ದೂರದಲ್ಲಿ ತಿರುವಿ ಹೋಗುವ ದಾರಿ, ಮೀರಿ ನಿಂತ ಅರಳಿಮರಗಳು, ಕಂಡೂ ಕಾಣದ ಹಾಗೆ ಒಂದಿಷ್ಟು ಮನೆಗಳು. ತುಂಬಿಕೊಳ್ಳುವವನ ಹಾಗೆ ನೋಡಿದರೂ ಕಂಡದ್ದು ಅಷ್ಟೆ. ಊರು ಸೇರಿದರೆ ಅಲ್ಲೊಂದು ಮಾರಿಗುಡಿ. ಪೂಜೆಯಾದ ಮೇಲೆ ತನ್ನ ಅಪ್ಪ ಅವ್ವ ತಂಗಿ ತಮ್ಮಂದಿರು ಅನ್ನಿಸಿಕೊಂಡವರ ಮುಖಗಳನ್ನು ಎಣ್ಣೆಯಲ್ಲಿ ಕಾಣುವುದು. ಇವೆಲ್ಲಕ್ಕೂ ಒಪ್ಪಿಸಿಕೊಳ್ಳಬೇಕಾಗುತ್ತೋ ಏನೊ ಎನಿಸಿತು. “ನನ್ನ ಕೈಲಿ ಇದೆಲ್ಲ ಆಗುವುದಿಲ್ಲ” ಎಂದುದಕ್ಕೆ ಅವ “ಎಲ್ಲಾರು ಉಂಟಾ ಸೋಮಿ. ಹನ್ನೆಡುವರ್ಸ ನೋಡದೆ ಇದ್ದವರು ಮೊದ್ಲು ಎಣ್ಣೇಲಿ ನೋಡಿ ತಾನೇ ಆಮೇಲೆ” ಎಂದುದು ಮುಂದಕ್ಕೆ ಮಾತಾಡಿಸಲಿಲ್ಲ. ಕಿತ್ತುಕೊಂಡು ಬರುವ ಯೋಚನೆಗಳಿಗೆ ತಲೆಯೊಡ್ಡಿ ಕೂತ.... ಮನೆ ತಲುಪಿದ್ದು ತಣ್ಣಗಿನ ರಾತ್ರಿ ಒಂದೂ ಒಂದೂವರೆಗೆ. ಕಣ್ಣೀರು ಹಿಂಗಿಸುತ್ತ ಕುಳಿತಿದ್ದ ಅಮ್ಮ ನನ್ನ ಕಂಡು ಚಂಡಿಯಾದಳು. ಕಷ್ಟ ಸುಖಕ್ಕೆ ಆಗದವನು ನೀನು. ಕುಡಿದು ಬೇರೆ. ನಾಚಿಕೆ ಗೆಟ್ಟವನು. ಹೀಗೆಲ್ಲ, ತಂದೆ ಸತ್ತುದಕ್ಕೊ ಏನೊ ಮಾತೂ ಬರಲಿಲ್ಲ. ಹದಿನೈದು ದಿನ ಮನೆ ಬಿಟ್ಟು ಮನೆಗೆ ಬಂದಾಗ ಎಲ್ಲವು ಹಿಡಿದು ಅಲ್ಲಾಡಿಸಿಬಿಟ್ಟಿತು. ಅಮ್ಮ ಇದ್ದಕ್ಕಿದ್ದಂತೆ ಮುಖದ ತುಂಬ ಸುಕ್ಕು ತುಂಬಿಕೊಂಡು ಅಳುತ್ತಾ ಮಾತಿಲ್ಲ, ಕಥಿಲ್ಲ, ಒಂದು ದಿನ “ಎಲ್ಲಕ್ಕು ಆಡ್ಗತಿ ಮಾಡ್ದೆ, ಓದು ಬಿಟ್ಟು ಹೋಗ್ಲಿ ಅಂದ್ರೆ, ಎಲ್ಲಾ ಬಿಟ್ಟು ಕುಡಿಯೋದು. ಎಲ್ಲೆಲ್ಲೋ ಹೋಗೋದು, ತಂದೆ ತಿಥಿಗೆ ನೀನಿಲ್ಲ ಅಂದ್ರೆ....” ಎಂದು ಅಳುಕಚ್ಚಿಕೊಂಡಳು. ಅದರ ಮಾರನೆ ದಿನವೆ ಕುಡಿದ ಭಯ ಹಿಡಿದುಕೊಂಡೆ ಮನೆಗೆ ಬಂದದ್ದು. ಅಮ್ಮ ದಿನದ ಹಾಗೆ ಮಲಗಿದ್ದಳು. ಎಚ್ಚರಿಸಿದರೆ ಏಳಲಿಲ್ಲ. ಇದೆಲ್ಲ ಏನು ಅನ್ನಿಸಿತು. ಮಕ್ಕಳಿಲ್ಲದಕ್ಕೆ ಇವರು ಮಗ ಮಾಡಿಕೊಂಡದ್ದು, ಕೊಟ್ಟ ಅಪ್ಪ ಅವ್ವ ನನ್ನ ಹುಟ್ಟೆ ಇಲ್ಲ ಎಂದು ತಿಳಿದುಕೊಂಡು ಇದ್ದದ್ದು....

“ಇಳೀರಿ” ಎಂದುದು ಕೇಳಿದರೂ ಆನಂದು ಹೂತು ಹೋದವನ ಹಾಗೆ ಕೂತು ಬಿಟ್ಟಿದ್ದ. ಮೈತುಂಬ ದೊಳ ದೊಳ ಬೆವರಿಳಿಯುತ್ತಿತ್ತು. ದಿಗಲು ಬಿದ್ದವನಂತೆ ನೋಡಿದಕ್ಕೆ ದೆವ್ವದ ಹಾಗೆ ಅರಳಿ ಮರಗಳು ನಿಂತಿದ್ದವು. ಬಂದ ಹಾದಿ ಮತ್ತೆ ಅದೇ ಗವಿಯ ಥರ



ಕಾಣಿಸಿತು. ಈ ಮರಗಳ ಹಿಡಿದುಕೊಂಡೇ ಊರು ಆದಂತೆ. ಮರದ ಬುಡದಿಂದ ನಡೆದ ಹಾದಿ ಊರೊಳಕ್ಕೆ ದಿಕ್ಕಾಪಾಲು ನುಗ್ಗಿ ಅದರ ಅಕ್ಕ ಪಕ್ಕ ಒತ್ತೊತ್ತಿಗೆ ಹಟ್ಟಿಗಳು. ಉಸಿರು ಹಿಡಿದುಕೊಂಡು ಆನಂದು ಕೆಳಗಿಳಿದುದು. ಅರಳಿ ಮರದ ನೆರಳಲ್ಲಿ ಕೂತ ಜನ ಹತ್ತಿರ ಬಂದು ಸುತ್ತಾ ನೆರೆದುದು ಉಸಿರು ಸಿಕ್ಕಿಸಿದ ಥರ ಆಯ್ತು. ಒಬ್ಬರು ರಟ್ಟೆ ಹಿಡಿದು ನಡೆಸಿ ಮಾರಿಗುಡಿಯ ಒಂದು ಕಡೆ ಕೂರಿಸಿದರು. ಮಾರಿಗುಡಿ ಗೋಡೆ ತುಂಬಾ ಕೆಂಪು ಕೆಂಪು ಪಟ್ಟೆಗಳು. ತಾರಿಸಿದ ಸಗಣಿಯ ಹಸಿ ಮೂಗಿಗೆ ಬಡಿಯುತ್ತಿತ್ತು. ಸುತ್ತ ಬೆವರಿಳಿಸುತ್ತಾ ನಿಂತ ಜನ. ಕವುಚಿದ ಬೀಡಿ ಊದುಬತ್ತಿ ಹೊಗೆ ಗುಸುಗಿಸು ಜೋರು ಮಾತುಗಳು, ಕೆಮ್ಮುಗಳು. ಗಂಟೆಯ ಸದ್ದು ಎದ್ದಿತು. ‘ಪೂಜ’ ಎಂದು ಪಕ್ಕದಲ್ಲಿ ಕೂತಿದ್ದವ ಅಂದ. ಆನಂದು ಬೆವರುತ್ತಲೆ ಇದ್ದ.... ಅಮ್ಮ ಸತ್ತಾಗ ಬಂದವರು ಅಕ್ಕಪಕ್ಕದ ನಾಲ್ಕಾರು ಜನ. ತಿಥಿ ಮಾಡಬೇಕು ಎಂದು ಪಟ್ಟು ಹಿಡಿದರು. ನನ್ನ ಕೈಲಿ ಅದೆಲ್ಲ ಆಗಲ್ಲ ಅಂತಲೆ ಮುಖ ತಿರುವಿಸಿ ಹೋದರು.... ತಲೆ ಕೊಡವಿ ಕೂತ ಆನಂದು ಎದುರು ನೋಡಿದ. ಕಚ್ಚೆ ಕಟ್ಟಿಕೊಂಡ ಕಪ್ಪಗಿನ ಒಬ್ಬ ಬಂದು ತೀರ್ಥ ಇಟ್ಟು ದಿಟ್ಟಿಸಿದ. ಮೈ ಸೆಟೆದುಕೊಂಡಿತು. ಒದರಿಕೊಂಡು ಮೊದಲಿನ ಹಾಗೆ ಕೂತ. ತಟ್ಟೆಯಲ್ಲಿ ಬೆಂಕಿ ಇಟ್ಟುಕೊಂಡು ಬಂದು ಮುಖದ ಹತ್ತಿರ ತಂದು ಹೂಕೊಟ್ಟು ಹಲ್ಲು ಕಿರಿದು ಅವ ಬೇರೆ ದಿಕ್ಕು ಚಲಿಸಿದ್ದು, ತಕ್ಷಣ ಆಕಡೆಗೊಬ್ಬ ಈಕಡೆಗೊಬ್ಬ ಪಂಚೆ ಹಿಡಿದು “ತೆರೆ ಆಯ್ತು” ಎಂದು ಕೂಗಿದರು. ಒಳಗೊಳಗೆ ದಿಗಿಲಾಡತೊಡಗಿತು. ತೆರೆ ನಡುವೆ ಎಣ್ಣೆ ತುಂಬಿದ ಪಾತ್ರೆಯೊಂದನ್ನು ತಂದಿರಿಸಿದರು. ಇಟ್ಟ ಬಿರುಸಿಗೆ ಎಣ್ಣೆ ತೊಳಕಾಡಿ ತೊಳಕಾಡಿ ನಿಧಾನ ತಿಳಿಯಾಯಿತು. ಸುತ್ತ ತಕ್ಕೈಸಿದ್ದ ಜನರ ಉಸಿರಾಟ ಒತ್ತಿ ಒತ್ತಿ ಹೊಸ ಜನ್ಮ ಕಾಣಿಸುತ್ತಿತ್ತು. ಇದ್ದಕ್ಕಿದ್ದಂತೆ ಸದ್ದೆಲ್ಲ ಅಡಗಿ ದೂರದಿಂದ ಕೇಳಿಸುವ ಮಾತುಗಳು. ಆನಂದುವಿಗೆ ಉಸಿರಾಟದ ಏರಿಳಿತವಾಯಿತು. ಎಣ್ಣೆಯ ಒಳಗಿನಿಂದ ನಿಧಾನತೆಗೆ ಒಂದು ಮುಖದ ರೀತಿ ಮೂಡಿತು. “ನಿನ್ನ ಅಪ್ಪ” ಅಂದರು. ನನ್ನ ಅಪ್ಪ ಅಂದುಕೊಂಡ. “ನಿನ್ನ ಮುಖಾನೂ ತೋರ್ಸು” ಎಂದುದು ಕೇಳಿಸಿತು. ಮುಂದಕ್ಕೆ ಮುಖ ಚಾಚಿ ತೆಗೆದುಕೊಂಡ. ಅದಾದಮೇಲೆ ಸೊರಕ್ ಸೊರಕ್ ಸದ್ದು ಬಂತು. ಎಣ್ಣೆಯೊಳಗೆ ಮುಖವಾದ ಮೇಲೆ “ನಿನ್ನ ಅವ್ವ” ಅಂದರು. ದಿಟ್ಟಿಸಿ ನನ್ನ ಅವ್ವ ಅಂದುಕೊಂಡ. ಅವ್ವನ ತಲೆ ತುಂಬ ಕೂದಲು ಹರಡಿಕೊಂಡಿರಬೇಕು. ಆಮೇಲೆ ಅದು ಹೋಗಿ ಇನ್ನೊಂದು. “ತಮ್ಮ” ಗುಂಡುಗುಂಡುತ ಮುಖದವ. ಸ್ವಲಹೊತ್ತು ಹೋಗಿಸಿ ಮತ್ತೊಂದು ಬಂದ ಮೇಲೆ “ತಂಗೀ” ಅಂದರು. ಕಾಣಿಸಿದ ಮುಖದ ತುಟಿ ಬಿರಿಯುವ ಹಾಗೆ. ಇನ್ನೊಂದು ಎಳಸುಮುಖ. “ತಮ್ಮ” ಎಂದರು. ಎಲ್ಲಕ್ಕೂ ಮುಖ ತೋರಿಸಿ ತೆಗೆದುಕೊಳ್ಳುವುದು. ಇಷ್ಟೆಲ್ಲ ಆಗಿ ಮುಗಿದ ಮೇಲೆ ತೆರೆ ಸರಿಯಿತು. ತೆರೆ ಸರಿದ ತಕ್ಷಣವೇ ಒಂದು ವಯಸ್ಸು ಮೀರಿದ ಹೆಂಗಸು ಕಣ್ಣೀರು ಸುರಿಸುತ್ತ ಇದ್ದವಳು, “ನನಕಂದಾ” ಎಂದು ಚೀರಿ ಧಾವಿಸಿ ಬಂದು ತಬ್ಬಿಕೊಂಡಾಗ ಉಸಿರು ಸಿಕ್ಕಿಕೊಂಡಿತು.

ಅವ್ವ. ತಲೆ ಎತ್ತಿ ನೋಡಿದ. ಕಣ್ಣೀರು ಹರಿಯುವ ಕಣ್ಣಲ್ಲಿ ಕಾಣುತ್ತಾ ಒಕ್ಕಡೆ ಇದ್ದ ಅಪ್ಪ ತಂಗಿ ತಮ್ಮಂದಿರ ಗುರುತಿಸಬಹುದಿತ್ತು. ಸಣ್ಣ ತಮ್ಮ ಓಡೋಡಿ ಬಂತು. ಅವರು ಹತ್ತಿರ ಹತ್ತಿರ ಬರತೊಡಗಿದರು. "ಇನ್ನೇನ ಆಯ್ತಲ್ಲ. ಕರ್ಕಂಡು ನಡೀರಿ" ಎಂದು ದೊಡ್ಡಗೆ ಇದ್ದವರು ಅಂದರು. ಯಾವ ಕಡೆ ನೋಡಿದರೂ ಗಿಜಿಗಿಜಿ ಥರಾವರಿ ಸಣ್ಣ ದೊಡ್ಡ ಮುಖಗಳು. ಎಬ್ಬಿಸಿ ನಡೆಸಿಕೊಂಡು ನಡೆದರು. ಹಟ್ಟಿ ತಲುಪಿದಾಗ ಆರತಿ ಎತ್ತಿ ಹರಿಸಿನ ನೀರು ಹರಿಸಿ "ಬಲಗಾಲು ಹಾಕಿ ನಡಿ" ಅಂದರು. ನಡೆದಾದ ಮೇಲೆ ಎಲ್ಲವನ್ನು ಮೆಟ್ಟಿನಿಂತು ನಿದ್ದೆ ತಬ್ಬಿಕೊಂಡಿತು.

ನಿದ್ದೆ ತಿಳಿದೆದ್ದ ಮೇಲೆ ಆನಂದುವಿಗೆ ಆದುದೆಲ್ಲ ಮೋಡಿ ಹಾಕಿ ನಡೆದಂತೆ ಅನಿಸಿತು. ಸುಧಾರಿಸಿಕೊಂಡು ಬಹಳ ಹೊತ್ತಾದರೂ ಬಂದು ನಿಲ್ಲುವ ಮುಖಗಳು, ಕಿವಿಯೊಳಗೆ ಕೂತು ಸದ್ದು ಮಾಡುವ ದನಿಗಳು. ತಪ್ಪಿದರೆ ಅದಲು ಬದಲು ಆಗುತ್ತಾ ತೋರುವ ಬಣ್ಣ ಬಣ್ಣದ ಎಂಥದರಿಂದಲೊ ತಪ್ಪಿಸಿಕೊಳ್ಳಲು ಆಗಲಿಲ್ಲ. ಎಲ್ಲ ಕನಸಿನಲ್ಲಿ ಜರುಗಿದ ಥರ. ಏನೆಲ್ಲ ಆಗಿಬಿಟ್ಟಿತು ಎಂದುಕೊಂಡು ಸುತ್ತೂ ನೋಡಿದ. ಅಷ್ಟು ದೂರದಲ್ಲಿ ಸಣ್ಣ ತಮ್ಮ ಈ ಕಡೆಗೆ ಬೆನ್ನು ಹಾಕಿ ತನ್ನಷ್ಟಕ್ಕೆ ಆಡಿಕೊಳ್ಳುತ್ತಿತ್ತು. ಸಿಗರೇಟು ಅನಿಸಿತು. ಅಕ್ಕ ಪಕ್ಕ ಜೋಬು ತಡವಿ ಸಿಗಲಿಲ್ಲ. ಎಲ್ಲ ಎಲ್ಲೆಲ್ಲಿ ಏನೇನು ಆದವೊ ನಿಧಾನವಾಗಿ ನೆನಪಾಗ ತೊಡಗಿದವು. ತಮ್ಮನ ಕಡೆ ನೋಡಿ ಶ್ ಅಂದ. ತಮ್ಮ ಓಡೋಡಿ ಬಂದು ಅರಳುಗಣ್ಣು ಮಾಡಿ ನಿಂತಿತು. ಆನಂದು ಅವನ ತೋಳು ಸವರಿ "ಬ್ಯಾಗಲ್ಲಿ ಸಿಗರೇಟು ಪಟ್ಟಿಗೆ ಅದೆ. ತತ್ತಿಯ" ಎಂದುದಕ್ಕೆ 'ಹೊ' ಎಂದು ಹುಡುಗ ಓಡಿತು. ಕ್ಷಣದಲ್ಲೆ ಸಿಗರೇಟು ಬೆಂಕಿ ಪೆಟ್ಟಿ ಹಿಡಿದು ಬಂದು ಚಾಚಿತು. ಆನಂದು ಈಸಿಕೊಂಡು "ಹೊರಕ್ಕೆ ಒಂದಿಷ್ಟು ದೂರ ಹೋಗಿ ಬರುವ" ಎಂದು ಎದ್ದ. ಅಣ್ಣನ ಕೈ ಹಿಡಿದು ತಮ್ಮ ನಡೆದನು.

ಹಟ್ಟಿಗಳ ಕಿಂಡಿ ಕಿಂಡಿಗಳಿಂದೆಲ್ಲ ನೋಡುವ ಕಣ್ಣುಗಳು ಅನಿಸಿದವು. ಗುಂಪಿದ್ದ ಕಡೆ ಗುಸು ಗುಸು. ಒಂದೊಂದು ಸಲ ಒಟ್ಟೊಟ್ಟಿಗೆ ನೋಡುವುದು. ಆಗ ಆನಂದುವಿಗೆ ಸರಿಯಾಗಿ ನಡೆಯುವುದು ಕಷ್ಟವಾಗುತ್ತಿತ್ತು. ಊರ ಹೊರಬಂದು ದೊಡ್ಡಗೆ ಇದ್ದ ಕೆರೆಯೇರಿ ಮೇಲೆ ಕುಳಿತು ನಿಂಬಳವಾಗಿ ಉಸಿರು ಬಿಟ್ಟು ಸಿಗರೇಟು ಹಚ್ಚಿ ಒಂದು ಕಡೆಯಿಂದ ಎಲ್ಲವ ದಿಟ್ಟಿಸಿದ. ಏನೋ ಮರೆತು ಹೋದಂತೆ ತುಂಬ ಅನಿಸಿತು. ಹೊತ್ತಿನ ಕೆಂಪು ಕಿರಣ ಹೀರುತ್ತಿದ್ದ ತಮ್ಮನ ಎಳಸು ಮುಖ ಅದೇ ಮಣ್ಣಲ್ಲಿ ಆಗ ತಾನೇ ಮೂಡಿ ಬಂದಂತೆ ತೋರಿತು. ಆನಂದ ಇನ್ನೊಂದು ಸಿಗರೇಟಿಗೆ ಬೆಂಕಿ ಮುಟ್ಟಿಸಿ "ನೀ ಆಡ್ಕೊ ಹೋಗು" ಎಂದಾಗ ತಮ್ಮ ಬೇರೆ ದಿಕ್ಕು ಹಿಡಿಯಿತು. ಹೋಗುವ ತಮ್ಮನನ್ನೆ ನೋಡುತ್ತ ಒಂದು ಗಳಿಗೆ ಮಟ್ಟಿಗಾದರೂ ಹೀಗಿದ್ದರೆ ಎಂದು ಬಹಳವಾಗಿ ಅನಿಸಿತು. ತನ್ನೊಳಗೆ ಮುಳುಗಿ



ಬಹಳ ಹೊತ್ತು. ತಮ್ಮ ಕೈ ಜಗ್ಗಿಸಿ "ಅವ್ವ ಕರೀತವ್ಳೆ" ಅಂದಾಗ ನೋಡಿದ. ಕತ್ತಲು ನೆಲಕ್ಕಿಳಿಯುತ್ತಿತ್ತು. ಅವ್ವ ದೂರದಲ್ಲಿ ಕೈಬೀಸುತ್ತಿದ್ದಳು. ಹತ್ತಿರ ಹೋದಾಗ "ಮುಸ್ಸಂಜೆ ಮಾಡ್ಕೊಂಡು ಹಟ್ಟಿಗೆ ಬರೋದ" ಎಂದು ನೋಡಿದಳು. 'ನಡೀರಿ' ಎಂದು ಹೇಳಿ ಹಿಂದೆ ಬಂದಳು.

ರಾತ್ರಿ ಮಲಗಿದರೆ ಸಮರಾತ್ರಿವರೆಗೂ ಆನಂದುವಿಗೆ ನಿದ್ದೆ ಬರಲಿಲ್ಲ. ಒದ್ದಾಡಿದ, ಸುಮಾರು ಸಿಗರೇಟು ಸೇದಿದ. ಗೋಡೆಯ ಆ ಕಡೆ ಈ ಕಡೆ ನೋಡಿದ ಕಡಲೆಲ್ಲ ಏನೇನೊ ಧಾವಿಸಿ ಬಂದಂತೆ ತಲೆಯನ್ನು ಎರಡು ಕೈಗಳಿಂದಲೂ ಅದುಮಿ ಹಾಸಿಗೆಗೆ ಹುದುಗಿ ಕವುಚಿ ಮಲಗಿದ. ....ಆಟ ಊಟ ಪಾಠ. ಬೆಳದದ್ದು ಒಟ್ಟೊಟ್ಟಿಗೆ. ಹೋಟೆಲ್ಲಿಗೆ ನುಗ್ಗಿ ಒಂದು ಮೂಲೆಯಲ್ಲಿ ಕೂತೆವು. ಚಂದು ದುಮುಗುಡುತ್ತಿದ್ದ. "ನೀನು ಏನೇ ಹೇಳು. ನನಗಂತು ಸರಿಕಾಣ್ನೊಲ್ಲ" ಅಂದುದು ಕೋಪ ಬರಿಸಿತು. ಸಿಗರೇಟು ಹಚ್ಚಿ 'ಏನು' ಅಂದೆ. ತಟ್ಟನೆ 'ಏನು ಅಂದ್ರೆ?' ಎಂದು ನೋಡಿ 'ರೋಡು ಅಲೆಯೋದು -ಕುಡ್ದು' ಅಂದು ಅಳೆಯುವವನ ಹಾಗೆ ನೋಡಿದ. ಸಲೀಸಾಗಿ 'ಮತ್ತೆ?' ಅಂದೆ. ವಿಚಿತ್ರವಾಗಿ ಕಣ್ಣು ಬಿಟ್ಟ. 'ಇನ್ನೇನು? ಅಪ್ಪ ಸತ್ತ, ತಿಥಿಗಿಥಿ ನಿಂಗಾಗಾದಿಲ್ಲ. ಹೋಗ್ಲಿ. ಅಮ್ಮ ಏನೊ ಅಂದ್ಲು ಅಂತ ಮನೆ ಬಿಡೋದ? ಅವರ್ಗೆ ಮಾನ ಮರ್ಯಾದೆ ಪ್ರಶ್ನೆ. ಗಂಭೀರವಾಗಿ, ಒಂದು ಮದ್ವೆಯಾಗಿ ಮನೇಲಿರು. ಆದ್ರೆ ಓದು. ಇಲ್ಲ ಅದೂ ಬೇಡ'. ತುಂಬ ಬಿಸಿಬಿಸಿಯಾಗಿ ಬಿಟ್ಟ. ತಣ್ಣಗೆ 'ನಿನ್ನ ಮಾತೂ ಬೇಡ' ಅಂದೆ. ದುರುಗುಟ್ಟಿ ನೋಡಿ ಎದ್ದು ನಿಂತು ಮಾತಿಲ್ಲದೆ ದಪದಪ ಹೆಜ್ಜೆ ಹಾಕಿ ಹೋದ. ಅವ ಹೋದ ದಿಕ್ಕು ದಿಟ್ಟಿಸುತ್ತ ಕೂತವನಿಗೆ ಮತ್ತೆ ಕಾಣಿಸಿಕೊಂಡ. ಹತ್ತಿರ ಬಂದು ಟೇಬಲ್ಲಿಗೆ ಕೈ ಅದುಮಿ 'ನಂಗ ಕೋಪಬಂದ್ರೂ ನಿನ್ನ ಒಳ್ಳೆದಕ್ಕೇನೆ. ಜನ ಏನಂದ್ಕೊತ್ತವರೆ ಗೊತ್ತೇನೊ'. ತುಂಬ ನೋವು ತಿನ್ನುವವನ ಥರ ಕಂಡ. 'ಗೊತ್ತು....' ಅಂದೆ. 'ತಂದೆ ತಿಥಿ ಮಾಡ್ಲಿಲ್ಲ. ಹೇಳ್ದ ಮಾತು ಕೇಳಲ್ಲ. ಕುಡಿತಾನಂತೆ. ಸೂಳೆಮನೆ ಬೇರೆ. ಎಷ್ಟಾದರೂ ಸಾಕ್ದ ಮಗ. ಇಷ್ಟೆ ತಾನೆ?'.... ಚಂದು ತುಟಿ ಕಚ್ಚಿ ತಲೆ ತಗ್ಗಿಸಿ, ನೋಡಿ, ಮೊದಲಿನ ಹಾಗೆ ದಪದಪ ಹೋದ. ಮತ್ತೆ ಅವ ಬರುವವ ಎಂದು ಅನಿಸಲಿಲ್ಲ. ಸ್ಟ್ರಾಂಗ್ ಕಾಫಿಗೆ ಹೇಳಿ ಸಿಗರೇಟು ಹಚ್ಚಿ ಹೊರ ನೋಡಿದ. ಹರಿಯುವ ಬಸ್ಸು ಲಾರಿ ರಿಕ್ಷಾ ಜನ ಎಲ್ಲ ಚಲನೆ ಕಳೆದಕೊಂಡ ಥರ ಕಾಣಿಸಿದುವು.

ಮನೆಮಂದಿಯೆಲ್ಲ ಹಜಾರದಲ್ಲಿ ಚೆಲ್ಲಿಕೊಂಡು ಕೂತಿದ್ದರು. ತಮ್ಮ ಕೈಜಗ್ಗಿಸಿ 'ಆಚೆಗೆ ಹೋಗುವ ಬಾ" ಅಂತು. ಮನಸ್ಸಾಗಲಿಲ್ಲ. ಇದುವರೆಗೆ ದೊಡ್ಡತಮ್ಮನ ಮಾತಾಡಿಸಿದ್ದು ಮೂರೊ ನಾಲ್ಕೊ ಸಲ. ಎಲ್ಲದಕ್ಕೂ ಆಊ ಮುಗೀತು. ಅವ್ವ ತನಗಾಗಿ ಹಲುಬಿದ್ದ ಪುರಾಣದಷ್ಟು ಹೇಳಿದಳು. "ನಿನ್ನ ಕೊಡುವಾಗ ಬೆಂಕಿ ಮುಂದ ಪ್ರಮಾಣ ಮಾಡಿಸಿದ್ರು.

ಅವ್ರು ಸಾಯೋವರ್ಗೂ ನಿನ್ನ ನೋಡ್ಬಾರ್ದು ಅಂತ" ಬಹಳ ಹೇಳಿದಳು. ತಂಗಿ ಬಂದು, ಒಂದು ಭಂಗಿಯಲ್ಲಿ ಕೂತು ಅಲ್ಲಿ ಹೇಗೆ ಏನು ಎತ್ತ ಅಂತ ವಿಚಾರಿಸುತ್ತಿದ್ದುದು ಬಹಳವಾಗಿ ಹಿಡಿಸುತ್ತಿತ್ತು-ಅವಳ ರೀತಿ.

ಅಪ್ಪ ಅವ್ವ ಹಟ್ಟಿ ಎಲ್ಲ ಗೆಲುಗೆಲು. ಆನಂದುವಿಗೆ ದಿಗಿಲು. ತಂಗಿ ಒಳಗೊಳಗೆ ನಗುತ್ತಿದ್ದಳು. ಹತ್ತಿರ ಕರೆದು ಕೇಳಿದ್ದಕ್ಕೆ ಒಂದುಥರ ತುಟಿಮಾಡಿ ಹೋದಳು. ಅಪ್ಪ ಕರೆದಾಗ ಹೋಗಿ ಪಕ್ಕ ಕೂತ. "ದೇವ್ರು ದಯ. ನಾ ಅಂದ್ಕೊಂಡಂಗೆ ಆಯ್ತು. ಈ ಕಾಡ್ಗೇ ಗಟ್ಟಿಕುಳ ಅವ್ರು. ಹೊಲ ಮನೆ ಅಂತ ವಿಪರೀತ. ಚಿನ್ನದಂಥ ಒಬ್ಳೇ ಮಗ್ಳು. ಏನೋ ದೊಡ್ಡ ಮನಸ್ಸು ಮಾಡಿ ನಿನ್ನ ಮನೆಯಾಳ್ನನಕ್ಕೆ ತಂದ್ಕೊಳ್ಳಕ ಒಪ್ಕಂಡ್ರು". ಆನಂದುವಿಗೆ ಗೊಂದಲಿಸಿಕೊಂಡು ಮೈತುಂಬ ಸಿಡಿಮಿಡಿ ಎದ್ದಿದ್ದು. ಉಸಿರುಕಟ್ಟಿ ಗಟ್ಟಿಯಾಗಿ "ಇದೆಲ್ಲ ಆಗೊಲ್ಲ" ಎಂದು ಎದ್ದು ನಿಂತ. ಅಪ್ಪ ಕೂತ್ಕೊ ಹೇಳಿದರೂ ಕೂರಲಿಲ್ಲ. ಆನಂದುವಿನ ರೀತಿ ಕಂಡು ಅಪ್ಪ "ನೀಯೇನೂ ಸಣ್ಣವ್ನಲ್ಲ, ಹಿರೀ ಮಗ. ನಿನಗಿಂತ ಸಣ್ಣವು ಮೂರು ಐಕಳು. ನೀನೇ ನೋಡು" ಎಂದು ಒಂದೆ ಉಸುರ ಅಂದನು. ಆನಂದುವಿಗೆ ಗೊಂದಲಿಸಿಕೊಂಡು ಮಾತಾಡಲೂ ಆಗದೆ ತಿರುಗಿ ನೋಡದೆ ಕಿರುಮನೆ ಕಡೆ ನಡೆದರೆ ಅವ್ವ ಹಿಂದೆಯೆ ಬಂದದು ರೇಗಿಸಿತು. ತಟ್ಟನೆ ಹಿಂದಕ್ಕೆ ತಿರುಗಿ "ನಿದ್ದೆ ಬತ್ತಾದೆ. ಹೋಗು" ಎಂದು ಜೋರು ಅಂದುದು. ಎಲ್ಲ ನಿಂತಿತು.

ಮಾರನೆಯ ದಿನ ಆನಂದ ಹೊರಕ್ಕೆ ಹೋಗಲೇ ಇಲ್ಲ. ತಂಗಿ ಏನಾಯಿತು ಯಾಕೆ ಎಂದೆಲ್ಲ ನೊಂದುಕೊಂಡು ವಿಚಾರಿಸಿದಳು. ಅಪ್ಪ ಮುಖ ಕಾಣಿಸಿಕೊಳ್ಳಲಿಲ್ಲ. ತಮ್ಮ ದೂರ ದೂರವೇ ಇತ್ತು. ಅವ್ವ ಬಂದ ಸಲವೆಲ್ಲ ದೆವ್ವದ ಥರದ ಮಾತನ್ನಗತು ಹೋಗುತ್ತಿದ್ದಳು. "ಸಾವ್ಕರ್ರು ತಲೆ ಇರೋವರ್ಗೆ ಅಲ್ಲಿರೋದು. ಆಮೇಲ ನಿನ್ನ ಇಷ್ಟ ಬಂದಂಗೆ." ಬಹಳವಾಗಿ ಅಸಹನೆ, ಅಸಹನೆ, ತಲೆ ಚಚ್ಚಿಕೊಳ್ಳಬೇಕು ಎನ್ನುವಷ್ಟು. ಅವ್ವ ಬಂದು ಉದ್ದಕ್ಕೆ ನಿಂತು "ಹಿಂಗಾದ್ರು ಹೆಂಗಪ್ಪ ನಿನ್ನದು? ಒಂದು ಮಾತಿಲ್ಲ ಕಥಿಲ್ಲ. ನಾವೇನೂ ನಿನ್ನ ಕತ್ನ ಮ್ಯಾಲ ಕೂತಿಲ್ಲ". ಸುಮ್ಮನೆ ನೋಡಿದ. ಮತ್ತೂ ಮಾತಿಗೆ ತೊಡಗಿದಳು. ಚಟ್ಟನೆ "ಸುಮ್ನ ಹೋಗವ್ವ" ಅಂದ. ಅವ್ವ ದುರುದುರು ನೋಡಿ ಹೋದಳು.

ಹೊರಕ್ಕೆ ಕಾಲಿಟ್ಟಾಗ ಅವ್ವ ಆಂತು ನೋಡಿ "ನೀ ಬಂದು ನಾಳ್ಗ ಒಂಬತ್ತು ದಿನ" ಅಂದಳು. ಆನಂದುವಿಗೆ ಒಂಬತ್ತು ತಿಂಗಳು ಅನ್ನಲು ಬಾಯಿಗೆ ಬಂತು. ಹೊರ ಹೋಗುವುದು ಪಿಚ್ಚನೆ ತೋರಿತು. ಹಿಂದಲ ಬಾಗಿಲ ತೆಗೆದು ಹಿತ್ತಲಿಗೆ ಬಂದವನಿಗೆ ಕೆಂಪು ಸೀರೆ ಪುಟ್ಟಿದ್ದ ತಂಗಿ ಸಸಿಗಳಿಗೆ ನೀರು ಹಾಕುತ್ತಿದ್ದವಳು ನೋಡಿ ನಕ್ಕಳು. ನಗಲು ನೋಡಿದ.



ನೆರಳಿದ್ದ ಕಡೆ ಹೋಗಿ ಕೂತು ಸಿಗರೇಟು. ತಂಗಿಥರ ಅಕ್ಕರೆ ತುಳುಕಿಸಿ ನಗಲು ಬರುವುದಿಲ್ಲ. ತಮ್ಮನ ಥರ ಈ ಮಣ್ಣಲ್ಲೆ ಮೂಡಿದಂತನಿಸುವುದಿಲ್ಲ. ಅಪ್ಪನ ವ್ಯವಾರ, ಗಪ್ಪಗಿರುವ ತಮ್ಮ, ಅವ್ವನ ಹದ್ದುಬಸ್ತು. ಯಾರಾಗೂ ಅನಿಸುವುದಿಲ್ಲ, ಯಾರು ಏನೂ ಅನಿಸುವುದಿಲ್ಲ. ಇವರೆಲ್ಲ ಈ ನೆಲಕ್ಕೆ ಮಾಡಿಸಿದವರು ಅನ್ನಿಸಿತು. ತಂಗಿ ಶ್ ಶ್ ಸದ್ದು ಮಾಡಿದಳು. ನೋಡಿದ್ದಕ್ಕೆ ಬಾಯಿ ಸನ್ನೆ ಮಾಡಿ ಹತ್ತಿರ ಕರೆದಳು. ಹತ್ತಿರ ಹೋದಾಗ ಕೈಚಾಚಿ ತೋರಿಸಿ "ನೋಡು" ಅಂದಳು. ಒಂದು ಹುಡುಗಿ ಚೆಂದವಾಗಿ ತಲೆ ಬಾಚಿದ್ದವಳು ನೀರು ಸೇದುತ್ತಿದ್ದಳು. ತಂಗಿ ಜೋರು ಕೀಟಲೆ ದನಿಯಲ್ಲಿ "ಇವ್ಳೇ ಇವ್ಳೇ" ಎಂದು ಕೂಗಿದಳು. ಅವಳು ಗಕ್ಕ ನೋಡಿ ಬೆದರಿ ತಲೆತಗ್ಗಿಸಿ ಸರಸರ ಹೋಗಿಬಿಟ್ಟಳು. "ಇವ್ಳೇನೆ ನಿಂಗೆ, ಚೆಂದಾಗಿಲ್ವ" ಎಂದು ದಿಟ್ಟಸಿದ್ದಕ್ಕೆ "ಚೆಂದಾಗವಳೆ". ತುಟಿಕಚ್ಚಿ ನಕ್ಕು "ಮತ್ತೆ ಮದ್ವೆ ಆಗೋಲ್ಲ ಅಂತ ಮೂಲೆ ಹಿಡ್ದು ಕುಂತಿದ್ದಿ" ಅಂದಳು. "ಮದ್ವೆ ಆಗೋಲ್ಲ" ಎಂದು ಮುಂದೆ ಮಾತಾಡದೆ ಆನಂದು ಮೊದಲಿಗೆ ಹೋಗಿ ಕೂತದ್ದು, ತಂಗಿ ನೀರು ಹಾಕ ತೊಡಗಿದಳು. ಸ್ವಲ್ಪ ಹೊತ್ತು ಹೋದ ಮೇಲೆ ಶ್ ಶ್ ಮಾಡಿದಳು. ಏನು ಎಂದುದಕ್ಕೆ ಮತ್ತೆ ಬಂದವಳೆ ಅನ್ನುವ ಥರ ಮಾಡಿದಳು. ಕೂತಲ್ಲಿಂದಲೇ "ನೀನೇ ಬಾ ಇಲ್ಲಿ" ಅಂದ. ಹೆಜ್ಜೆ ಹೆಜ್ಜೆಗೂ ಹತ್ತಿರವಾದಳು. ಬಂದು ಕೂತು ಏನು ಎನ್ನುವ ರೀತಿ. ಹೇಗೆ ಹೇಳಬೇಕು ಎಂದು ಬಹಳ ಹೊತ್ತು.

"ಒಂದ್ಮಾತು ಕೇಳ್ತೀನಿ, ಏನೂ ತಿಳ್ಕೋಬೇಡ"
ಸುಮ್ಮನೆ ನೋಡಿದಳು.
"ನಾನು ನಿಂಗ ಅಣ್ಣ ಅನ್ನಿಸ್ತಾದ?"
"ನೀನು ನಂಗೆ ಅಣ್ಣಾನೆ ಅಲ್ವಾ?"
"ಅದ್ಸರಿ, ಅಣ್ಣ ಅಂತ ಅನ್ನಿಸ್ತಾದ ಅಂತ...."
ತಂಗಿ ತೊಡಕಾಡಿದಳು.
"ಎಂಥದಪ್ಪ, ನೀ ಕೇಳೋದೆ ಗೊತ್ತಾಗಲ್ಲ"
ಹಾಗೆ ಕುಳಿತಿದ್ದರು.
"ನಿನ್ನ ಜೊತೇಲಿ ಕುಂತ್ಕಂಡ್ರ ಕೆಲ್ಸ ಆಯ್ತದ"
ಎದ್ದು ನಿಂತು ನಗು ಚೆಲ್ಲಿ ಅಂದಳು.

ಹೊತ್ತಾರೆ ಎದ್ದು ಅಣ್ಣನ ನೋಡಲು ಬಂದ ತಮ್ಮನಿಗೆ ಎದ್ದು ಕಾಣುವಂತೆ ನೆಲದಲ್ಲಿ ಹಾಸಿಕೊಂಡಿದ್ದ ಕಾಗದ ಕಾಣಿಸಿತು. ಹತ್ತಿರ ಹೋಗಿ ಅಚ್ಚರಿಯಿಂದ ಜೋರಾಗಿ ಓದಿದ. "ನಿಮ್ಮ ಮಗ ನಿಮ್ಮ ಪಾಲಿಗೆ ಇಲ್ಲ". ಅಪ್ಪ ಓಡೋಡಿ ಬಂದ. ಅವ್ವ ಧಾವಿಸಿ ಬಂದಳು. ಹಾಸಿಗೆಯ ಸುತ್ತೆಲ್ಲ ಸಿಗರೇಟು ತುಂಡುಗಳು ಹೊಸಕಿ ಹರಡಿಕೊಂಡಿದ್ದವು.

ಅಪ್ಪ, ಅವ್ವನ ಕಡೆ ನೋಡಿದ, ಅವ್ವ ಸರಕ್ಕ ನಡುಮನೆಗೆ ಓಡಿ ಬಂದು ಪೆಟ್ಟಿಗೆ ಬೀಗ ತೆಗೆದು ನೋಡಿ "ಹಣ ಮುಟ್ಟಿಲ್ಲ" ಎಂದು ಜೋರು ಕೂಗಿದಳು. ದೊಡ್ಡ ತಮ್ಮ ಬಂದು ಏನು ಏನು ಎಂದು ನಿಂತ. ಹಟ್ಟಿ ತುಂಬ ಒಂದು ರೀತಿಯ ಗದ್ದಲ ಎದ್ದಿತ್ತು. ತಂಗಿಗೆ ಇನ್ನೂ ನಿದ್ದೆ ತಿಳಿದಿರಲಿಲ್ಲ.

(1971)

# ಡಾಂಬರು ಬಂದುದು

**ಊರ ಮೇಲುನೋಟ:**

ಊರಿಂದ ಬಂಡಿ ಮಾತ್ರವೆ ಓಡಾಡಲು ಲಾಯಕ್ಕಾದ ಓಣಿಥರ ಹೊಂಟ ಹಾದಿ ಮೂರು ಮೈಲಿ ಹೋಗಿ ಬಸ್ಸು ಓಡಾಡುವ ದೊಡ್ಡರಸ್ತೆಗೆ ಸೇರಿಕೊಳ್ಳುತ್ತದೆ. ದೊಡ್ಡ ರಸ್ತೆಯಿಂದ ಅದೇ ಹಾದಿ ಹಿಡಿದು ಹಿಂದಕ್ಕೆ ಬಂದರೆ ಕಳ್ಳಿ ಕವುಚಿಕೊಂಡ ಅದು ಗವ್ವನೆ ಊರವರೆಗೂ ಬಂದು, ದೆವ್ವ ನಿಂತ ಅರಳಿ ಮರಗಳ ಬಳಚಿ ಮುಂದೆ ಮೂರು ಸೆಲೆಯಾಗಿ ಒಡೆದುಕೊಂಡು ಊರೊಳಕ್ಕೆ ಧಾವಿಸುತ್ತದೆ. ಹಿಂಗೆ ಸೆಲೆ ಹೊಂಟ ಬೀದಿಯ ಅಕ್ಕಪಕ್ಕ ಒತ್ತೊತ್ತು ಹಟ್ಟಿಗಳು ತೆಕ್ಕೈಸಿಕೊಂಡಿದ್ದು ಉಸಿರಾಡಲೂ ಅಡಚಣೆ ಮಾಡುವಂತೆ ಮೊದಲು ನೋಟಕ್ಕೆ ಗಕ್ಕ ಕಾಣುತ್ತದೆ.

ಅದು ಯಾವುದಕ್ಕೂ ಹೇಳಿಕೊಳ್ಳುವಂಥ ಹಳ್ಳಿ ಅಲ್ಲ. ಎಣಿಸಿದರೆ ಹೆಚ್ಚೆಂದರೆ ಎಂಬತ್ತು ಮನೆಗಳು ಇದ್ದೀತು. ಎಲ್ಲ ಕಡೆ ಇರುವಂತೆ ಅಲ್ಲಿ ಒಂದು ತುಂಡು ಹೋಟಲ್ಲೂ ಇಲ್ಲ. ಇದ ಹಿಡಿದೇ ಊರ ಊಹಿಸಬಹುದು. ಮತ್ತು ಅಲ್ಲೆ ನಂಜನಗೂಡಲ್ಲೊ ಮೈಸೂರಲ್ಲೊ ಎಸ್ಸೆಲ್ಸಿ ಹತ್ತಿಬಂದ ನಾಕಾರೂ ಜನರೂ ಉಂಟು. ಲಕುಮ ರಾಜಪ್ಪ ಮಾದು ಶಂಭು ಇವು ಅವರ ಹೆಸರುಗಳು. ಈ ಹೆಸರುಗಳಿಗೂ ಪಟೇಲರಿಗೂ ಅಷ್ಟಕ್ಕಷ್ಟೆ. ಇಂದು ಹುಟ್ಟಿದ ಈ ತುಂಡುಗಳು ತಮ್ಮ ಎದುರಾ ತಲೆ ಎತ್ತಿ ತಿರುಗುವುದನ್ನು ಅವರು ಹೆಂಗೆ ಸಹಿಸುವರು? ತಾವು ಕಂಡಹಾಗೆ ತಮ್ಮ ಅಪ್ಪನ ಕಾಲದಿಂದಲೂ ಆಗಿದ್ದಿಲ್ಲ. ಆ ಮಕ್ಕಳು ಮೇಲು ಜಾತಿ ಕೀಳು ಜಾತಿ ಅನ್ನದೆ ಒಂದೇ ಹೊಟ್ಟೆಯಿಂದ ಬಿದ್ದಂತೆ ಹೊಲಾರ ಲಕುಮನೊಡನೆ ತಿರುಗುವುದ ಹಿಡಿದು ಅವರವರ ಅಪ್ಪಂದಿರ ಮೂಲಕ ಬೈಸಿದರು. ಅಪ್ಪಂದಿರ ಮಾತ ಕೇಳುತ್ತವೆಯೆ ಅವು? ಆ ಹೈಕಳು ಯಾವುದಾರು ಹೆಣ್ಣು ಕೆಣಕಿ ಸಿಕ್ಕರೆ ಚಾವಡಿಗೆ ಎಳಸಿ ಬರೀ ನಿಕ್ಕರು ಮಾಡಿ ಕಂಬಕ್ಕೆ ಕಟ್ಟಿಸಿ ಸೆಬ್ಬದಲ್ಲಿ ಸಮಾ ಬಡಿಯುವಂಥ ಟೇಮಿಗೆ ಕಾದಿದ್ದಾರೆ. ಕೆಣಕದೆ ಇರುತ್ತಾವೆಯೆ ಎಂಬ ನಂಬಿಕೆಯು ಇದೆ.

## ರೋಡು ಮಾಡಲು ಆರ್ಡರು:

ಇಂಥ ಸಂದರ್ಭದಲ್ಲಿ ಊರ ರೋಡಿಗೆ ಮೇಲಿಂದ ಆರ್ಡರು ಬಂತು. ಪಟೇಲರ ಮಯ್ಯಿ ಇದ್ದಷ್ಟೂ ಹಿಗ್ಗಿತು. ಕಿಚ್ಚು ಹತ್ತಿಕೊಂಡಂತೆ ಊರಿಗೆ ಸುದ್ದಿ ಹಿಡಿಯಿತು. ಈ ಸಂದರ್ಭದಲ್ಲೆ ಏಳೆಂಟು ವರ್ಷಗಳ ಕೆಳಗೆ ಊರಿಗೆ ಮಿನಿಷ್ಟರು ಬಂದಿದ್ದನ್ನೂ ಪಟೇಲರೇ ಕೈಗೆ ನಿಂಬೆಹಣ್ಣು ಕೊಟ್ಟು ಹಾರ ಹಾಕಿ, ತಮ್ಮ ಊರು, ಒಂದು ಊರು ಅನ್ನಿಸಿಕೊಳ್ಳಬೇಕಾದರೆ ಒಂದು ರೋಡು ಅನ್ನುವುದಾದರೂ ಇರಬೇಕೆಂದೂ ಮಾಸ್ವಾಮಿಯವರು ಮನಸು ಮಾಡಬೇಕೆಂದೂ ಬಿನ್ನೈಸಿಕೊಂಡಿದ್ದನ್ನು ನೆನಸಿಕೊಳ್ಳಬಹುದು. ಇಂದೇ ಪಟೇಲರು ನಂಜನಗೂಡು ಹತ್ತಿ ಸಂಜೆ ಮಾಡಿಕೊಂಡು ಊರಿಗೆ ಬಂದರು. ಬರುತ್ತ ನಮ್ಮ ಪಟೇಲರೆ ರೋಡಿಗೆ ಕಂಟ್ರಾಕ್ಟರೆಂದೂ ಇನ್ನು ತಿಂಗಳಾನುಗಟ್ಟಲೆ ಯಾರೂ ಕೆಲ್ಸಕ್ಕೆ ಕಯ್ಯಿಬಾಯಿ ನೋಡುವಂತಿಲ್ಲವೆಂದೂ ಮತ್ತು ಸರ್ಕಾರಿ ದುಡ್ಡಲ್ಲಿ ಮಿಗಿಸಿ ದೇವಸ್ಥಾನ ಊರ್ಜಿತ ಗೊಳಿಸುವರೆಂದೂ ಯಾರ ಹಟ್ಟಿಬಾಗಿಲು ತೆಗೆದರೂ ಸುದ್ದಿ ಆಯ್ತು.

## ಊರ ಮುಂದಲು:

ಅದೆಲ್ಲ ಆಗಿ ಈಗ್ಗೆ ಬಹಳ ದಿನಗಳು ತಿಳಿಯದಂತೆ ಕಳೆದಿವೆ. ಈಗ ಊರ ಮುಂದಲು ಒಂದು ರಣರಂಗವೆ. ಹಿಂದೆ ನೋಡಿದಷ್ಟೂ ಎತ್ತರಕ್ಕೆ ಹಬ್ಬುತ್ತಿದ್ದ ಅರಳಿಮರಗಳು ಈಗ ನೆಲ ಕಂಡವೆ. ಹಿಂದೆ ಸೆಟೆದು ನಿಂತ ಅರಳಿಮರಗಳ ಮರೆಯಲ್ಲಿ ಊರ ಕಂಡವರಿಗೆ ಈಗ ಊರು ಬಿಕೋ ಅನ್ನಿಸಲೇಬೇಕು. ಅವು ಇದ್ದವು ಅನ್ನುವುದಕ್ಕೆ ಎಲ್ಲೂ ಎಳ್ಳಷ್ಟೂ ಸುಳಿವು ಕಾಣದು. ಅವು ಇದ್ದಂಥ ಸ್ಥಳದಲ್ಲಿ ಈಗ ಮಿಷನ್ನು ಓಡಾಡುತ್ತಿವೆ. ಅಳೆತ್ತರದ ಕಲ್ಲುಚಕ್ರದ ಮಿಷನ್ನುಗಳು ಹೊಗೆಬಿಟ್ಟು ಓಡಾಡುವ ಚಂದಕ್ಕೆ ಪಳ್ಳಿ ಹೈಕಳೇನು ಗಂಡಸು ಯಮ್ಮ ಅನ್ನದೆ ನೋಡುತ್ತಾ ತಮ್ಮ ಮರೆಯುವುದೂ ಉಂಟು. ಅಲ್ಲಿ ಎದ್ದೇಳುವ ಸದ್ದು ಊರ ಮೀರಿ ಆಚೆಗೂ ಹೋಗುವುದು. ದೂರದಿಂದ ನೋಡಿದ ಯಾವ ಮಗನಿಗೂ ಅಲ್ಲೋಲ ಕಲ್ಲೋಲ ಆಗುತ್ತಿರುವಂತೆ ಕಾಣಬೇಕು. ಹತ್ತಿರ ಬಂದರೆ ಅದೇ ಊರಿನ ಜನರು. ಅವರೇ ಮಾತಾಡಿಸಿದರೆ ಅವರೇ ಎಂದು ತಿಳಿಯಬಹುದು. ಹೊರತು ಗುರುತು ಹತ್ತದಷ್ಟು ಅವರ ಯಾಸ ವರಸೆ ಬದಲಿಸಿಬಿಟ್ಟಿದೆ- ನೆಲಕ್ಕಂಟಿಕೊಂಡು ಕಪ್ಪಾಗಿರುವ ಟಾರಿಗಂಟಿಕೊಂಡು ಅವರು ಮೂಡಿದಂತೆ ಚಲಿಸಿದಂತೆ.

ಒಕ್ಕಡೆ ಕುಂತು ಹತ್ತಾರು ಯಮ್ಮ ತಲೆಗೆ ಸೆರಗು ಸುತ್ತಿಕೊಂಡು ಜಲ್ಲಿ ಕಲ್ಲು ಚಚ್ಚುತ್ತಿರುವರು. ಗುಂಪಲ್ಲೆ ಒಬ್ಬಳು ಸಣ್ಣ ದನಿ ಎತ್ತರಿಸಿ 'ಸುವ್ವಿ ಬಾ ಚನ್ನ ಬಸವಯ್ಯ' ಮೊಳಗಿಸುತ್ತಿರುವಳು. ಉಳಿದವರ ಕುಮ್ಮಕ್ಕು ಕೊಡುವ ಸೊಲ್ಲು ಅದ ಮೀರಿಸಿಕೊಂಡು ದೂರದಲ್ಲಿ ಕೆಲಸ ಮಾಡುವವರ ಆಚೆಗೂ ಕೇಳಿಸುವಂತೆ. ಕೆಲಸ ಮಾಡುವವರು ಕೆಲಸ



ಮಾಡುತ್ತಾ ಫರ್ಲಾಂಗು ಉದ್ದ ಲವಲವಿಕೆ ತುಂಬಿದೆ. ಅಳತೆ ಮಾಡುವುದು ಅದ ಅಗೆಯುವುದು ಅಗೆದು ಸಮಮಾಡುವುದು ಸಮಮಾಡಿ ನೀರು ಚಿಂಪರಿಸಿ ಹದಮಾಡಿದ ಜಲ್ಲಿಟಾರ ಕೈ ಬಂಡಿಯಿಂದ ಎಳೆದು ತಂದು ಸುರಿಯುವುದು ಸುರಿದುದ ಹರಡುವುದು ಒಕ್ಕಡೆ. ಹಿಂದಕ್ಕೂ ಮುಂದಕ್ಕೂ ಹೋಗುವ ಬರುವ ಮಿಷನ್ನು. ಸಮಾ ಮಾಡುವ ದಗ್ ದಗ್ ಮಿಷನ್ನು. ಬೆಂಕಿ ಉಗುಳುತ್ತ ಜೆಲ್ಲಿ ಟಾರು-ಮರಳ ಒಕ್ಕೂಡಿಸುವ ಮಿಷನ್ನು. ಯಾವುಯಾವುದಕ್ಕೂ ಮಿಷನ್ನು. ಎಷ್ಟಂತ ಹೇಳುವುದು. ಎಲ್ಲವೂ ಕಪ್ಪುಕಪ್ಪಗೆ ಯಾಸ ತಾಳಿ ಮೇಲೆಳುತ್ತಿದೆ. ಅಳತೆ ಮಾಡುವಲ್ಲಿ ಪಟೇಲರು ಕೈಕಟ್ಟಿ ನಿಂತಿರುವರು.

## ಕೈಯ್ಗೆ ಬಾಯ್ಗೆ ಟಾರು:

ಹೈಕಳು ಅಂದರೆ ಎಲ್ಲ ಊರಿನವೂ ಒಂದೆ. ಪಳ್ಳಿ ಬಿಟ್ಟಮೇಲೆ ಅವು ಇಲ್ಲಿ ಜಮಾಯಿಸುತ್ತವೆ. ದೊಡ್ಡವರು ಗದರಿಸಿದಾಗ ದೂರ ಹೋಗುತ್ತವೆ. ಅವರು ಎತ್ತಗೊ ತಿರುಗಿದಾಗ ಮತ್ತದೆ. ಒಟ್ಟಲ್ಲಿ ಹೈಕಳ್ಲಿ ಸಂಜೆ ಮಾಡುವುದು ಟಾರು ಕಾಯ್ಸುವಲ್ಲೆ. ಕತ್ತಲು ಇಳಿದು ಶಾಣೆ ಹೊತ್ತಾದಗ ಹಟ್ಟಿ ಮುಟ್ಟವು. ದೊಡ್ಡವರೆ ಊರ ಮುಂದಲಿಗೆ ಬಂದು ಅವಕ್ಕೆ ನಾಕು ಬಡಿದಾರು ತಂತಮ್ಮ ಜತೆ ಕರಕೊಂಡು ಹೋಗಬೇಕು. ಬಂದವರೂ ರೋಡು ಆಗುವ ಅದ್ಭುತವ ಚಣೊತ್ತಾರೂ ನೋಡದೆ ಹೋಗರು. ಹಟ್ಟಿ ಕಡೆ ತಿರುಗಲು ಹೈಕಳ ಕೈ ಹಿಡಿದರೆ ಅವುಗಳ ಕೈ ಟಾರು ದೊಡ್ಡವರಿಗೂ ಮೆತ್ತಿಕೊಳ್ಳುವುದು. ರಂಗಪ್ಪ ಎಂಬಾತ ತನ್ನ ಮಗನ ಕರೆದೊಯ್ಯಲು ಬಂದಾಗಲೂ ಹಂಗೆ ಆಯ್ತು. ಅವ ರೇಗಿ ಮಗನಿಗೆ ಮೇಷ್ಟ್ರು ಕಲಿಸಿಕೊಡೋದು ಇದ? ಎಂದು ನಾಕು ಬಿಗಿದ. ಅದು ದೊಡ್ಡಗೆ ಬಾಯಿ ತೆಗೆದು ಅಳಲು ಸುರು ಮಾಡಿ ನಿಲ್ಲಿಸಲೇ ಇಲ್ಲ. ರಂಗಪ್ಪನಿಗೆ ಸಹನೆ ಮೀರಿ ಬಾಯಿಗೂ ಒಂದೇಟು ಕೊಟ್ಟಾಗ ಆ ಹೈದ ಅಳು ಜೋರು ಮಾಡುತ್ತ ತನ್ನ ಎರಡು ಕೈಯನ್ನೂ ಬಾಯಿಗೆ ತಂದುಕೊಂಡಿತು. ಕೈಯ್ಗಳ ಟಾರು ಬಾಯಿಗೆ ಬಂದು ಬಾಯಿ ಬಿಡದಂತಾಗಿ ಅಳು ನಿಂತಿತು. ಹೀಗೆ ಇಂಥವು, ಸಂಜೆ ಆಗುತ್ತ. ಮತ್ತೂ ಅಂದರೆ ಯಮ್ಮ ಕೆಲಸ ಬಿಟ್ಟು ಏಳುವಾಗ ಟಾರನ್ನು ಉಂಡೆ ಮಾಡಿ ಕೈಯ್ಗೆ ತಕ್ಕೊಳ್ಳುವುದು ರೂಢಿ. ಯಾರೋ ಒಬ್ಬಳು ತೂತುಮಡಕೆಗೆ ಟಾರುಮೆತ್ತಿ ಸುರಿಯುವುದು ಏಕ್‌ದಂ ನಿಂತುಹೋಯ್ತಂತೆ. ಇದಾದ ಮೇಲೆ ಇಂಥದು ಊರ ಯಾವ ಮೂಲೇಲಿ ಆದರೂ ಅಲ್ಲಿಗೆ ಟಾರು ಹೋಗುತ್ತದೆ. ಅಥವಾ ತಂದಿಟ್ಟಿರುವ ಮನೆಯಿಂದ ಈಸಿಕೊಳ್ಳುವಷ್ಟು ಚಲಾವಣೆ ಇದೆ.

## ಓದುಗರ ಓಲೆಗೊಂದೋಲೆ:

ದೊಡ್ಡ ಮಿಷನ್ನು ನಡೆಸುವ ಒಬ್ಬಾತ ಸೆಳಕಿನವನು ಅಲ್ಲುಂಟು. ಅವ ನಂಜನಗೂಡಿಂದ ದಿನಾ ಬಂದು ಹೋಗುವುದು ಮಾಡುತ್ತಾನೆ. ಅಂದು ಅವ ಕೈಲಿಡಿದು

ಬಂದಿದ್ದ ಪೇಪರಲ್ಲಿ ತಮ್ಮ ಊರ ಸುದ್ದಿ ಬಂದಿದೆಯಂತೆ ನಿಜವೆ ಎಂದು ಗುಲ್ಲು ಎದ್ದು ಯಾರೂ ಯಾವ ಕೆಲಸಕ್ಕೂ ಕೈಹಾಕದೆ ಸೆಳಕಿನವನ ಸುತ್ತಲೂ ಗುಂಪುಗೂಡಿದರು. ಪಟೇಲರು ತುಂಬವೆ ಬಿಸಿ ಆಗಿದ್ದರು. ಬಂದಿದ್ದ ಊರ ಸುದ್ದಿ ಹಿಂಗಿತ್ತು: ಸ್ವಾಮಿ, ನಮ್ಮೂರಿಗೆ ರೋಡು ಆಗಬೇಕೆಂದು ದೊಡ್ಡ ಮನಸು ಮಾಡಿ ಸರ್ಕಾರ ನಡೆಸಿಕೊಡುತ್ತಿರುವುದೂ ಈಗ ರೋಡು ಆಗುತ್ತಿರುವುದೂ ಸರಿಯಷ್ಟೆ. ಆದರೆ ಈ ರೋಡಿನ ಕಂಟ್ರಾಕ್ಟರಾದ ಪಟೇಲರು ಸರ್ಕಾರಿ ದುಡ್ಡಲ್ಲಿ ಮಿಗಿಸಿ ದೇವಸ್ಥಾನ ಊರ್ಜಿತಗೊಳಿಸುತ್ತಾರೆಂದು ತಿಳಿದುಬಂದಿದೆ. ಏನೇ ಆಗಲೀ, ಇದು ಸರ್ಕಾರಿ ಹಣದ ದುರುಪಯೋಗ, ಇಂತಹದು ಆಗದಂತೆ ತಡೆಗಟ್ಟಬೇಕೆಂದು ನಾವು ಸಂಬಂಧಪಟ್ಟವರಲ್ಲಿ ಪ್ರಾರ್ಥಿಸುತ್ತೇವೆ-ನೊಂದವರು.

## ನ್ಯಾಯಕ್ಕೆ ಹೇಳಿದರು:

ಅಂದು ರೋಡಿನ ಕೆಲಸ ನಡೆಯಿತು ಅಂತ, ನಡೆಯಲಿಲ್ಲ ಅಂತ ಏನು ಅಂತ ಕರಾರುವಾಕ್ಕು ಹೇಳಲು ಬರುವುದಿಲ್ಲ. ನಡೆದರೂ ನಡೆಯದಂತೆ ನಡೆಯಿತು ಅನ್ನಬಹುದೆ? ಎಂತೆಂತದೊ ಆಗಬೇಕಾದ್ದು ಎಂತೆಂತದೊ ಆಗತೊಡಗಿದೆ. ಏನಾಗುತ್ತೊ ಅಂತ ಊರ ಬೀದಿ ಒಳಗ ಭಯ ಹರಿದಾಡಿತು. ಸಂಜೆ ಆಗುತ್ತ ಆಗುತ್ತ ಅದು ಹೆಚ್ಚು ಹೆಚ್ಚು ದಪ್ಪ ಆಗುತ್ತಿತ್ತು. ನ್ಯಾಯಕ್ಕೆ ಮನೆಗೊಂದಾಳು ಚಾವಡಿಗೆ ಬರಬೇಕೆಂದು ಪಟೇಲರು ತಮ್ಮಟೆ ಬಡಿಸಿ ಸಾರಿಸಿದರು. ಈಗ ಈಗಷ್ಟೆ ಕತ್ತಲು ನಿಧಾನ ನೆಲಕ್ಕೆ ಇಳಿಯುತ್ತಿದ್ದುದು ಈಗತಾನೆ ಪೂರ್ತ ಅಗತುಕೊಂಡಿತು. ಹೊರಗ ನಡೆದಾಡಿದರ ಒಬ್ಬರ ಮೊಖ ಒಬ್ಬರಿಗೆ ಕಾಣದಷ್ಟು ಗವ್ವ. ಹಟ್ಟಿ ಕಿಂಡಿಗಳಿಂದ ಮಂಕು ದೀಪದ ಬೆಳಕು ಹೊರಕ್ಕೆ ನೆಸೆದು ಕತ್ತಲೊಳಗಾಗುತ್ತಿತ್ತು.

## ಚಾವಡಿ:

ಚಾವಡಿ ಒಳಗ ಲಾಟೀನು ದೊಡ್ಡತಗೆ ಹೊಗೆ ಬೆಳಕು ಕುಕ್ಕುತ್ತ ಅದೆ. ಆಗಲೇ ನಾಲ್ಕಾರು ಉಂಡಾಡಿಗಳು ತಮಗೆ ಯಾವುದೂ ಸಂಬಂಧ ಇಲ್ಲದವರಂತೆ ಯಾಸ ಹಾಕಿ ಮಲಗಿಬಿಟ್ಟವರೆ. ಅಲ್ಲಿಗೆ ಒಬ್ಬರಾಗಿ ಇಬ್ಬರಾಗಿ ಜನ ಕೂಡಿಕೊಳ್ಳುತ್ತಿದೆ. ಹೆಚ್ಚು ಹೆಚ್ಚು ಕೂಡಿದಂತೆ ಗಲಗು ಗದ್ದಲ ಹೆಚ್ಚಾಗುತ್ತಿದೆ. ಚಣೊತ್ತು ಕಳೆದ ಮೇಲೆ ಅಲ್ಲಿಂದ ಹಾಹೋ ಹೊ ಹೊ ಎದ್ದು ಊರ ಮುಳುಗಿಸತೊಡಗಿತು. ಪಟೇಲರು ನಡುಮಧ್ಯೆ ಕುಂತವರೆ. ಲಾಟೀನು ಬೆಳಕು ನೇರ ಅವರ ಮುಖಕ್ಕೆ ಬೀಳುತ್ತಿತ್ತು. ಅವರ ಮೊಖದಲ್ಲಿ ತೆಳ್ಳಗೆ ಬೆವರಾಡುವುದನ್ನೂ ಹಣೆಯ ನೆರಿಗೆ ಎದ್ದು ಮಾಯವಾಗಿ ಎದ್ದು ಹೋಗುವ ಬಗೆಯನ್ನೂ ಕಾಣಬಹುದು. ದೂರದ ಮೂಲೆಯಲ್ಲಿ ಕುಂತವರು ಯಾರಾರು ಅಂತ ಬೀಡಿ ಹಚ್ಚಿದಾಗ ಆ ಬೆಳಕಲ್ಲಿ ಗುರುತಿಸಬಹುದು. ಅಂಥ ಕಿಕ್ಕಿರಿದಷ್ಟು ಜನರು.



ಒಬ್ಬ: ಸುರು ಮಾಡ್ರಪ್ಪೊ.

ಇನ್ನೊಬ್ಬ: ಎಲ್ಲರ್ಗು ಗೊತ್ತೀರೋದೆ ಅದು. ಇನ್ನೇನ್ನ ಸುರುಮಾಡೋದು? ಪೂಜ ಮಾಡೋದ ಬಿಟ್ಟು.

ರಾಜಪ್ಪ: ಏನಣ್ಣ ಹಂಗಂದ್ರ ಅರ್ಥ.

ಮತ್ತೊಬ್ಬ: ಅರ್ಥಗಿರ್ಥ ನಿಮಗ್ಗಾನಿಯಪ್ಪ ಗೊತ್ತು. ನಾವೇನ ಇಸ್ಕೊಲ್ಗೋಗಿ ಮಂಟಾಕಿದ್ದವ?

ಶಾನುಭೋಗರು: ವಸಿ ಸುಮ್ಕಿರ್ರಯ್ಯ. ಮಾತಾಡಿ ಪಟೇಲ್ರೆ ನೀವು.

ಪಟೇಲರು: ಮಾತಾಡೋದು ಏನಿದ್ದದು ಹೇಳಿ.

ಶಾನುಭೋಗರು: ಕಾಗ್ದ ಬರ್ದು ಊರ್ನ ಮಾನ ತೆಗೆದವರು ನೀವುಗಳೆ ಅಂತ ಎಲ್ಲರ್ಗೂ ಗೊತ್ತು. ಅದ ಒಪ್ಪೋ ಥರ ಅಪ್ರಿ ತಾನೆ ನೀವುಗಳು.

(ಲಕುಮ, ರಾಜಪ್ಪ, ಶಂಭು, ಮಾದು ಕಡೆ ಶಾನುಭೋಗರು ನೋಡುವರು. ಹೌದು ಎಂಬಂತೆ ಅವರು ತಲೆ ಆಡಿಸುವರು. ಹೊರಗೆ ಇದ್ದವರ ಎದೆಗೆ ಗುದ್ದುವಂತೆ ಗದ್ದಲ ಎದ್ದು ಹೊರ ಬರುವುದು.)

ಪಟೇಲರು: ಅದ್ರಲ್ಲಿ ಏನ್ರಯ್ಯ ನೀವುಗಳು ಅನ್ಯಾಯ ಕಂಡದ್ದು?

(ಪಟೇಲರ ಮಾತುಗಳಷ್ಟೆ ಒಡೆದು ಕೇಳಿಸುವುದು. ಯಾರೂ ತುಟಿಪಿಟಕ್ಕೆನ್ನುವುದಿಲ್ಲ).

ರಾಜಪ್ಪ: ಯಾವ ಹಣಾನೊ ಯಾವುದಕ್ಕೊ ಹಾಕದ್ರು ಇನ್ನೇನ ಆಗೋದು?

(ಸದ್ದು ಏಳುವುದು. ಶಾನುಭೋಗರು ಕೈಯಾಡಿಸುವರು. ಸದ್ದು ನಿಧಾನ ಕಮ್ಮಿಯಾಗುವುದು.)

ಪಟೇಲರು: ನಾಯಾನ ನನ್ನ ಇರೊ ಮಕ್ಕಳ್ಗಾಗಿ ಹಣ ತಿಂದ್ನೊ. ಊರ್ಗಾಗಿ ದೇವ್ರು ಕೆಲ್ಸಕ್ಕಾಗಿ ಹಂಗ ಮಾಡ್ದನೊ?

ಮಾದು: ನೀವು ಯಾಕಾರು ಮಾಡಿ ಸ್ವಾಮಿ. ಆದ್ರ ಮಾಡೊ ಅಂಥದಕ್ಕ ಮಾಡ್ಲಿಲ್ಲ.

(ಸದ್ದು ಏಳುವುದು. ಮುನ್ನಿಗಿಂತ ಜೋರಾಗೆ. ಯಥಾಪ್ರಕಾರ ಶಾನುಭೋಗರು. ಈ ಸಲ ಒಂದಿಬ್ಬರು ಎದ್ದೂ ನಿಲ್ಲುವರು).

ಒಬ್ಬ: ನಿಮ್ಗ ದೇವ್ರು ದಿಂಡ್ರು ಹಿರೀಕರು ಅಂತ ಒಬ್ರೂ ಇಲ್ವಾ?

ಇನ್ನೊಬ್ಬ: ಇದ್ರ ಈ ಯಪಾರ ಮಾಡ್ತ ಇದ್ವ ಅವ್ರು?

ಮತ್ತೊಬ್ಬ: ಸಾಕು ಸುಮ್ನಿರ್ರಪ್ಪೊ. ತಲಗೊಂದು ಮಾತ್ಯಾಕ?

ಮಗದೊಬ್ಬ: ಹಿಡ್ಕಂಡು ನಾಕ ಬಡೀರುಡ. ಸರಿಯಾಯ್ತದ. ಕೇಮಿಲ್ದೆ ಮಾತಾಡಿ.

ರಾಜಪ್ಪ, ಶಂಭು, ಶಂಭುಅಪ್ಪ: ಯಾರಪ್ಪ ಅವ? ಬಡೀರಿ ಬನ್ನಿ ಮತ್ತ.

ಅದ್ನೂ ನೋಡವ್ರು. ನಿಮ್ಮ ಮೂಗ್ನ ನ್ಯಾರಕ ನಿಮ್ಗ ಸರಿ.

ಪಟೇಲರು: (ದನಿ ಎತ್ತರಿಸಿ) ನೀವ್ಗಳು ಮಾಡಿದ್ದೇ ಬೋ ಸರಿ ಕಣ್ರಯ್ಯೋ.

ಶಂಭು: ನೀವು ಮಾಡಿದ್ದೆ ನಿಮ್ಗ ಸರಿ. ಅದ್ಯಾಕ ಮಾತು?

ಪಟೇಲರು: ಅದೇನ್ರಲ? ಅಷ್ಟೊ ಧಿಮಾಕ್ನ ಮಾತ ಆಡ್ತ ಅವ್ರಿ. ಅಷ್ಟು ಸದರ ಬಿದ್ದೋಗಿದ್ದನ ನಾನು?

ಎಂದು ಪಟೇಲರು ಕೈ ಬಿಗಿ ಹಿಡಿದುಕೊಂಡು ತಟಕ್ಕ ಎದ್ದು ನಿಂತರು. ಆ ರಭಸಕ್ಕೆ ಲಾಟೀನಿಗೆ ತಲೆ ಬಡಿದು ಟಳ ಟಳ ನೆಲಕ್ಕೆ ಉದುರಿತು. ಲಾಟೀನ ಬೆಳಕು ಹಾರಾಡಿ ಹಾರಾಡಿ ಕೊನೆಗೆ ಜೀವ ಹೋಗಿ ಕತ್ತಲು ಅಮರಿಕೊಂಡಿತು. ಆ ಕ್ಷಣವೆ ಹಾ ಹೊ ದಬ್ ದಬ್ ಬಯ್ಗಳು ತುಂಬಿಕೊಂಡವು. ಆದಷ್ಟು ಬೇಗ ಚಾವಡಿಯಿಂದ ಕಿತ್ತುಕೊಂಡು ಹೊರಕ್ಕೆ ಹೋಗಿಬಿಡಲು ಎಲ್ಲ ಹವಣಿಸಿದರು. ಹಿಂಗೆ ಚಣೊತ್ತು ನಡೆದು ಅಲ್ಲಿಂದ ಆಮೇಲ ಎಲ್ಲ ನಿಂತುಹೋಯ್ತು. ಊರ ಹಟ್ಟಿದಾರಂದಗಳು ಮುಚ್ಚಿಕೊಂಡುಬಿಟ್ಟವು.

## ಹೊಸೂರ ಹೊಸ ಮಾತು:

ಊರು ಇನ್ನೂ ಮಲಗೇ ಇದೆ ಅನ್ನಬಹುದು. ರಾತ್ರಿ ಆದದ್ದ ಕನಸ ಕಾಣುತ್ತ ಇರಬಹುದು. ಕನಸ ಕೆಡಿಸಲೊ ಎಂಬಂತೆ ಆಜುಬಾಜಿನ ಹೊಸೂರಿನವನೊಬ್ಬ ಊರ ಮೇಲೆ ಮೊಬ್ಬಿಗೇ ಹಾದು ಹೋದನು. ಅವ ಬಿಟ್ಟುಹೋದ ಮಾತುಗಳು ಊರ ಬೀದಿಗುಂಟ ತೆವಳ ತೊಡಗಿದವು:

'ಸ್ವಾಮಿ, ನಾನು ಹೊಸೂರಿನವನು. ನಮ್ಮೂರಲ್ಲೆ ಒಬ್ಬಳು ಕಲಕೆತ್ತಿ ಹೆಣ್ಣು ಇದ್ದಳು. ಅವಳು ತುಂಡು ಹೈಕಳ ಕೆಡಿಸುತಾ ಇದ್ದುದು ಹಿಂದಿನಿಂದಲೂ ನಡೀತಾ ಇದ್ದುದೆ. ಹೇಳುವವರು ಎಷ್ಟು ದಿನಾಂತ ಹೇಳುವರು? ಅವಳಿಗೆ ಅವಳದೆ. ಬಯ್ದು ಹೇಳಿ ನೋಡಿದರು. ಅವಳಿಗೆ ಅವಳದೆ. ಕೊನೆಗೆ ಮಾಡುವುದನ್ನೆ ಮಾಡಿದರು. ನ್ಯಾಯಕ್ಕೆ ಕೂಟ ಸೇರಿಸಿ ಅವಳ ಸೆಳತಂದರು. ಅಲ್ಲೂ ಅವಳು ಮೈತುಂಬ ರೋಪು ಮಾಡಿದಳು. ರೇಗು ಹತ್ತಿದವರು ಸುಮ್ಮನಿರಲಿಲ್ಲ. ಅವಳು ಹೊಟ್ಟೇಲಿ ಹುಟ್ಟಿದ ರೂಪ ಮಾಡಿ ಹುಣಸೆ ಸೆಬ್ಬದಲ್ಲಿ ಬಡಿದು ಅವಳಿಗೆ ಹುಟ್ಟಿದ ದಿನ ಕಾಣಿಸಿಬಿಟ್ಟರು.

ಅಷ್ಟಕ್ಕೂ ಅವಳು ಸುಮ್ಮನಿರಲಿಲ್ಲ. ಆ ಮೊಖ ಎತ್ತಿಕೊಂಡೆ ಪೋಲೀಸು ಸ್ಟೇಷನ್ನಿಗೆ ನಡೆದಳು. ಹಿಂಗಾಯ್ತು ಹಿಂಗಾಯ್ತು ಅಂತ ಎಲ್ಲ ಬಿಚ್ಚಿ ಹೇಳಿಕೊಂಡಳಂತೆ. ಆಮೇಲಿಂದ ಪೋಲಿಸ್ನೋರು ವ್ಯಾನಲ್ಲಿ ಬಂದು, ಇದ್ದ ಬದ್ದ ಯಜಮಾನರುಗಳ



ಹಿಡಕಂಡುಹೋದರು. ಮುಂದೆ ಏನಾಯ್ತು ಎತ್ತ ಅಂತ ಯಾರ್ಗೂ ಗೊತ್ತಿಲ್ಲ.'

ರಾತ್ರಿ ಆದ ಗಲಭೆಗೆ ಹೊಸೂರ ಸುದ್ದಿ ಕೂಡಿಕೊಂಡು ಊರು ರಂಗಾಗಿ ಮೇಲೆದ್ದಿತು. ಆದುದಕ್ಕೆ ಅಂದುಕೊಂಡದ್ದು. ಪಟೇಲರು: ಡ್ಲೆ, ಶಾನುಭೋಗರು: ಡ್ಲೆ. ನಾಲ್ವರು: ಮಕ್ಕಳು ಪಾಳೆಗಾರಿಕೆ ಮಾಡ್ತ ಇದ್ವು, ಗತಿ ಕಂಡ್ವು. ಒಬ್ಬ: ಅಯ್ ಸಿವ್ನ.

## ಗುಂಡಿಗೆ ಟಾರು ರಾತ್ರೊ ರಾತ್ರಿ:

ಅಷ್ಟೆಲ್ಲ ಆದದ್ದು ಅಷ್ಟಕ್ಕೇ ನಿಲ್ಲಲಿಲ್ಲ. ಟಾರಿನ ಡ್ರಮ್ಮುಗಳನ್ನು ಕಾಯಿಸಿ ಊರ ಮುಂದಲು ಇಟ್ಟಿದ್ದು ಸರಿಯಷ್ಟೆ. ಬೆಳಿಗ್ಗೆ ನೋಡಲು ಅವಾವು ಒಂದೂ ಅಲ್ಲಿ ಇರಲಿಲ್ಲ. ಅವು ಹೋದ ದಿಕ್ಕು ಹಿಡಿದು ಹೋಗಿ ನೋಡಿದರೆ ಅವು ಊರಾಚೆಗಿನ ಒಂದು ಗುಂಡಿಯ ಸುತ್ತ, ಇರೋ ತಮ್ಮ ಬಾಯಿಯ ಇದ್ದಷ್ಟೂ ಅಗಲಿಸಿಕೊಂಡು ಒಳಗಿನ ಟಾರನ್ನು ಹಿಂಟು ಹಿಂಟಾಗಿ ಕಪ್ಪಗೆ ಗುಂಡಿಗೆ ಕಕ್ಕುತ್ತಾ ಬಿದ್ದಿದ್ದವು. ಮೇಲಿಂದ ಬಿಸಿಲು ಏರುತ್ತ ಗುಂಡಿಗೆ ಟಾರು ಇಳಿಯುತ್ತ ಇಳಿಯುತ್ತ ಸುತ್ತ ನೋಡುತ್ತ ನಿಂತವರು ನೋಡುತ್ತಲೆ ನಿಂತರು. ನೋಡದವರು ನೋಡಲು ಹಿಂಡು ಹಿಂಡು ಬಂದರು. ನೋಡಿ ನೋಡಿ ಕಣ್ಣಿಗೆ ಕಪ್ಪು ಹಿಡಿಯಲು ಕಾಲು ತೆಗೆಯುವರು. ಯಾರ ಬಾಯಲ್ಲು ಮಾತಿಲ್ಲ.

ಪಟೇಲರ ಬಾಯಲ್ಲು ಮಾತಿಲ್ಲ. ಒಬ್ಬ ಪಟೇಲರಿಗೆ ನೀವು ಹ್ಞೂ ಅನ್ನಬೇಕಿತ್ತು, ಮಕ್ಕಳಿಗೆ ರಾತ್ರೀನೆ ಹುಟ್ಟಿದ ದಿನ ಕಾಣಿಸಬಹುದಿತ್ತು ಅಂದನು. ಪಟೇಲರು ಅದಕ್ಕೂ ಅವುಡು ಕಚ್ಚಿದರು. ಮಾತಾಡಲಿಲ್ಲ. ಪೋಲೀಸು ಸ್ಟೇಷನ್ನಿಗೆ ಅಲ್ಲಿಂದಲೆ ಹಾಗೆ ಹೋದರು. ಬಂದದ್ದು ಸಂಜೆಯಲ್ಲೆ. ನಾಳೆ ಮೊಬ್ಬಿಗೆ ಪೋಲೀಸಿನವರು ಬಂದು ಮಹಜರು ಮಾಡಿಕೊಂಡು ಹೋಗುವರೆಂದೂ ಮುಂದಣ ಕತೆ ಹೆಂಗಾಗುವುದೆಂದು ಯಾರಿಗೂ ತಿಳಿಯದೆಂದೂ ತಿಳಿದುಬಂತು.

## ಪಳ್ಳಿಗೆ ಹೋದವ ಬರಲಿಲ್ಲ:

ಹಿಂಗೆ ಒಂದರ ಮೇಲೊಂದು ಬಿದ್ದು ಕಪ್ಪಗೆ ಹಿಗ್ಗುತ್ತಾ ಹೋಗುತ್ತಿದ್ದ ಇಂಥದಕ್ಕೆ ಕೂಡಿಕೊಳ್ಳಲು ಊರಿಗೆ ಕತ್ತಲು ಹಿಡಿಯುವುದನ್ನೆ ಕಾಯುತ್ತ ಮತ್ತೊಂದು ಕಾದು ಕುಂತಿತ್ತು. ಮುಸ್ಸಂಜೆಗೆ ಎಲ್ಲ ಹಟ್ಟಿದಾರಂದಗಳೂ ಮುಚ್ಚಿ ಬೀದಿ ಒಳಗ ನರಪಿಳ್ಳೆಯ ಸುಳಿವಿಲ್ಲವಿದ್ದರೂ ರಂಗಪ್ಪನ ಹೈದ ಮಾತ್ರ ಹಟ್ಟಿ ಕಂಡಿರಲಿಲ್ಲ. ಪಳ್ಳಿಗೆ ಮಧ್ಯಾಹ್ನ ಉಂಡುಹೋದುದಂತೆ. ಮೇಸ್ಟರನ್ನು ಕೇಳಿದರು. ಹಟ್ಟಿ ಕಡೆ ಹೊಂಟುದ ತಾವು ಖುದ್ದು ಕಂಡೆ ಅಂದರು. ಹೊಂಟ ಕಡೆಗೆ ಹೊಂಟೇ ಬಿಡುವ ಬೆಪ್ಪು ಹೈದ ಅದು. ಲಾಟೀನು ಈಸಿಕೊಂಡು ಹಟ್ಟಿ ಹಟ್ಟಿ ತಟ್ಟಿ

ಬಂದು ಆಯ್ತು. ಅವ ಆಡುವ ಗೇಣಕಾರರ ಕೇಳಿ ಆಯ್ತು. ಎಲ್ಲರೂ ಕಂಡಿದ್ದೆವು ಅನ್ನುವವರೆ. ಯಾವ ಕೇರಿ ಯಾವ ಬೀದಿಯನ್ನೂ ಬಿಡಲಿಲ್ಲ. ಹಿಂಗೇ ಎಷ್ಟೊತ್ತು ಆಯ್ತೊ. ಆ ಹೈದನ ಅವ್ವನ ಅಳು ಸದ್ದಡಗಿದ ಊರಲ್ಲಿ ರಾಗವಾದ ಸದ್ದಾಗ್ಗಿ ಸಮರಾತ್ರಿ ಮೀರಿಯೂ ಇತ್ತು.

## ಮಹಜರು:

ಮೊಬ್ಬಿಗೇ ಪ್ರೋಲೀಸು ವ್ಯಾನು ಕಷ್ಟಪಟ್ಟುಕೊಂಡು ಊರಮುಂದು ಬಂದು ನಿಂತಿತು. ನೋಡಬಂದವನಿಗೆ ಪಟೇಲರ ಕರೆತರುವಂತೆ ಇನ್ಸ್‌ಪೆಕ್ಟರು ಕಳಿಸಿದರು. ಪಟೇಲರು ತಡಬಡಾಯಿಸಿಕೊಂಡು ಬಂದು ನಿಂತರು. ಎಲ್ಲರೂ ಉರಾಚೆಗಿನ ಟಾರು ಗುಂಡಿ ಹತ್ತಿರ ಬಂದು, ನೋಡಿ, ನೋಡಿದಾಕ್ಷಣ ಗಕ್ಕನೆ ನಿಂತುಬಿಟ್ಟರು. ರಂಗಪ್ಪನ ಹೈದನ ಕಾಲುಗಳನ್ನು ಗುಂಡಿಗೆ ಇಳಿದಿದ್ದ ಟಾರು ಹಿಡಿದುಕೊಂಡಿತ್ತು. ಎರಡೂ ಕೈಗಳನ್ನು ಟಾರಿನ ಡ್ರಮ್ಮು ಕಚ್ಚಿಕೊಂಡಿತ್ತು. ಮಯ್ಯಿ ಕಯ್ಯಿ ಮೊಖ ಅನ್ನದೆ ಟಾರು ಟಾರಾಗಿತ್ತು. ಮತ್ತೂ ಹತ್ತಿರದಿಂದ ನೋಡಿದರೆ ಆ ಹೈದನ ಮಯ್ಯೊಳಗ ಇನ್ನೂ ಜೀವ ಆಡುತ್ತಿತ್ತು.

(1972)

# ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ

೧

ಮೂಡಲ ಸೀಮೆಯು ಕೊಲೆಗೂ ದರೋಡೆಗೂ ಪ್ರಸಿದ್ಧಿಯಾಗಿದೆ ಎಂಬ ಮಾತು ಪ್ರಚಲಿತದಲ್ಲಿದೆ. ಆ ಸೀಮೆಯ ಜನ ಒರಟರು ಎಂದು ಯಾರನ್ನೇ ಕೇಳಿದರೂ ಹೇಳಬಹುದು. ಆ ಸೀಮೆಯ ಅಂಚಿಗೆ ಸೇರಿದ ಹಾಗೆಯೆ ಒಂದು ಊರಿದೆ. ಅಲ್ಲೊಬ್ಬ ರಂಗಪ್ಪ ಅಂತವನೆ. ಅವನನ್ನು ರಂಗ ರಂಗಪ್ಪ ರಂಗಸ್ವಾಮಿ-ಹೀಗೆ ತಮಗೆ ತಕ್ಕ ಹಾಗೆ ಆ ಊರಿನ ಜನ ಕರೆಯುವರು. ಅವನ ಅಪ್ಪ ಅವ್ವ ಎತ್ತಲವರೊ ಏನೊ. ಅವನಂತೂ ಎರಡು ಬೇಳೆ ಪೈರಿನಿಂದಲೂ ಆ ಸೀಮೆಯ ಮಣ್ಣನ್ನೆ ಮಯ್ಯಿ ಕಯ್ಯಿಗೆ ಮೆತ್ತಿಕೊಂಡು ಬೆಳದಂಥವನು. ಅವನಿಗೆ ಅಪ್ಪನಪ್ಪನ ಕಾಲದಿಂದಲೂ ಅವನದಾದ ಆಸ್ತಿ ಎಂಬುದಿಲ್ಲ. ಒಂದು ಜೋಪಡಿ ಒಂದು ಹೆಂಡತಿ ಒಂದು ಆರೇಳು ವರ್ಷದ ಮಗ ಅದಷ್ಟು ಇದ್ದು ಅದಷ್ಟೆ ಅವನ ಆಸ್ತಿ ಎಂಬಂತಿದೆ. ಅಂದರೆ ತಂದರೆ ಉಂಟು, ತರದಿದ್ದರೆ ಇಲ್ಲ. ಅವನು ಹುಟ್ಟಿದಾರಭ್ಯ ದಿನಂಪ್ರತಿ ಆ ಊರ ಗೌಡರ ಹೊಲದಲ್ಲಿ ಹಗಲು ಮಾಡುತ್ತ ಬಂದಿರುವನು. ಅವನು ಮಾಡೊ ಉಳುಮೆಗೆ ಗೌಡರ ಹಟ್ಟಿಕಂಬ ನಿಂತಿದೆ ನೋಡಿ ಅಂತ ಊರವರು ಅಂತಾರೆ. ಅಂತೆ ಅವನ ಜೋಪಡಿ ಅವನ ಹೆಂಡತಿ ಅವನ ಮಗ ಅವನ ರಟ್ಟೆಯ ಬಲದ ಮೇಲೆ ನಿಂತಿವೆ. ಆದರೆ ಅವನೊ ಹಾಗಂದುಕೊಂಡಿಲ್ಲ. ಗೌಡರು ಕಣ್ಣು ಬುಟ್ಟರೆ ತನ್ನ ಹೊಟ್ಟೆ ಒಳಗ ಜೀವ ಆಡುತ್ತೆ ಅಂತ ಅವ.

ಅಂಥ ರಂಗಪ್ಪನ ಜೋಪಡಿ ಊರಿಂದ ಚೂರು ಅತ್ತತ್ತ ಅನ್ನುವ ಹಾಗಿದೆ. ಅಲ್ಲಿ ಅವ ಯಾಕೊ ಕೈ ಚೆಲ್ಲಿಕೊಂಡು ಕುಂತುಬುಟ್ಟಿದ್ದನು. ಅವನ ಎದುರಿಗೆ ಹೆಂಡತಿಯು ಮಗನ ಹರಿದ ಚಡ್ಡಿಗೆ ಸೂಜಿ ಚುಚ್ತ ತಗೀತ ಹೊಲಿಯೋದರಲ್ಲೆ ಮುಳುಗಿದ್ದಳು. ಅಲ್ಲೆ ಅವ್ವಗೆ ಕಪಿಮರಿ ಹಂಗೆ ಅಂಟುಕೊಂಡಿದ್ದ ಏಳು ವರ್ಷದ ಮಗ ತೂಕಡಿಗೆ ವಡೀತಾ ಇತ್ತು. ಈಗ ಹೊತ್ತು ಮುಳುಗೋಕೆ ಮಾರುದೂರ ಇದ್ದರೂ ಗುಡಾರದಂಥ ಹಟ್ಟಿಯಾದ್ದರಿಂದ

ಆಗಲೇನೆ ಅಲ್ಲಿ ಕವಳ ಕವುಚಿಕೊಂಡು ತವಕನೆ ಒಳಗೆ ಬಂದವರಿಗೆ ಒಳಗಿದ್ದ ಅವರಾರು ಬಡಪೆಟ್ಟಿಗೆ ಖಂಡಿತಕ್ಕೂ ಕಾಣುತ್ತಿರಲಿಲ್ಲ. ಆ ಮಸಕು ಕತ್ತಲಿಗೆ ಕಣ್ಣು ಸೀಳುತ್ತ ನೋಡಿದರೆ ನಿಧಾನ ಅವ, ಅವನ ಹೆಂಡತಿ, ಅವನ ಮಗ ಮೂಡಬಹುದಿತ್ತು. ಅಲ್ಲೆ ಜೋಪಡಿ ಹುಲ್ಲು ಅತ್ತಗು ಇತ್ತಗು ಸರಕೊಂಡು ನಾಕ ಕಡೆ ಕಿಂಡಿ ಬುಟ್ಟುಕೊಂಡು ಬಾನ ಕಾಣಿಸುತ್ತಿದ್ದಿತಷ್ಟೆ. ಆ ದಿಕ್ಕಿಂದ ಒಳಗಿಣುಕುವ ಬೆಳಕು ಅಲ್ಲಿ ಇಲ್ಲಿ ಅಲ್ಲೆ ಬಿದ್ದು ಓಡಾಡುತ್ತಿತ್ತು. ಹೆಂಡತಿ-ಬರೋದು ಮಳೆಗಾಲ, ಮಲಿಕಳಾಕ ಒಂದು ತಾವು ಅಂತಾರು ಇರ್ಲಿ. ಹುಲ್ಲುತಂದು ಚಾವಣಿಗೆ ಹಾಕಿ - ಅಂತ ಗಂಡನಿಗೆ ಹೇಳಿ ಹೇಳಿ ಗಂಡನ ಊ್ಞ ಊ್ಞ ಕೇಳಿ ಕೇಳಿ ಅವಳಿಗೂ ರೋಸಿ ಈಗಂತು ಸುಮ್ಮನಾಗಿಬಿಟ್ಟಿದ್ದಳು.

ಅಲ್ಲಿ ರಂಗಪ್ಪ ತನ್ನ ಜೋಬ ಅತ್ತಗ ಇತ್ತಗ ತಡಕುವುದರಿಂದ ಒಂಥರ ಚಲನೆ ಆರಂಭವಾಯ್ತು. ಹೆಂಡತಿ ಗಂಡನ ತಡಬಡವ ತಿಳಿದುಕೊಂಡು ಅಂಟುಕೊಂಡಿದ್ದ ಮಗನನ್ನು ಮೆಲ್ಲಕೆ ನೆಲದ ಮೇಲೆ ಮಲಗಿಸಿ ಬೀಡಿಗೆ ಬೆಂಕಿ ತರುವ ಅಂತ ಮೇಲೆದ್ದಳು. ಮಗನ ಕತ್ತು ಹಿಂದಕ್ಕೂ ಮುಂದಕ್ಕೂ ಬತ್ತಾ ಹೋಗ್ತ ವಾಲಾಡ್ತ ಇದ್ದುದು ಆಗ ನಿಂತು ಕೊಕ್ಕರಿಸಿಕೊಂಡು ತೆಪ್ಪಗೆ ಮಲಿಕತ್ತು. ರಂಗಪ್ಪ ಮಗನಿಗೆ ಕಣ್ಣು ಸಿಕ್ಕಿಸಿ 'ಎಂಥದಮ್ಮಿ ನಿನ್ನ ಮಗಂಗೆ ಮುಸ್ಸಂಜಲೆ ನಿದ್ದೆ ಹಿಡಕಂಡದೆ' ಅಂದನು. ಅದಕ್ಕವಳು 'ಒಂದು ಚಡ್ಡಿ ಬೇಕು ಅಂತ ಚಂಡಿ ಹಿಡ್ದಿತ್ತು. ಅಳ್ತ ಮಲಿಕತ್ತು' ಎಂದು ವಸಿ ನಿಂತಿದ್ದು ಹೋಗಿ ಬಂದು ಬಿಂಕಿ ಚಾಚಿ ಹಿಡಿದು 'ಮುಂದ್ನವಾರ ಸಂತಗಿಂತಗ ಹೋದ್ರು ತನ್ನಿ ಒಂದ' ಅಂದಳು. ಅದಕ್ಕವ ಆ್ಞ ಅನ್ನಲು ಇಲ್ಲ, ಊ್ಞ ಅನ್ನಲು ಇಲ್ಲ. ಆವಾಗಲೂ ಎಷ್ಟು ಹುಡುಕಿದರೂ ಬೀಡಿ ಸಿಗದೆ ಅಂದರೆ ಇಲ್ಲದೆ ಥುತ್ತೇರಿ ಅನ್ನಿಸಿತು. ಇಲ್ಲಕಣ ಬಿಂಕಿ ಇಟ್ಬುಡು ಅಂದನು. ಅವಳು ಗಂಟಲೊಳಗೆ ಗೊಣಗಿಕೊಂಡು ಬಿಂಕಿ ಇಟ್ಟು ಬಂದು ಮೊದಲಂಗೆ ಕುಂತಳು. ಮಗನ ಕಡೆ ನೋಡುತ್ತಿದ್ದವ ನೋಡುತ್ತಲೆ ಏನಾರು ಉಣ್ತ ಅಂತಲೆ, ಮಧ್ಯಾಹ್ನದ್ದೆ ತಂಗಳು ಅಂದಳು. ಮಾಡಾಕತಾನೆ ಏನು ಇದ್ದುದು ಅಂತ ಅವಳೇನು ಮೊಖ ಸಿಂಡಿರಿಸಿಕೊಂಡು ಹೇಳಬೇಕಾಗಿರಲಿಲ್ಲ. ಅವ ಬಾಗಲ ಕಡದು ಇರುವ ಆಚಲ ನೋಡಲು ತೊಡಗಿದನು. ಮತ್ತೆ ತಿರುಗಿದಾಗ ತನ್ನ ಕಡೆಗೆ ನೋಡುತ್ತಿದ್ದ ಹೆಂಡತಿ, ತಾನು ಅವಳತ್ತ ನೋಡುತ್ತಲೆ ಎತ್ತಲೊ ಕಣ್ಣು ಕತ್ತು ತಿರುಗಿಸಿದಳು. ಅವ ವಸಿ ಗೌಡರ್ನಾರು ನೊ;ಡ್ಕಂದು ಬತ್ತೀನಿ ಎಂದು ಎದ್ದನು.

೨

ಗೌಡರು ನಂಜನಗೂಡಲ ದಿಕ್ಕಿಗೆ ಪಯಣ ಬೆಳೆಸಿದವರು ಬಂದವರೊ ಬಂದಿಲ್ಲವ್ರೊ ಎಂಬ ಅನುಮಾನ ರಂಗಪ್ಪನಿಗೂ ಇದ್ದುದೆ. ಕಳೆದ ವಾರ ನರ್ಸಮ್ಮನಿಗೆ ವರ್ಗವಂತೆ ಅಂತ



ಊರೆಲ್ಲ ಮಾತಾಯಿತು. ಈಗ ಗೌಡರು ಬಂದಿದ್ದರೆ ಅವರೊಡನೆ ವರ್ಗ ಇಲ್ವಂತೆ ಕೂಡ ಇರುತ್ತಿತ್ತು. ವರ್ಷದ ಕೆಳಗೆ ಊರಿಗೆ ಒಂದು ನರ್ಸು ಬೇಕು ಅಂತ ಮೇಲಿನವರೊಡನೆ ಹೊಡೆದಾಡಿ ತಂದವರು ಅವರೆ. ಅವರು ಮತ್ತು ಅವರಂಥವರು ಊರು ಒಂದು ಕೊಂಪೆ ಅಂತ ಆಚೀಚಲವರು ಅಂದುಕೊಂಡರೆ ಒಂದಿಷ್ಟೂ ಸಹಿಸರು. ನರ್ಸಮ್ಮ ಬಂದಾಗ ಕಿರಸ್ತಾನದವಳು ಅಂತ ಯಾರೂ ಮನೆ ಕೊಡದಿದ್ದ ಪ್ರಸಂಗವನ್ನೆ ನೋಡಬಹುದು. ಗೌಡರೆ ತಮ್ಮ ಜಗಲಿಮನೇಗೆ ಬಾಡಿಗೇನು ಬೇಡ ಏನೂ ಬೇಡ ಅಂತಂತ ಬಿಟ್ಟುಕೊಟ್ಟುಬಿಟ್ಟರು. ಅವಳು ಬಂದವಳೆ ಊರಿಗೊಂದಾಗಿ ಬಿಟ್ಟಳು. ಆಮೇಲ ಊರು ಅಂದರೆ ಮುಖ್ಯವಾಗಿ ಆ ಜಾತಿ ಈ ಜಾತಿ ಅನ್ನದೆ ಪಡ್ಡೆ ಹೆಣ್ಣು ಮಕ್ಕಳು ಅವಳಂತಾಗಲು ತೆವಳುತ್ತಿದ್ದವು. ಅದು ಹಾಗಿರಲಿ, ಇಂದು ಊರಿಗೆ ಊರೆ ಲೈಟು ಬರೊ ಸಂಭ್ರಮದಲ್ಲಿ ಬೀಗುತ್ತಿದೆ. ಅದಕ್ಕೆ ಕಾರಣಪುರುಷರು ಗೌಡರು. ವಾರದಲ್ಲಿ ಒಂದು ದಿನ ಅವರು ಊರಲ್ಲಿ ಇದ್ದರೆ ಅವರಿಗೆ ಅದು ಹೆಚ್ಚು. ಅವರು ಹೋದ ದಿಕ್ಕಿಗೆಲ್ಲ ಕೆಲಸಗಳು ತಂತಾನೆ ಹುಟ್ಟುಕೊಳ್ಳುತ್ತವೆ - ಹೀಗೆ ಗೌಡರು ಬಂದವರೊ ಬಂದಿಲ್ಲವ್ರೊ.

ಗೌಡರು ಏನಾರು ಬಂದಿದ್ದರೆ ದೊಡ್ಡ ಹಟ್ಟಿ ಜಗಲಿ ಮೇಲೆ ಅವರದೇ ಠೀವೀಲಿ ಅವರು ಕುಂತಂಥ ವೈಖರಿಯು ನೋಡಿದವರ ಕಣ್ಣಲ್ಲಿ ಠಸ್ಸೆ ಹೊಡೆಯುತ್ತದೆ. ವಾರದ ಹಿಂದೆ ಆದುದ ನೋಡುವ: ನೋಡಿದರೆ ಗೌಡರು ಹಾಗೆಯೇ ಕುಂತಿದ್ದರು. ರಂಗಪ್ಪ ಅವರ ಎದುರ ಮಯ್ಯ ಕುಗ್ಗಿಸಿಕೊಂಡು ಮಾಮೂಲಿ ನಿಂತಿದ್ದನು. ನಾಕು ಸೇರು ಜೋಳ ತಂದಿಟ್ಟ ಗೌರವ್ವರು ಮೊಖ ತಿರುವಿಸಿಕೊಂಡು ಹೋಗಿಬಿಟ್ಟರು. ಆಮೇಲಂತು ರಂಗಪ್ಪನಿಗೆ ಮುಖವೆ ಹೊಯ್ತು. ಗೌಡರು ಕಂಡೀಷನ್ನಾಗಿ ಇನ್ನು ಫಸಲು ಬರಗಂಟ ಕೇಳಬೇಡ ಇವ್ನೆ ಎಂದು ಅಂದವರೆ ಸರ್ರನವರೂ ಹೋದರು. ನಡೆವಾಗ, ಗೌಡರ ಮಾತು ಗೌರವ್ವರ ರೀತಿ ಕೂಡಿ ಹೆಣಭಾರ ವಡೀತಿತ್ತು ಹೆಣಭಾರ.

ಇಂದು ಯಾವ ಮೊಖ ಹೊತ್ತು ಅವರ ಕಂಡು ಕೇಳಲಿ ಎಂಬುದು ಹೆಜ್ಜೆ ಇಟ್ಟಂತೆಲ್ಲ ರಂಗಪ್ಪನ ಮೇಲೆಯೇ ಎಗರಿ ಬೀಳುತ್ತಿತ್ತು. ಹಸಿದು ಮಲಗಿರೊ ಮಗ, ಬಿಳುಚಿಕೊಂಡು ಕುಂತು ಮಾತಾಡದೆ ಆ್ಞ ಊ್ಞ ಅನ್ನೊ ಹೆಂಡತಿ ತಲೆ ಒಳಗ ಕುಂತು ಹಿಂಸಿಸುತ್ತಿದ್ದರು. ಹುಟ್ಟಿದಾಗಲಿಂದಲೂ ಎಷ್ಟೇ ಹೆಂಗೇ ಅವಚಿವಿಯಾಗಿ ಗೇದರೂ ಹೊಟ್ಟೆ ತುಂಬ ಹೊಂದಿಸಾಕೆ ಇದುವರೆಗೆ ಆದ್ದಿಲ್ಲ. ಅಲ್ಲಿ ದುಡಿಬೇಕು, ಇಲ್ಲಿ ಕೊಡಬೇಕು, ಕೊಟ್ಟದ್ದು ಈಸಕಂಡು ಬಂದು ಹೊಟ್ಟೆಯಾಪ್ತಿ ನಡೆಸಬೇಕು. ಆಮೇಲೆ ಕಣ್ಣು ಬಾಯಿ ಕೈ ಇದ್ದುದೆ, ಅಷ್ಟುಬಿಟ್ಟು ಅವನ ಬದುಕಲ್ಲಿ ಇನ್ನೇನಾರ ಆಗಿದೆಯಾ? ಅಂದರೆ ಅಂಥದ್ದೇನೂ ಇಲ್ಲ ಅಂತಾನೆ ಹೇಳಬಹುದು. ಆದರೆ ಒಂದು ಮಾತು - ಭೂಮತಾಯಿ ಸೀಳ್ಕಂಡು ಒಂದ್ಸಲಕ

ತನ್ನ ಹೊಟ್ಟ ಒಳಕ ಎಲ್ಲಾನು ಹಾಕೊಂಡು ಬುಟ್ಟರ ಎಷ್ಟೊ ನೆಮ್ಮದಿ ಎಂದು ಅವ ಬಾಳ ಅಂದುಕೊಂಡರೂ ಹಾಗೇನೂ ಆಗುವುದಿಲ್ಲ. ನಾವು ನೀವು ಕಂಡಂತೆಯೇ ಇದುವರೆಗೂ,

ಹಾಗೇನೂ ಆಗಿಲ್ಲ.

೩

ಗಂಡ ಹೋದ ಮೇಲ ಪಾರೋತಿಗೆ ಏನ ಮಾಡಬೇಕು ಅಂತ ತಿಳೀದೆ ಮುಪ್ಪಾಗಿ ಕುಂತಳು. ಆಗ ಎಲ್ಲಕ್ಕು ಕತ್ತಲಿಡೀತಾ ಇತ್ತು. ಅಲ್ಲೆ ಮಲಗಿದ್ದ ಮಗ ಗದ್ದರಿಸಿ ಎದ್ದು ತಡವರಿಸುತ್ತ ಕಣ್ಣು ಮುಚ್ಚಿಕೊಂಡೆ ಕೂತುಕೊಂಡಿತು. ಪಾರೋತಿ ತಲೆ ಸವರಿ 'ಯಾಕ ರಾಜ, ಯಾಕಪ್ಪ, ಕನ್ಸ ಕಂಡ್ಯ' ಅಂದಲು. ರಾಜ ಕಣ್ಣು ಬುಟ್ಟು ದೊಡ್ಡತಗೆ ನೋಡಿತು. ಅವ್ವ ಎದುರಿಗಿದ್ದಳು. ರಾಜ ಉ್ಞ ಅಂತ ತಲೆ ಕುಣಿಸಿತು. ಏನ ಕಂಡ್ಯ ಹೇಳು ಮತ್ತ ಅಂದಲು. ಹಾಗಂತಲೆ ರಾಜ ಮೊಂಡು ಮೊಖ ಮಾಡ್ಕಂಡು 'ನೋಡವ್ವ ನೋಡವ್ವ, ಪಟೇಲ್ರ ಶಂಭಪ್ಪ ಅವ್ನಲ್ಲ, ಅವ ಅವ ನನ್ನ ರಾಜ ಅನ್ನಕಿಲ್ವಂತೆ' ಅಂದ. ಪಾರೋತಿ ಯಾಕಂತ? ಅಂತಂತಲೆ ರಾಜ - 'ಶಂಭಪ್ಪ ಇಸ್ಕುಲು ಬುಡ್ತಲೆ ಅಂದ. ನೀವು ವಲಾರ್ರು ಕಲಾ. ಅದ್ಕ ನಿನ್ನ ರಾಜ ಅನ್ನಾಕಿಲ್ಲ, ಗೀಜ ಅಂತೀನಿ ಅಂದ' ಎಂದು ಅವ್ವನ್ನೆ ನೋಡುತ್ತ, ಅವ್ವ ಏನ ಹೇಳಬಹುದು ಅಂತೇನೊ ಅದರ ಕಣ್ಣು ಅಗಲಿಸಿಕೊಂಡಿತ್ತು. ಪಾರೋತಿ ಅವನ ಗಲ್ಲ ಅದುಮುತ್ತ 'ನೀ ಜಾಣಕಪ್ಪ. ಅವ್ರ ಸಿಂತಗೆಲ್ಲ ಹೋಗ್‌ಬೇಡ' ಅಂದು ಇನ್ನೆಂಥದೂ ಹೇಳಾಕೆ ತಿಳಿದೇನೆ ಅವನ ಬೆನ್ನ ಸವರುತ್ತ ಕುಂತಳು. ರಾಜ ಅವ್ವನ ಹತ್ರಕ್ಕ ಮತ್ತೂ ತವದು ಅವಳ ಕಿವಿ ಹತ್ರಕ್ಕ ಬಾಯಿ ತಂದು 'ಬಾ ಇಲ್ಲಿ ಒಂದು ಮಾತೇಳ್ತಿನಿ' ಅಂತು. ಪಾರೋತಿಗೆ ಅವನ ವರಸೆಗೆ ನಗು ಬಂತು. ಅದೇನ ಹೇಳಪ್ಪ ಮತ್ತ ಅಂದಲು. 'ಅದೇ ನಮ್ಮ ಹೊಸ ಮೇಸ್ತ್ರ ನೋಡಿದ್ದಿ?'. 'ಉ್ಞ'. 'ಅವ್ರು ಅವ್ರು ನಮ್ಮ ಜಾತೀನಂತೆ!'. 'ಅದು ನಂಗು ಗೊತ್ತು'. 'ಅಯ್ಯೋ ನಿಂಗೂ ಗೊತ್ತ!' ಎಂದು ಬೆರಗಾಗಿ ದಿಕ್ಕುಗಾಣದೆ ನಿಲ್ಲಿಸಿ ಆಮೇಲೆ 'ಆಮೇಲ ಆಮೇಲ' ಎಂದು ಸುರುಮಾಡಿದನು. ಅವಳು 'ಏನಾಮೇಲ?' ಅಂತಲೆ ಅವ 'ಅದೇ ಅವ್ರು'. 'ಉ್ಞ'. 'ದೊಡ್ಡ ಮೇಸ್ತ್ರ ಹಟ್ಟೀಲಿ'. 'ಉ್ಞ'. 'ಅವರ ಗಳಾಸ್ಲೆ' ಅಂದು ಎಳೆದಾಗ ಅವಳು ಉ್ಞಕಳಲಿಲ್ಲ. ಅದೇನ ಕಟಿಕಟ್ನ ಹೇಳಪ್ಪ ಅಂದಲು. ಅಂತಲೆ ಅವ ತಟವಟನೆ 'ಅದೇ ಅವ್ರು ಗಳಾಸ್ಲೆ ನೀರ್ನು ಕುಡಿತಾರೆ. ಆಮೇಲ ಆಮೇಲ ಅವರ ಜಗಲಿ ಮೇಕ್ಕು ಹೋಯ್ತಾರೆ' ಎಂದು ಅವ್ವನ ಮೊಖದಲ್ಲಿ ಏನಾಗಬಹುದು ಅಂತ ನೋಡೋ ರೀತಿಗೆ ತುಟಿ ಅರಳಿಸಿ 'ಅದೂನು ನಂಗು ಗೊತ್ತು' ಅಂದಲು. ಅವಳು ಹಾಗಂತ ಅಂದಾಗ್ಲಂತು ರಾಜನಿಗೆ ಇನ್ನೇನ ಅಳೂನೆ ತವಕನೆ ಬಂದಂತಾಯಿತು. 'ಥು ಹೋಗು. ನಿಂಗ ಎಲ್ಲಾನು ಗೊತ್ತು' ಎಂದು ಅವ್ವನಿಗೆ ನೇತಾಕಿಕೊಂಡು ಜಗ್ಗಲು ತೊಡಗಿತು.



ಇನ್ನೆನಾರು ಹೊಟ್ಟ ಹಸೀತದ ಅಂತ ಅವ ಚಂಡಿ ಹಿಡಿದರ ಏನಪ್ಪಗತಿ ಸಿವ್ನ ಅಂತ ಪಾರೋತಿ ಅವನ ಮೊದ್ದಿಸುತ್ತ 'ಇಲ್ಲ, ಇಲ್ಲ, ನೀ ಅಂತ್ಲೆ ನಂಗೊತಾಯ್ತು ಕಣ, ನೀ ಜಾಣಕನಂತೆ, ಮೋಕಪ್ಪ' - ಅಂದಲು.

೪

ತಿರುಗಿದರೆ ಮೇಸ್ತ್ರ ಹಟ್ಟಿ ಸಿಗುತ್ತೆ ಅಂತಿರೊ ಅಷ್ಟರಲ್ಲಿ ರಂಗಪ್ಪನಿಗೆ ಐಸಾ ಐಸಾ ಕೇಳಿಸಿತು. ಇದೇನಪ್ಪ ಎಂದು ಹತ್ತುಮಾರು ಮುಂದೆ ಬಂದು ನೋಡುತ್ತಲೆ ಎಂಟತ್ತಾಳು ಮೇಸ್ಟರ ಮನೆ ಮುಂದಲು ಗುಳಿತವಕೆ ಲೈಟು ಕಂಬ ಎಳೀತಿದ್ದರು. ಒಬ್ಬ ಅಲ್ಲಿಂದಲೇ ಕೈಬೀಸಿ ಬಾ ರಂಗೊ ಅಂತ ಉಸುರ ಹಿಡಕಂಡು ಕೂಗಿದ. ಊರೊಟ್ಟಿನ ಕೆಲ್ಸ ಎಷ್ಟಾದ್ರು ಅಂದುಕೊಂಡು ರಂಗಪ್ಪ ಕಂಬ ಎಳೀತಿದ್ದಲ್ಲಿಗ ಕಾಲೆಳೆದು ಬಂದಾಗ ಒಬ್ಬ ಬಯ್ಯ ವಸಿ ಹೆಗಲ ಕೊಡು ಅಂತಲೆ ರಂಗಪ್ಪ ಹೆಗಲು ಕೊಟ್ಟು ನಿಂತನು. ಒಂದೊಂದೆ ಹೆಜ್ಜೆ ಅಂತ ಎಳ್ದು ಎಳ್ದು ಐಸ ಐಸ ಅಂದೂ ಅಂದು ಗುಳಿ ತಲುಪಿಸೊ ಹೊತ್ತಿಗಂತು ಎಲ್ಲರಿಗೂ ಬೆವರು ಕಿತ್ತೋಯ್ತು. ಎಲ್ಲರು ಕೈ ಚಲ್ಲಿಕೊಂಡು ಕೆಳಕು ಮೇಲಕು ಉಸುರು ಬುಡುತ್ತ ನಿಂತುಕೊಂಡರು.

ಎದುರಾ ಶಾಸ್ತ್ರಿ ಮೇಸ್ಟರ ಮನೆ ಇತ್ತು. ರಂಗಪ್ಪನಿಗೆ ಹೆಚ್ಚು ಕಮ್ಮಿ ಮೊನ್ನೆಯಿಂದಲೂ ಹೊಟ್ಟೆಗೆ ಏನೂ ಕಾಣದಕ್ಕೇನೊ ಮಯ್ಯಿ ಕಯ್ಯಿ ಸ್ವಾಧೀನ ತಪ್ಪಿದಂಗಾಯ್ತು. ನೀರು ನೀರು ಅನ್ನಿಸಿ ಅತ್ತ ನೋಡಿದಾಗ ಮೇಸ್ಟ್ರು ಕುಂತಿದ್ದರು. ಅವರ ದಿಕ್ಕಾನೆ ಮೊಕ ಹಾಕೊಂಡು ಹೊಸ ಮೇಸ್ಟ್ರುವಿ ಕುಂತಿದ್ದರು. ಅವರ ಕೈಲಿನ ಉರಿಯೊ ಸಿಕರೋಟು ಹೊಗೆ ಆಡಸ್ತ ಇತ್ತು. ಅವರ ತಲೆ ಬಾಚಿಕೊಂಡು ನೇರ ಕೆಟ್ಟಿರಲಿಲ್ಲ. ಕೆಳಕು ಮೇಕು ಬಿಳೀ ಬಟ್ಟೇನೆ ಹಾಕಿಕೊಂಡಿದ್ದರಿಂದ ಅವರು ಒಂಥರಾ ಹೊಳಪು ವಡೀತಿದ್ದರು. ವಯಸ್ಸೇನು ಮದ್ವೆ ಗಿದ್ವೆ ಆದಂತಿಲ್ಲ. ಅವರ ನೋಡಕೋತ ರಂಗಪ್ಪ ಹತ್ತಿರ ಆದನು.

ಏನಯ್ಯ ರಂಗಯ್ಯ ಹೇಗಿದ್ದಿ ಎಂದು ಶಾಸ್ತ್ರಿ ಮೇಸ್ಟರು ಮಾತನಾಡಿಸಿದರು. ಅದಕ್ಕೆ ಅವ ಹಿಂಗಿವ್ನಿ ಬುದ್ಧಿ ಎಂದು-ವಸಿ ಕುಡಿಯಾಕ ನೀರು ಬೇಕಿತ್ತು ಅಳಿ-ಅಂದ. ಅವರು ಏರಿಸಿದ ದನೀಲಿ-ನೋಡೆ ಶಾರ್ದು ಸ್ವಲ್ಪ ನೀರ್ನಂತೆ ರಂಗನಿಗಂತೆ ಕುಡಿಯಾಕಂತೆ ಅಂತಂತ ಮಾತ ಹಿಡ್ದು ಹಿಡ್ದು ಆಡಿದರು. ಆ ಕ್ಷಣವೇ ತಿರುಗಿ ಹೊಸ ಮೇಸ್ಟರ ಕಡೆ ಕಣ್ಣೆಟ್ಟು-ನೋಡಿ ಇವ್ರೆ ನಮ್ಮ ರಂಗಪ್ಪ ಅಂತಂದ್ರೆ ವ್ಯವಸಾಯದಲ್ಲಿ ನಿಸ್ಸೀಮ-ಎಂದು ಮತ್ತೆ ರಂಗಪ್ಪನ ಕಡೆಗೆ ತಿರುಗಿ-ಮತ್ತೇನಯ್ಯ ರಂಗಯ್ಯಾ ಈ ಸಲ ಮಳೆ ಬೆಳೆ

ಹೇಗನ್ನುತ್ತೆ-ಅಂದರು. ಅದಕ್ಕವ ಹೆಂಗೇಳಕಾಗುತ್ತೆ ಹೇಳಿ ಬುದ್ಧಿ ಎಲ್ಲ ಅವನಿಚ್ಛೆ ನೋಡಿ- ಎಂದು ಮುಗಿಸಿ ತಡೆದು ಮತ್ತೆ-ಹೋದಸಲವಂತು ಅರ್ಧಕ್ಕರ್ಧ ಕೈಗತ್ತಲಿಲ್ಲಅಳಿ. ಅಂಥದ್ರಲ್ಲಿ ಕಂಡವರ ಹೊಲ ನೆಚ್ಕಂಡು ಹೊಟ್ಟೆ ಹಿಡ್ಕೊಂಡಿರೊ ನಾವು ಎತ್ಲಾಗ ಹೋಗ್ಬೇಕಲಿಳಿ ಎಂದು ಅಂದು ಆಗಲೇನೆ ಯಾಕಾರು ಅಂದೆ ಅನ್ನಿಸಿ ಸುಮ್ಮನಾದನು.

ಮಾತಿಲ್ಲದೆ ಕಥಿಲ್ಲದೆ ವಸಿ ಹೊತ್ತು ಎಲ್ಲರು ಸುಮ್ಮನಿದ್ದರು. ಶಾಸ್ತ್ರಿಮೇಸ್ಟರು ಉಗುಳ ನುಂಗಿ ಸರಾಗವಾಗಿ ನೀ ಅನ್ನೋದು ಸರಿ ಅನ್ನು ಸರಿ ಅನ್ನು ಎಂದು ರಂಗಪ್ಪ ಆಡಿದ ಮಾತಿಗೆ ಸಂಬಂಧ ಕೂಡಿಸಿದರು. ಅಷ್ಟೊತ್ತಿಗೆ ಚೆಂಬಲ್ಲಿ ನೀರು ಹಿಡಕಂಡು ಶಾರದ ಬಂದು ನಿಂತಳು. ಎಷ್ಟೊ ಉದ್ದ ಬೆಳೆದು ಬಳುಕುವ ಹಾಗೆ ನಿಂತಿದ್ದಳು. ಅವಳ ತುದಿಗಾಲಿಂದ ಹಿಡಿದು ಅವಳ ಮಯ್ಯಿಕಯ್ಯೆಲ್ಲ ಆಗ ತಾನೇ ಹೆಣ್ಣಾಗ್ತುತ್ತಿತ್ತು.

ರಂಗಪ್ಪ ಕಯ್ಯ ಬೊಗಸೆ ಮಾಡಿಕೊಂಡು ದೂರ ಹೋಗಿ ಬಾಯಿಗೆ ಕೊಟ್ಟು ನಿಲ್ಲುತ್ತಲೆ ಶಾರದ ನೀರು ಸುರುವುತ್ತಾ ಅವ ತಲೆಯಾಡಿಸಿದ ಮೇಲೆ ನಿಲ್ಲಿಸಿ ಆಮೇಲ ತಲೆ ತಗ್ಗಿಸಿ ಅತ್ತಗೂ ನೋಡದೆ ಇತ್ತಗೂ ನೋಡದೆ ಸರಸರ ಒಳಕ್ಕೆ ನಡೆದಳು. ನೀರು ಕುಡಿದ ಮೇಲೆ ರಂಗಪ್ಪನಿಗೆ ಎಷ್ಟೊ ನಿಂಬಳ ಆಯ್ತು. ಹತ್ತಿರಕ್ಕೆ ಬಂದು 'ಸಾರ್ದವ್ವರ ಮದ್ವ ಯಾವಾಗ್ಲ ಅಳಿ' ಅಂದ. ಶಾಸ್ತ್ರಿ ಮೇಸ್ಟರು 'ಕೂಡಿ ಬರಬೇಕು ನೋಡು' ಅಂದು, ಥ್ಲೆ ಅಂದುಕೊಂಡು ಹೊಸ ಮೇಸ್ಟರ ಜೊತೆಗೆ ಬಾಯಾಡಿಸಿದರು. ಅವರು ಈ ಊರಿಗೆ ವರ್ಗವಾಗಿ ಬಂದಾಗಲಿಂದ ಹಿಡಿದು ಅವರು ಮನೆ ಕಟ್ಟಿಕೊಂಡಿದ್ದು ಬಂತು. ಊರ ಹಬ್ಬ ಹರಿದಿನ ಮದ್ವೆ ಮುಂಜಿಯಿಂದ ಯಂತ್ರಗಿಂತ್ರಕ್ಕೆಲ್ಲ ಊರಿಗೆಲ್ಲ ತಾವೇ ತಾವು ಆದುದು ಬಂತು. ಒಂದಿಷ್ಟು ಹೊಲ ಅಂಥ ಮಾಡಿಕೊಂಡದ್ದು ಬಂತು. ಹಾಗೂ ಹೀಗೂ ಮಾಡಿ ಬಾವಿ ತೆಗೆಸಿದ್ದು ಬಂತು. ರಂಗಪ್ಪನಿಗೆ ಹೊತ್ತಾಯ್ತು ಅನ್ನಿಸಿ 'ನಾ ಬತ್ತೀನಿ ಬುದ್ದೇರ. ವಸಿ ಗೌಡ್ರಟ್ಟಿತಂಕ' ಅಂತಲೆ 'ಒಳ್ಳೇದಪ್ಪ ಒಳ್ಳೇದು' ಅಂದರು.

೫

ಕೆಕೇಕೆ ಅಂತ ಊರಾಚೆ ಕೆರೆಕಟ್ಟೆ ಮೇಲೆ ಕುಂತು ಸಂಜೆ ಮಾಡುತ್ತಿದ್ದ ಶಿವರಾಮು ಮತ್ತವನ ಎಡಗೈ ಬಲಗೈಗಳು ನಗೋದ ಬಹಳ ಹೊತ್ತು ನಿಲ್ಲಿಸಲೆ ಇಲ್ಲ. ಶಿವರಾಮು ಮಟಮಟ ನೋಡುತ್ತಿದ್ದನು. ಒಬ್ಬನಂತು ಹೊಟ್ಟೆ ಹಿಡ್ಕಂಡೆ ಇನ್ನು ಕುಲು ಕುಲು ಅಂತಿದ್ದನು. ನಿನ್ನೆ ದಿನ ಹೊತ್ತು ಮುಳುಗೊ ಹೊತ್ನಲ್ಲಿ ಶಿವರಾಮು ಬಾವಿಕಲ್ಲಿನ ಮೇಲೆ ತನ್ನಷ್ಟಕ್ಕೆ ತಾನು ಬೀಡಿ ಸೇದಿಕೋತ ಕುಂತಿದ್ನಂತೆ, ನೀರಿಗೆ ಅಂತ ನರ್ಸಮ್ಮ ಮತ್ತವಳ ಜೊತೆಗೇನೆ ಇರೊ ಕಡಸಿನ ಥರ ಇರೊ ಹೆಣ್ಣೊಬ್ಬಿ ಬಂದರಂತೆ. ಚಲುಗಕ್ಕೆ ಹಗ್ಗ ಕಟ್ಟಿ ಬಾವಿಗೆ ಬಿಟ್ಟಾಗ



ಶಿವರಾಮು ನರ್ಸಮ್ಮನ್ನೇ ನೊಡ್ದನಂತೆ. ಅವಳು ಬಾವಿ ಒಳಕ್ಕ ಹೋಗೊ ಚಲುಗ ನೋಡ್ತಾ ಇದ್ಲಂತೆ. ಸರಿ ಅಂತ ಇವ ಸುಮ್ನಿರ್ಲಾರ್ದೇನೆ ಅತ್ತಗ ತಿರಿಕಂಡು, ಬಾರೆ ಬಾರೆ ಚಂದದ ಚಲುವಿನ ತಾರೆ ಹೇಳೋಕೆ ಸುರು ಮಾಡ್ದನಂತೆ. ನರ್ಸಮ್ಮನಿಗೆ ನಗು ಬಂದು ನಕ್ಕೂ ನಕ್ಕು, ನಗು ತಡಿಲಾರ್ದೇನೆ ನಿಲ್ಲಕ್ಕೂ ಆಗ್ದೇನೆ ನೀರನ್ನು ತಕ್ಕಳ್ದೇನೆ ಹೋದ್ಲಂತೆ. ಆಮೇಲಂತು.

ತನ್ನ ಕಥೆಗೆ ತನ್ನ ಮಿತ್ರರು ಅಷ್ಟೊಂದು ನಕ್ಕದ್ದು ಶಿವರಾಮುಗೆ ಸರಿಕಾಣಲಿಲ್ಲ. ಮೊಖನೆಲ್ಲ ಸಿಡಿಸಿಕೊಂಡು 'ಅದ್ಯಾನ ಕಂಡ್ರಯ್ಯ. ಅಷ್ಟೊಂದು ನಗಾಕ' ಅಂತಲೂ ಅವರಿಗೆ ನಗೂನೆ ಬಂತು. ಆದರೆ ನಗೋದು ಚೆಂದಾಗಿಲ್ಲ ಅಂತ ತುಳುಕೊ ನಗುವ ತುಂಬಿಕೊಂಡು ಒಬ್ಬೊಬ್ಬರು ಒಂದೊಂದು ದಿಕ್ಕು ನೋಡತೊಡಗಿದರು. ಹಾಗೆಯೇ ಎಲ್ಲರೂ ವಸಿ ಹೊತ್ತು ತಣ್ಣಗಿದ್ದ ಮೇಲ ರಾಮಣ್ಣ 'ಅದೇ ವಾರ ವಾರ ಅವಳ ತವಕ ಬತ್ತಾನಲ್ಲ, ಅವ ಅವಳ ಅಣ್ಣ ಅಲ್ವಂತೆ. ಅವ್ನ ಮಡಿಕಂಡವಳಂತೆ' ಎಂದು ವಸ್ತು ಬದಲಿಸಿ ಸೀರಿಯಸ್ಸು ಮಾಡಿದ. ಅದೆಂದೊ ನಂಗ ಗೊತ್ತಿತ್ತು ಬುಡು ಎಂದು ಶಿವರಾಮು ಅಂದ. ತನಗೆ ಗೊತ್ತಿಲ್ಲದೆ ಜಗತ್ತಿನೊಳಗೆ ಉಳಿಯೋದು ಯಾವುದೂ ಇಲ್ಲ ಅನ್ನೊ ಗತ್ತು ಅವನ ದನಿ ಒಳಗಿಂದ ಉಕ್ತಾ ಇತ್ತು. ಅದಕ್ಕೆ ಇನ್ನೊಬ್ಬ 'ಅಷ್ಟೆ ಅಲ್ಲಕಯ್ಯಾ. ಗೌಡ್ರ ಹಟ್ಟೀಲಿ ತಾನೇ ಅವ್ವ ಇರೋದು. ಗೌಡ್ರುವಿ ಅವ್ಳುವಿ ಚಲ್ಲಾಟ ಆಡೋದ ನಮ್ಮಟ್ಟಿ ಜೀತಗಾರ ಕಂಡ್ನಂತೆ' ಎಂದು ಆ್ಯಡ್ ಮಾಡಿದ. ಆಮೇಲ ತಾವು ಎಷ್ಟೇ ಓದಿದ್ರು ಆ ಇಂಗ್ಲಿಷ್ ಬರಕಿಲ್ವಲ್ಲ, ಅವಳು ಹೆಂಗೆ ಆ ನನ್ನ ಮಗ್ನ ಇಂಗ್ಲಿಷ ಔಲು ಸಿಡಿಯೊ ಥರ ಮಾತಾಡೀಳು! ಅನ್ನುವ ಟಾಪಿಕ್ಕು ಬಂತು. ಅದಿರಲಿ, ತಿಂಗಳಾನುಗಟ್ಟಲೆ ಮೂರು ಕಾಸಿನ ಗೇಮಿಲ್ಲ, ಆದರೂ ಇನ್ನೂರು ಮುನ್ನೂರು ರೂಪಾಯಿ ತಕ್ಕಳೊ ಅವಳ ಲಕ್ಕಿನ ವಿಚಾರ ಬಂತು. ಅದು ಏನಾರು ಹಾಳಾಗಲಪ್ಪ, ಕತ್ಲಾಗೊ ಮುಂಚೇನೆ ಅವಳ ಮೊಖ ದರ್ಶನ ಮಾಡಿಕೊಂಡು ರಾತ್ರೀಲಿ ಸುಖನಿದ್ರೆ ಮಾಡಬೇಕು ಎಂಬ ಮಾತಿಗೆ ಬಹುಮತ ಸಿಕ್ಕು ಎಲ್ಲರೂ ಎದ್ದರು. ಎದ್ದರು ಪದಕ್ಕೆ ಆಶ್ಚರ್ಯ ಚಿಹ್ನೆ ಹಾಕ್ಕೊಳ್ಳಬೇಕು.

೬

ರಂಗಪ್ಪನ ಎದುರಾ ಮೈತಾಳಿಕೊಂಡು ನಿಂತ ಕಣ್ಣೆದ್ದಷ್ಟೂ ತುಂಬಿಕೊಳ್ಳುವ ಗೌಡರ ಹಟ್ಟಿ ಕಣ್ಣಿಗೆ ರಾಚಿತು. ಅದು ಯಾವ ತಲೆಯದೊ ಏನೊ. ಅರೆಊರ ಆವರಿಸಿಕೊಂಡದು ನಿಂತಿದೆ. ನಿಂತ ನಿಲುವಿಗೆ ಗುಡುಗು ಸಿಡಿಲು ಅಂಜುವುವು. ಆಗಲಿಂದಲು ಈಗಲುವರೆಗೆ ಊರಿಗೆ ಊರನ್ನೆ ಹಿಡಿದುಕೊಂಡಿದೆ. ಅಥವಾ ಊರೆ ಆ ಹಟ್ಟಿಯನ್ನು ಹಿಡಿದುಕೊಂಡಿದೆ ಎಂದಾರು ಹೇಳಬಹುದು. ಆ ಹಟ್ಟಿಗೆ ತಕ್ಕ ಹಾಗೆಯೆ ಅಲ್ಲಿನ ಮನೆಮಂದಿ ಹುಟ್ಟೋದು ಇರೋದು ನಡೆಯೋದು ಸಾಯೋದೂ ಕೂಡ. ಗೌಡರ ಅಪ್ಪ ಅಜ್ಜಂದಿರು

ಹಾಗಿದ್ದರು ಹೀಗಿದ್ದರು ಅಂತ ಇರೋ ಕಥೆಗಳು ಊರ ಯಾವ ಹಟ್ಟಿದಾರಂದ ತೆಗೆದರೂ ಹಿಂಡು ಹಿಂಡು ಹೊರಬರುತ್ತವೆ. ಗೌಡರಂತು ನಡೆದಾಡಿದರೇನೆ ಬೀದೀನೆ ತುಂಬಿಕೊಂಡಿತೇನೊ ಎಂಬಷ್ಟು ಎಂಬಂತೆ. ಅವರಿವರು ಅಂತಾರೆ - ಕಿರುಬನ ಮುಚ್ಚಿ ಗೌಡರ ತೋರಿಸಬಹ್ರುದು. ಗೌಡರ ಮುಚ್ಚಿ ಕಿರುಬನ ತೋರಿಸಬಹ್ರುದು. ಅವರು ಮೊಖದ ತುಂಬ ಇರೊ ಸಿಡುಬಿನ ಕುಳಿಗಳನ್ನು ಮುಚ್ಚಿಕೋತ ಅತ್ತಗಷ್ಟು ಇತ್ತಗಷ್ಟು ಪೊದೆಯಂಥ ಮೀಸೆ ದಿಕ್ಕಾಪಾಲು ಹೋಗಿ ಅವರು ನಕ್ಕರೂ ಅದು ಕಾಣದು. ಅದಿರಲಿ.

ಆಗ ಹೊತ್ತು ಬಿಟ್ಹೋದ ಬೆಳಕು ಭೂಮಿಮೇಲ ಆಡುತ್ತಿತ್ತು. ಜಗಲಿ ಮನೇಲಿದ್ದ ನರ್ಸಮ್ಮ ವಸ್ತಿಲ ಬಳಿ ಪುಸ್ತಕ ಹಿಡಿದು ಕುಂತಿದ್ದಳು. ಆಗಲೆ ತಲೆದಪ್ಪದ ಗಳಾಸು ದೀಪ ಹಚ್ಚಿದರು. ದೀಪದ ಬೆಳಕು ಅವಳ ಮೊಖಕ್ಕೆ ಬಿದ್ದು ಸೂರ್ಯ ಒಂದ್ಕಡೆ, ಚಂದ್ರ ಒಂದ್ಕಡೆ ಹೊಳೆಯೊ ಥರಾನೆ ಇದ್ದಳು. ಅವಳು ಅಪರೂಪಕ್ಕೆ ಉಡುವಂಥ ಬಣ್ಣ ಎರಚುವ ಸೀರೆ ಅವಳಿಗಂಟಿಕೊಂಡಿತ್ತು. ಅವಳು ತಲೆ ಎತ್ತಿದಾಗ ರಂಗಪ್ಪ ಕಣ್ಣಿಗೆ ಬಿದ್ದು "ಏನು ರಂಗಪ್ಪ ಅಪರೂಪ" ಅಂದಳು. ಅವಳೆ ನಡುಬಾಯಾಕಿ "ಯಾಕೆ ರಂಗಪ್ಪ ಇಷ್ಟೊಂದು ಹಣ್ಣು ಹಿಡಿದಿದ್ದಿ' ಅಂತಲೆ ಒಂದು ಹ್ಯಾಪನಗೆ ನಕ್ಕನು. ಹೊರಗಿನ ಸದ್ದು ಕೇಳಿಯೊ ಅಥವಾ ಲೋಕಾಭಿರಾಮವಾಗೊ ಗೌರವ್ವರು ಬಂದರು. ಅವರು ಉಟ್ಟಿದ್ದ ಹೊಸ ಗರಿಗರಿ ಹಸಿರು ಸೀರೆ ಸುಮ್ಮನಿರದೆ ನಿಂತರು ಕುಂತರು ಸರಸರ ಮಾಡ್ತ ಇತ್ತು. ಮೊಳಕಯ್ಯವರೆಗೂ ಬಳೆ ತೊಟ್ಟಿದ್ದ ಕಯ್ಯ ಆಡಿಸಿ - ಅವ್ರು ಇಲ್ವಲ್ಲ ರಂಗ, ಬಂದೇ ಇಲ್ಲ. ಎಂದು ಬತ್ತಾರೊ ಏನಪ್ಪ - ಅಂದು ಅವರೆ ಏನ್ಬಂದೆ ಅಂದರು. ಹಟ್ಟಿದಿಕ್ಕ ಅಂಗಿರ್ದ್ತ ಏನಿಲ್ಲ ಅಳಿ. ಏನಾರು ಜೋಳ ಗೀಳ ಅಂತ ಅವನು ಅಂದು ಮುಗಿಸೋಕು ಮೊದಲೆ - ಅದೊಳ್ಳೆ ಸರಿಕ ಇವ್ನೆ. ಎಲ್ಲಿಂದ ತಾನೆ ನಾವು ತರುವ? ನಾವೆ ಮಾನವಾಗಿ ಬದಿಕಂಡು ಹೋಗೋದು ಕಷ್ಟ ಆಗದೆ - ಎಂದು ನಿಡಿದು ಉಸುರುಬಿಟ್ಟು ಸುಮ್ಮನಾದರು. ರಂಗಪ್ಪನಿಗೂ ಆಗ ಮಾತುಗಳು ಹೊಟ್ಟೆ ಒಳಗಿಂದ ಹೊರಕ್ಕೆ ಬರಲಿಲ್ಲ.

ಅವನು ಸುಮ್ಮನಾದನು. ಎಷ್ಟೋ ಹೊತ್ತು ಸುಮ್ಮನಾಗೆ ಇತ್ತು. ಗೌರವ್ವಗೆ ನೆಪ್ಪು ತವಕನೆ ಬಂದು - ಇವ್ನೆ ಒಂದು ಸೌದೆ ಕೊಂಟಿದೆ. ಸೌದೇನೆ ಇಲ್ಲ. ವಸಿ ವಡಕೊಡು - ಅಂದರು. ಜೀತದ ಹೈದ ಕೊಳ್ಳಿ ಕೊಂಟು ತಂದು ಅಂಗಳಕ್ಕೆ ಇಟ್ಟು ಒಳಕ್ಕೆ ಹೋತು. ರಂಗಪ್ಪ ಕೊಳ್ಳಿ ಹಿಡಕಂಡು ಸೌದೆಕೊಂಟ ಹದಕ್ಕೆ ಮಲಗಿಸೋಕೆ ಬಾಳಹೊತ್ತು ಅತ್ತಿತ್ತ ಅಲುಗ್ಸುತ ಅಲುಗ್ಸತ ಆ ಕೊಂಟಂತು ಮಗಂದು ಗಂಟುಗಂಟಾಗಿತ್ತು. ಗೌರವ್ವರು ನರ್ಸಮ್ಮರು ಮಾತಿಗೆ ತೊಡಗಿದ್ದರು. ಅವರು ಏನೋ ಹೇಳೋದು ಅದಕ್ಕಿವರು ಏನೊ ಹೇಳೋದು ಆಗುತ್ತಿತ್ತು. ಗೌರವ್ವರು ಕಯ್ಯನು ಎತ್ತಿದರ ಇಳಿಸಿದರ ಬಳೆ ಜಲ್ಲಂತ



ಮಾತಿಗೆ ದನಿ ಕೊಡ್ತಾ ಇತ್ತು. ನರ್ಸಮ್ಮ - ಹಳ್ಳೀನೆ ಒಂಥರಾ ಚೆನ್ನಾರಿ. ಎತ್ತಕಡೆ ನೋಡಿದ್ರೂ ಹಸಿರು ಹಸಿರಾಗಿರುತ್ತೆ. ಕಾಳುಕಡ್ಡಿ ಅಂಥ ಕೊಳ್ಳಾಗಿಲ್ಲ. ಸಿಟಿಲಾದ್ರೆ - ಅಂತ ಏನೊ ಹೇಳಿದ್ಲು. ಗೌರವ್ವರು ಕಯ್ಯಾಡಿಸಿಕೋತ ಅದಕ್ಕೇನೊ ಹೇಳಿದರು. ಅವರು ಹೇಳಿದ್ದು ಏನು ಎಂಬುದು ಬಳೆ ಸದ್ದೊಳಗೆ ಅಡಗಿಹೋತು. ಇತ್ತ ರಂಗಪ್ಪ ಅಂಗಳದಲ್ಲಿ ಕೊಳ್ಳಿ ಎತ್ತಿ ಇದ್ದ ಬದ್ದ ಬಲನೆಲ್ಲ ಬಿಟ್ಟು ಕೊಂಟಿಗೆ ಏಟು ಕೊಡುತಾ ಅದ್ಯಾಕೊ ಬತ್ತಾ ಬತ್ತಾ ಅವನ ಕಣ್ಣು ಮಂಜಾಗುತ್ತಿತ್ತು. ಕಣ್ಣು ಮಂಜಾದಂತೆಲ್ಲ ಒಂದೊಂದು ಸಲ ರಂಗಪ್ಪನಿಗೆ ಸರ್ಕಸ್ಸಲ್ಲಿ ಬಂದಂತೆ ಗೌಡ್ರು ಗೌರವ್ವರು ನರ್ಸಮ್ಮ ಶಾಸ್ತ್ರಿ ಮೇಸ್ಟ್ರು ಹೊಸ ಮೇಸ್ಟ್ರು ಎಲ್ಲ ಕೊಂಟಿನಲ್ಲಿಯೆ ಮೂಡುತ್ತಿದ್ದಂತೆಯೆ ಆಗುತ್ತ ಮೈತುಂಬ ಸುಸ್ತು ಹಿಡ್ದು ಆಗಲೀಗ ನೆಲಕ್ಕೆ ಕಯ್ಯೂರಿ ನಿಧಾನವಾಗಿ ಕೂತನು. ಬಾನಿಂದ ಕತ್ತಲು ಭೂಮಿಗೆ ತಾರಮಾರ ದುಮುಕ್ತ ನೆಲ ಸೇರ್‍ತ ಇತ್ತು.

ಅಷ್ಟೊತ್ತಿಗೆ ಶಿವರಾಮು ಮತ್ತು ಮಿತ್ರವೃಂದ ಸಿಳ್ಳು ಹಾಕೊಂಡು ಹಾದು ಹೋಯಿತು. ಮಾತೊಳಗೆ ಬೆರೆತು ಹೋಗಿದ್ದ ಗೌರವ್ವ ನರಸಮ್ಮನವರಿಗೆ ಮಾತೆ ಸರ್ವಸ್ವ ಆಗಿತ್ತು. ತವಕನೆ ತಿರುಗಿ ನೋಡಿದಾಗ ರಂಗಪ್ಪ ನೆಲಕ್ಕೆ ಊರಿದ್ದ ಕಯ್ಯ ಊರಿಕೊಂಡೆ ಕುಂತಿದ್ದನು. ಇದಕಂಡ ಗೌರವ್ವರು ಅಲ್ಲಿಂದಲೆ - ಯಾಕ? ಏನಾಯ್ತು ಇವ್ನೆ - ಅಂದರು. ರಂಗಪ್ಪ ಮೆತ್ತಗಲ ದನೀಲಿ-ಅದ್ಯಾಕೂ ಆಗಕಿಲ್ಲ ಅಳಿ-ಅಂದನು. ಅಷ್ಟು ಹೇಳೋಕೆ ತಾಯಿ ಹೊಟ್ಟೆ ಒಳಗಿಂದ ಇನ್ನೊಂದ್ಸಲ ಜನ್ಮ ಕಂಡಂಗಾಯ್ತು. ಗೌರವ್ವರು ಎದ್ದು "ಅಯ್ಯೊ ಸಿವ್ನೆ. ಸೌದೇನೆ ಇಲ್ದೆ ಇವತ್ತು ಏನಪ್ಪ ಮಾಡದು. ದನ ತಿನ್ನೊ ಜೋಳದ ಕಡ್ಡೀನೆ ಗತಿಯಾತಲ್ಲ" ಎಂದು ಒಳಕ್ಕೆ ಹೋದರು. ಅವರು ಬಾಳ ಒಳಕ್ಕ ಹೋಗುವವರೆಗೂ ಅವರ ಸೀರೆಯ ಸದ್ದು ಕೇಳಿಸುತ್ತಿತ್ತು. ಆಮೇಲ ಅಂಗಳ ತುಂಬಾ ಬಣ ಬಣ ಅಂತು. ರಂಗಪ್ಪ ನೆಲಕ್ಕೂರಿದ್ದ ಕಯ್ಯ ಬಲದಿಂದಲೆ ಮೇಲಕ್ಕೆದ್ದನು. ಹೆಜ್ಜೆಯನ್ನು ಕಿತ್ತು ಕಿತ್ತು ಇಟ್ಟಂತೆಲ್ಲ ಅವನ ಮಗ ಅವನ ಹೆಂಡತಿ ಅವನ ಜೋಪಡಿ ಹತ್ತತ್ತಿರ ಬಂತು.

೭

?

(1973)

# ಅಮಾಸ

ಅಮಾಸ ಎಂಬುದು ಅಮಾಸನ ಹೆಸರು. ಅವನು ಕಪ್ಪಗಿದ್ದುದಕ್ಕೊ ಅಮಾವಾಸೆ ದಿನ ಹುಟ್ಟಿದ್ದಕ್ಕೊ ಅವನಿಗೆ ಅಮಾಸ ಹೆಸರು ನಿಂತಿದೆ. ಅಮಾಸ ಹೆಸರು ಯಾಕೆ ಬಂತು ಎಂದು ಅವನ ಅಪ್ಪ ಅವ್ವ ಬದುಕಿದ್ದರೆ ಕೇಳಬಹುದಿತ್ತು. ಆದರೆ ಅವನು ಹುಟ್ಟಿದ ಮೇಲೆ ನಡೆದಾಡೊ ವೇಳೆಗೆ ಅವನನ್ನು ಹೆತ್ತವಳು ಹುಟ್ಟಿಸಿದವನು ನಾನಾ ನಿಮಿತ್ತವಾಗಿ ದೈವಾಧೀನರಾದರು. ಆಗಲೀಗ ಅಮಾಸನಿಗೆ ಮಾರಿಗುಡಿ ಅಂದರೆ ಅಮಾಸ, ಅಮಾಸ ಅಂದರೆ ಮಾರಿಗುಡಿ ಎಂಬಂತಾಯ್ತು. ಮಾರಿಗುಡಿ ಎಂದ ಮಾತ್ರಕ್ಕೆ ದಿಕ್ಕುದೆಸೆ ಇಲ್ಲ ಅಂತೇನಲ್ಲ. ಅಮಾಸನಂಥ ಎಷ್ಟೊ ಜನಕ್ಕೆ ಮಾರಿಗುಡಿ ನೆರಳು ನೀಡುತ್ತ ಬಂದಿದೆ. ಬೇಸಿಗೆಯಲ್ಲಂತೂ ದಗೆಗೆ ಜನ ಅಲ್ಲಿ ಜಾತ್ರೆಯಾಗುವುದು. ಅದಿರಲಿ, ಅಲ್ಲಿ ಅಮಾಸನನ್ನು ಬಿಟ್ಟರೆ ಒಂದು ಹಳೆ ತಲೆಯ ವಾಸವಿದೆ. ಹಳೆ ತಲೆ ಅಂದರೆ ಅಂತು ಅವನ ಮಯ್ಯಿಕಯ್ಯಿತಲೆ ಅನ್ನದೆ ಕೂದಲು ಇದ್ದಷ್ಟೂ ಬೆಳ್ಳಗಾಗಿ ಅವನ ದೇಹ ತುಂಬ ಹರಿದಿವೆ. ಇದುವರೆಗೆ ಕಂಡಂತೆ ಅವನು ಕುಂತಲ್ಲಿಂದ ಎದ್ದುದನ್ನು ಯಾರೂ ಕಂಡಂತಿಲ್ಲ. ಮಾರಿಗುಡಿಯ ಮೂಲೆಗೆ ಸೇರಿದಂತೆ ಒಂದು ಮೂಲೇಲಿ ಒಂದು ಕಡೆ ಒಂದು ಕಪ್ಪು ಕಂಬಳಿ, ಯಾವ ಕಾಲದ್ದೊ ಅಂತು ಹಾಸಿದೆ. ಅದರ ಮೇಲೆ ಅವನು ಕಾಲು ಚಾಚಿಯೊ ಪಕ್ಕದ ಕಂಬಕ್ಕೊರಗಿಯೊ ಅಥವಾ ಕೈಗಳ ಹಿಂದಕ್ಕಾನಿಸಿಯೊ ಕೂತೇ ಇರುವನು. ಅವಗೆ ಇಂಥ ಮೂರು ನಾಲ್ಕು ಭಂಗಿಗಳನ್ನು ಬಿಟ್ಟರೆ ಬೇರೆಯದು ಇದ್ದಂತೂ ಇದ್ದಿಲ್ಲ. ಅವ ಅಂತೆ ಕುಂತಾಗೆಲ್ಲ ಅರೆಗಣ್ಣು ಮುಚ್ಚಿ ಕೂರುವುದು ಹಿಂದಿನಿಂದಲೂ ಹೇಗೊ ಬಂದುಬಿಟ್ಟಿದೆ. ಅದ ಬಿಟ್ಟು ಅವ ಕೂತಂತು ಇಲ್ಲ. ಅವನ ಈ ಸ್ಥಿತಿಯ ಕಂಡರೆ ಏನನ್ನೊ ಧೇನಿಸುತ್ತ ಕುಂತಂತೆ ಗೋಚರಿಸುತ್ತೆ. ಸುಕ್ಕುಗಳಿಂದಲೆ ಮಾಡಿದ ಅವನ ಮೊಖ ಮೇಲಿನ ರೀತಿ ಅನ್ನಿಸಲು ಕಾರಣ ಇದ್ದೀತು. ಅಥವಾ ಆ ಸುಕ್ಕು ಮೊಖಕ್ಕೆ ಒಪ್ಪುವ, ಕತ್ತಿನವರೆಗೂ ಬೆಳ್ಳಗೆ ಇಳಿಬಿದ್ದಿರುವ ರಟ್ಟೆ ಗಾತ್ರದ ಮೀಸೆಯೂ ಕಾರಣವೆ. ಒಟ್ಟಲ್ಲಿ, ಅವ ಏನನ್ನೊ ಧೇನಿಸುತ್ತ ಕುಂತಂತೆ ಗೋಚರಿಸುತ್ತದೆ. ಅಲ್ಲವನ ಪಕ್ಕಕ್ಕೆ ಸೇರಿದಂತೆ ಆಳೆತ್ತರದ ಬಿದಿರು ಗಳ ಸದಾ ಇದ್ದುದೆ. ಅವನು ಅತ್ತ ಇತ್ತ





ಚಲಿಸಬೇಕಾದಾಗೆಲ್ಲ ಅಮಾಸ ಕೈಗಿರುವುದರಿಂದ ಆ ಬಿದಿರು ಗಳದ ಬಳಕೆ ಅಷ್ಟೇನು ಈಗಿಲ್ಲ. ಆದರೆ ಕೋಳಿ ಕುರಿ ಆಡುಮರಿ ಮುಂತಾದವು ಸುತ್ತುವರಿದರೆ ಅದ್ದರಿಸುವುದಕ್ಕೆ ಅದು ಆಗಾಗ ಬೇಕಾಗುತ್ತದೆ. ಇಷ್ಟೂ ಹೇಳಿ ಅವನ ಹೆಸರು ಹೇಳುವುದೆ ತಪ್ಪಿತು. ಸಣ್ಣವರಿಂದ ಹಿಡಿದು ದೊಡ್ಡವರವರೆಗೆ ಅವನನ್ನು ಕುರಿಯಯ್ಯ ಕುರಿಯಯ್ಯ ಎನ್ನುವರು. ಅದೇನು ಅವನ ಹುಟ್ಟಿದ ಹೆಸರೆ? ಪ್ರಶ್ನೆ ನಮಗು ಬೇಡ, ನಿಮಗು ಬೇಡ. ಇಷ್ಟಂತು ಕಂಡುದೆ - ಅವ ಬುದ್ಧಿ ಬಲ್ಲವನಾದಾಗಲಿಂದ ಹಿಡಿದು ಅವನ ತೊಡೆಗಳು ನಡೆದಾಡೋದ ಕಳೆದುಕೊಳ್ಳುವವರೆಗೆ ಊರ ಗೌಡರ ಹಟ್ಟಿ ಕುರಿಗಳ ಕಾಯ್ದುಕೊಂಡು ಬಂದುದು. ಈಗಲು ಮೇಲಿನ ರೀತೀಲಿ ಅರೆಗಣ್ಣು ಮುಚ್ಚಿಕೊಂಡಾಗ ಬೆರಳನ್ನು ಒಂದೊಂದು ಕುರಿ ಮಾಡಿಕೊಂಡೇನೊ ತಂತಾನು ಎಣಿಸುತ್ತ ಹೋಗುವನು. ದಿನಾ ಆರೇಳು ಸಲ ಹೀಗೆ ಇದು ತಪ್ಪಿದ್ದಲ್ಲ. ಇದ ಯಾವ ದಿನವೂ ತಪ್ಪಿಸಿಕೊಂಡೂ ಹೋಗಿಲ್ಲ. ಅಮಾಸನು ಹೀಗೆ ಕುರಿಯಯ್ಯನ ಕಣ್ಣುಮಟಾರದಲ್ಲಿ ಬೆಳೆಯತೊಡಗಿದನು. ಈಗ ಅವನ ವಯಸ್ಸು ಹತ್ತೊ ಹನ್ನೊಂದೊ ನಡೆಯುತ್ತಿದೆ. ಕುರಿಯಯ್ಯನು ಅಮಾಸ ಅಂದಾಗ ಓ ಅಂತ ದನಿ ಕೊಡೋದು ಅಮಾಸನ ಹಗಲು ಕೆಲಸ ಅನ್ನಬಹುದು.

ಊರಿಗೆ ಕತ್ತಲು ಇಳಿಯಲು ತೊಡಗಿದಾಗಲೆ ಅಮಾಸನೂ ಕುರಿಯಯ್ಯನೂ ಮಠದ ಬೆಲ್ಲು ಆಗುವುದನ್ನೆ ನೆಟ್ಟಗೆ ಕಾಯುವರು. ಮಠದ ಬೆಲ್ಲು ಹೊಡೆದ ತಡವೆ ಅಮಾಸನು ಕುರಿಯಯ್ಯನ ಕಿದ್ದಂಡೆಯಲ್ಲಿ ಮಡಗಿರುವ ತಟ್ಟೆ ಗ್ಲಾಸು ತಗದುಕೊಂಡು ಲಗುಬಗ ಓಡುವನು. ಅಷ್ಟಕ್ಕಾಗಲೆ ಸಂಪೂರ್ಣ ಕತ್ತಲು ಹಿಡಿದು ಗವ್ವಗಿರುವುದರಿಂದ ಅಮಾಸ ಓಡುವುದೇನು ಕಾಣಿಸುವುದಿಲ್ಲ. ಕಣ್ಣು ಸೀಳಿಸಿಕೊಂಡು ನೋಡಿದರೆ ಅವ ಓಡುವ ಓಟಕ್ಕೆ ಕತ್ತಲು ಕಲಕುತ್ತಿರುವಂತೆ ಹೊಳೆಯುತ್ತದೆ. ಹಾಗೆ ಅವನು ಹೋದವನು ತಿರುಗ ಯಾವಾಗ ಬಂದ ಎಂಬುದೂ ತಿಳಿಯದು. ಬಂದವ 'ಅಯ್ಯಾ' ಅಂದುದು ಕತ್ತಲನ್ನು ಅಲುಗಾಡಿಸುತ್ತ ಮೂಡುವಾಗಲೆ ತಿಳಿಯುವುದು. ಆಗ ಕುರಿಯಯ್ಯ ಮಲಗಿದ್ದರೆ ಎದ್ದು ಕೂರವನು. ರೂಢಿಯಂತೆ ಆ ಕತ್ತಲಲ್ಲೆ ಮಠದ ಹಿಟ್ಟು ಸಾರು ಉಂಡು ಆಮೇಲ ಅಮಾಸ ಮಲಗಿ ಬಿಡುವನು. ಅಷ್ಟೊತ್ತಿಗೆಲ್ಲ ಆ ಹಿಡಿದ ಕತ್ತಲಿಗೆ ಊರು ತನ್ನ ದನಿ ಅಡಗಿಸಿಕೊಂಡು ಮಲಗಿದರೂ ಆಗಾಗ ಅಲ್ಲಲ್ಲಿ ನಾಯಿಗಳ ಕಿರುಚಾಟವೊ ಗೂಗೆಯ ಗೂಕ್ಕೊ ಮೆಲುಕಾಕುತ್ತಲೆ ಇರುವುದು. ಮುದುಕ ನಿದ್ದೆ ಬಾರದಕ್ಕೆ ಕಣ್ಣು ಬಿಟ್ಟು ಕಣ್ಣೆಗೆಟಕುವಷ್ಟು ನೋಡುತ್ತಲೋ ಎಚ್ಚರಿರುವಷ್ಟು ಕಾಲ ಏನನ್ನಾರು ತನ್ನೊಳಗೆ ಮಾತಾಡುತ್ತಲೊ ಇದ್ದು 'ಅಮಾಸ ಅಮಾಸ' ಎಂದು ಎರಡು ಮೂರು ಸಲ ಅಂದು ಮರುತ್ತರ ಬಾರದಿದ್ದರೆ ಅವನೂ ಮಲಗುವನು.

ಆ ಆಜಾಬಾಜುಗೆಲ್ಲ ವರ್ಷಕ್ಕೊಂದಾವರ್ತಿ ಎಲ್ಲ ಊರಿಗೂ ಬರುವ ಹಾಗೆಯೇ ಅಲ್ಲಿಗೂ ಮಾರಿಹಬ್ಬ ಬರುವುದು. ಆಗ ಮಾತ್ರವೆ ಕುರಿಯಯ್ಯ ತನ್ನ ಸ್ಥಾನವ ಬೇರೆ ಸ್ಥಳಕ್ಕೆ ಪಲ್ಲಟಿಸಬೇಕಾಗುತ್ತದೆ. ಆಗ ಮಾರಿಗುಡಿಗೆ ದುಂಬುದೂಳು ತೊಡೆದು ಸುಣ್ಣ ಕೆಮ್ಮಣ್ಣು ಬಣ್ಣವ ತುಂಬಿ ಕಣ್ಣಿಗೆ ಗುದ್ದುವಂತೆ ಮಾಡುವರು.

ಈಗ ಸುಣ್ಣ ಕೆಮ್ಮಣ್ಣು ಪಟ್ಟೆ ಹೊಡೆದು ಎಲ್ಲ ಕಡೆಗು ಮುಗಿದಿದ್ದು ಆಗ ಬೀಳುತ್ತಿದ್ದ ಎಳೆ ಬಿಸಿಲು ಅವುಗಳ ಮೇಲೆ ಬಿದ್ದು ಅದು ಹೆಚ್ಚು ಕಾಂತಿ ಬೀರುತ್ತಿತ್ತು. ಅಲ್ಲಿಗೆಲ್ಲ ಕುರಿಯಯ್ಯನ ಸುತ್ತುಮುತ್ತು ಮಾತ್ರವೆ ಮೊದಲಂತೆ ಉಳಿದಿದ್ದು ಉಳಿದ ಕಡೆಲ್ಲ ಬೆಳ್ಳಾಗಿದ್ದರಿಂದ ಅದು ಮತ್ತೂ ಕಂದಾಗಿತ್ತು. ಅಲ್ಲಿ ಹಜಾರ ತುಂಬ ಹತ್ತೆಂಟಾಳು ಅತ್ತಗೊಂದು ಕಡೆ ಇತ್ತಗೊಂದು ಕಡೆ ಓಡಾಡುತ್ತ ಪಂಜು ರಡಿ ಮಾಡುವುದು ಬಣ್ಣ ಬಣ್ಣದ ಕಾಗದ ಕತ್ತರಿಸಿ ಅಂಗಳ ಅಂದ ಮಾಡಲು ಸರ ಮಾಡುವುದು ಮುಂತಾಗಿ ಚಿತ್ರ ವಿಚಿತ್ರ ಮಾಡುತ್ತಿದ್ದರು. ಹೆಚ್ಚೂಕಮ್ಮಿ ಎಲ್ಲರೂ ಅಲ್ಲಿ ಹೊಸ ಹೊಸ ಬಿಳಿ ಬಟ್ಟೆ ಹಾಕಿದ್ದರಿಂದ ಮಾರಿಗುಡಿ ತುಂಬ ಬಿಳಿ ಹೊಳಪು ವಡೀತಿತ್ತು. ಅಲ್ಲಿದ್ದ ಬಸಣ್ಣ ಎಂಬುವವನು ಫೆಂಚು ಮೀಸೆಬಿಟ್ಟು ಕಪ್ಪಗೆ ಗಿಡ್ಡಕ್ಕೆ ಇದ್ದನು. ಅವನೂ ಬಿಳಿಬಟ್ಟೆ ತೊಟ್ಟಿದ್ದರಿಂದ ಮತ್ತೂ ಹೆಚ್ಚು ಕಪ್ಪಾಗಿ ಹೊಳೆಯುತ್ತಿದ್ದನು. ಅವನು ಬಾಯಿ ಬಿಡದಿದ್ದರೂ ಅವನ ಹಳದಿ ಬಾಚಿ ಹಲ್ಲುಗಳು ಬಿಳಿಬಟ್ಟೆ ದೆಸೆಯಿಂದ ಅವೂ ಹೊಳೆಯುತ್ತ ಹೊರಗೇ ಇದ್ದುವು. ಅವನ ಕಯ್ಯಲ್ಲಿ ಒಂದು ಹಿಡಗಲು ಇತ್ತು. ಬಸಣ್ಣನು ದಪ ದಪ ಹೆಜ್ಜೆ ಹಾಕಿ ಕುರಿಯಯ್ಯನ ಮೂಲೆಗೆ ಬಂದು 'ಅಯ್ಯಾ' ಎಂದು ಜೋರಾಗಿ ಕಿರುಚಿದನು. ಕುರಿಯಯ್ಯನನ್ನು ಎರಡು ಸಲವಾರು ಮಾತಾಡಿಸಿದರೆ ಮಾತ್ರವೆ ಆ್ಞ ಅಂತಿದ್ದರಿಂದ ಎಲ್ಲರು ಮೊದಲೆ ಕೂಗಿಕೊಂಡು ಮಾತಾಡುವರು. ಬಸಣ್ಣನ ದನಿಗೆ ಕುರಿಯಯ್ಯ ನಿಧಾನ ಕಣ್ಣು ತೆಗೆದು ಬಹಳ ನಿಧಾನವಾಗಿ ನೋಡಿದನು. ಅವನು ತನ್ನೆದುರು ಬೆಳ್ಳಗೆ ಮೂಡುತ್ತ ಓಡಾಡುತ್ತ ಇದ್ದ ಆಕೃತಿಗಳನ್ನು ನೋಡುತ್ತ, ಅವನು ಹಾಗೆ ನೋಡುತ ಹೋದಂತೆ ಅವನಿಗೆ ಹಿಂದಣ ನೆನಪುಗಳು ಕೆಂದುತ್ತ ಕಣ್ಣಮುಂದೆ ಓಡಾಡತೊಡಗಿದವು.... ಮಾರಿಹಬ್ಬ ಅಂದರೆ ಹುಲಿಯಾಸ, ಅಂದರೆ ಅವನೆ. ಅವನ ಪ್ರಾಯದಲ್ಲಿ ಅವನಿಲ್ಲದ ಹುಲಿಯಾಸ ಇದ್ದುದ್ದಿಲ್ಲ. ಹುಲಿಯಾಸ ಕಣ್ಗಳ ಮುಂದೆ ಕುಣಿಯತೊಡಗಿತು. ತಮ್ಮಟೆಯ ಸದ್ದೂ ಬಂದು ಕಿವಿಗೆ ಚಚ್ಚತೊಡಗಿತು. ಆಗ ದೊಡ್ಡಗೌಡರು ಬದುಕಿದ್ದ ಕಾಲ. ಕುರಿಯಯ್ಯ ಅಮಾಸನಷ್ಟುದ್ದದ ಹೈದನು. ಕುರಿಯಯ್ಯನ ಹುಲಿಯಾಸದ ಥೇಟಿಗೆ ದೊಡ್ಡಗೌಡರು ತಲೆದೂಗಿಬಿಟ್ಟರು. ಅಂಗಿಬಟ್ಟೆ ಇನಾಮು ಕೊಡುತ್ತ 'ನೀ ಇರೊಷ್ಟು ಕಾಲ ನಮ್ಮ ಹಟ್ಟೀಲೆ ಇರು. ನೀನು ಉಂಡ ಊಟ, ಹಾಕೊಂಡ ಬಟ್ಟೆ, ಒಂದಿಷ್ಟು ಕುರಿ ನೋಡ್ಕೊ ಅಷ್ಟೇನೆ.' ಅವನ ಸುಕ್ಕುಮೊಖದ ಪ್ರತಿನರಿಗೆಯೂ ಮಾರಿಗುಡಿಯ ಬಿಳಿಬಣ್ಣದಿಂದೊ ಅಲ್ಲಿದ್ದ ಗುಂಪು ತೊಟ್ಟಿದ್ದ ಬಿಳಿ ಬಟ್ಟೆ ದೆಸೆಯಿಂದೋ ಬೆಳ್ಳಗೆ ಅಗಲವಾಗಿ



ಅರಳತೊಡಗಿತು.... ಬಸಣ್ಣನು ಇನ್ನೂ ಒಂದು ಸಲ ಜೋರಾಗಿಯೇ 'ಅಯ್ಯಾ' ಅಂದನು. ಕುರಿಯಯ್ಯ ಕತ್ತ ಎತ್ತಿ ಅವನ ಅವಲೋಕಿಸಿದನು. ಬಸಣ್ಣ ನಿಂತ ಠೀವಿಗೆ ಅವ ಬಂದದ್ದು ಹೊಳೆಯಿತು. ಕುರಿಯಯ್ಯ ಬಲಗೈಲಿ ಬಿದಿರು ಗಳ ಹಿಡಿದು ಇನ್ನೊಂದು ಕಯ್ಯ ಮೆಲು ನೀಡಿದನು. ನೀಡಿದ ಕಯ್ಯ ಬಸಣ್ಣ ಹಿಡಕಂಡ ಮೇಲೆ ಅದರ ಮೇಲೆ ಬಲ ಹಾಕಿ ಎದ್ದು ನಿಂತು ಬಿದುರು ಗಳ ಊರುತ್ತ ನಡೆಯುತ್ತ ಆ ಮೂಲೆ ಸೇರಿ ಕುಂತನು. ಅಲ್ಲಿ ಹಾಸಿದ್ದ ಕಂಬಳಿಯನ್ನು ಬಸಣ್ಣನು ಒಂದೆರಡು ಸಲ ಜಾಡಿಸಿ ವದರಿ ಕುರಿಯಯ್ಯ ಕುಂತ ಮೂಲೆಗೆ ತಂದು ಹಾಸಿದನು. ಕಂಬಳಿಯ ಜಾಡಿಸಿ ವದರಿದ ಬಿರುಸಿಗೆ ಕಂಬಳಿಯಲ್ಲಿದ್ದ ಧೂಳು ಕಸವೆಲ್ಲ ಎಳೆ ಬಿಸಿಲಿಗೆ ಹಾರಿ ಗಾಳೀಲಿ ಈಜತೊಡಗಿದವು. ಕಂಬಳಿಯನ್ನು ಮೊದಲು ಹಾಸಿದ್ದ ಅಷ್ಟಗಲಕ್ಕೆ ಅಂಗೈ ಮಟ್ಟದ ಕಂದು ಬಣ್ಣಕ್ಕೆ ತಿರುಗಿದ್ದ ಧೂಳು ಕಸಕಡ್ಡಿ ಪವಡಿಸಿತ್ತು. ಅದರ ಮೇಲಕ್ಕು ಆಗ ಎಳೆ ಬಿಸಿಲು ಬಿದ್ದು ಅದಕ್ಕೂ ಬಿಳಿ ಬಣ್ಣವೆ ಹಿಡಕಂಡಂತೆ ತೋರುತ್ತಿತ್ತು.

ಅತ್ತಗ ಆಡಿಕೊಳ್ಳುವುದಕ್ಕೆ ಅಂತ ಎತ್ತೆತ್ತಗೊ ಹೋಗಿದ್ದ ಅಮಾಸನು ಮಧ್ಯಾಹ್ನ ಮಾಡಿಕೊಂಡೆ ಮಾರಿಗುಡಿಗೆ ಬಂದುದು. ಬಂದು ನೋಡುತ್ತಾನೆ, ನೋಡಿದರೆ ಕಣ್ಣಿಗೆ ಹಿಡಿಸಲಾರದಷ್ಟು ಅಲ್ಲಿ ಏನೇನೊ ತುಂಬಿಕೊಂಡಿತ್ತು. ಹಸಿ ಸುಣ್ಣ ಕೆಮ್ಮಣ್ಣು ನೆಲ ತಾರಿಸಿದ ಹಸಿ ತೊಪ್ಪೆ ವಾಸನೆಗಳೆಲ್ಲ ಒಂದರ ಮೇಲೊಂದು ಬಿದ್ದು ಮೂಗಿಗೆ ಮುತ್ತುತ್ತ ಮಾರಿಗುಡಿ ಗಮಲೆ ಒಂದಾಗಿತ್ತು. ಕುರಿಯಯ್ಯ ಈ ಮೂಲೆಯಿಂದ ಆ ಮೂಲೆಗೆ ಸ್ಥಳಾಂತರಿಸಿ ಮೊದಲಂತೆ ಕೂತಿದ್ದನು. ಹಜಾರದಲ್ಲಿ ನಡುವೆ ರೌಂಡಾಗಿ ಒಂದಿಷ್ಟು ಜನ ಗುಂಪುಗೂಡಿ ನಿಗರಿ ನಿಗರಿ ಏನೊ ನೋಡುತ್ತಿದ್ದರು. ಗುಂಪಿನ ಒಳಗ ಒಬ್ಬ ಏನೊ ಮಾಡುತ್ತಿದ್ದನು. ತವಕಂತ ಅಲ್ಲಿಗೆ ಅಮಾಸ ಹಾರಿ ಇಣುಕಿದನು. ಕಂಡದ್ದು - ಬಣ್ಣ ಬಣ್ಣದ ಬ್ರಿಂಗದ ಕಾಗದದಲ್ಲಿ ಗಂಡಭೇರುಂಡ ಕಿರೀಟ ಮುಂತಾದ ಅವಚವಿ ಕೊರೆಯುತ್ತಿದ್ದುದ್ದು. ಅಲ್ಲಿ ಮಾಡಿಟ್ಟದ್ದೆಲ್ಲ ಕಣ್ಣಿಗೆ ಅಚ್ಚುಮೆಚ್ಚಾಗಿತ್ತು. ಅಲ್ಲಿ ಅವ ಚಿತ್ರ ಕೊರೆಯುತ್ತಿದ್ದಂತೆಲ್ಲ ಸುತ್ತಗೆ ನೆರಕೊಂಡವರು ಹಾಗಿರಬೇಕು ಹೀಗಿರಬೇಕು ಆ್ಞ ಹಾಗೆ, ಇ್ಞ ಹೀಗೆ ಭೇಷ್ ಅಂತೆಲ್ಲ ತಲಾ ಒಂದು ಮಾತಾಡುತ್ತಿದ್ದರು. ನೋಡಿ ನೋಡಿ ಅವೆಲ್ಲ ಕಣ್ಣಿಗ್ಗಿಳಿದ ಮೇಲೆ ಅಮಾಸನು ಅಲ್ಲಿಂದ ನೆಗೆದು ಕುರಿಯಯ್ಯನ ಪಕ್ಕಕ್ಕೆ ಬಂದು ಕೂತನು. ಎದುರಾ ಅಂಗಳದಲ್ಲಿ ಗೋಡೆಗೆ ಸೇರಿದ ಹಾಗೆ ದೊಡ್ಡ ದೊಡ್ಡದ ಕೆಂಪು ಬಿಳಿ ಬಣ್ಣದ ದೇವರ ಚತ್ರಿ ಚಾಮರಗಳನ್ನು ಹೊರತೆಗೆದು ಬಿಸಿಲಿಗೆ ಒಣಹಾಕಿ ಸಾಲಾಗಿ ನಿಲ್ಲಿಸಿದ್ದರು. ಅವಕ್ಕೆ ಹತ್ತಿರದ ಮೂಲೇಲಿ ಬಾನ ಎಟುಕಿಸಲು ತೆಂಗಿನ ಮರ ನಿಗುರುತ್ತ ವಾಲಾಡುತ್ತಿತ್ತು. ಅದರ ಮೇಲಕ್ಕೆ ಕಣ್ಣು ಹತ್ತಿಸಿ ಅಮಾಸ ಕಣ್ಣು ಹೋದಷ್ಟು ದೂರ ಏರಿಸಿದನು. ಆರೇಳು ಬಲವಾದ ಗೊನೆಗಳ ಕಾಯೀ ಭಾರಕ್ಕೆ ಮರ ಜಗ್ಗುತ್ತಿತ್ತು. ಬುಡಕ್ಕೆ ಕಣ್ಣು ಇಳಿಸಿದರೆ ಅಲ್ಲಿ ಅದಕ್ಕೆ ಸುಣ್ಣ ಕೆಮ್ಮಣ್ಣು

ಬಣ್ಣವ, ಮರದ ಬುಡದ ತುಂಬಾ ಯಾರೊ ಬಳಿದಿದ್ದರು. ಕಂಡ ಅಮಾಸ ಕುರಿಯಯ್ಯನ ಪಕ್ಕಕ್ಕೆ ಮತ್ತೂ ತವದು 'ಅಯ್ಯಾ' ಅನ್ನಲು ಏನ ಎಂಬಂತೆ ಅವ ನೋಡಲು 'ನೋಡಯ್ಯ ನೋಡಯ್ಯ ನಿನ್ನ ತಿಗನ ಮರ್ಕ ಯಾರಕಣ ಸುಣ್ಣ ಬಣ್ಣ ಬಳದವರೆ' ಅಂತು. ಕುರಿಯಯ್ಯ ನೋಡಲು ಅಷ್ಟು ದೂರ ಕಾಣಿಸಿ ಆಮೇಲ ಕಣ್ಣು ಮಂಜು ಮಂಜಾಗಿ ಬಿಡುತ್ತ ಏನೂ ಕಾಣಲಿಲ್ಲ. ಅವನಿಗೆ ಕಂಡ್ದು: ಮಾಟ್ನ ಮಾಡಿ ಯಾರೊ ಸುಡುಗಾಡಲ್ಲಿ ತೆಂಗಿಕಾಯಿ ಹೂತಿದ್ದು. ಅದು ಸಸಿಯಾಗಿ ಕೆಂದಿ, ಭೂಮಿ ಸೀಳಿ ಬಂದದ್ದು. ಕಿತ್ತು ತಂದು ತನ್ನದು ಅಂತಾರು ಇರ್ಲಿ ಅಂತ ಮಾರಿಗುಡಿ ಮೂಲೇಲಿ ನೆಟ್ಟಿದ್ದು. ಅದು ತನ್ನ ಕಣ್ಣು ಮಟಾರದಲ್ಲೆ ಗರಿ ಕಳಚ್ತ, ಕಳಚಿದಲ್ಲಿ ಕಳಚಿದ ಗುರುತ ಉಳಿಸ್ತ, ಗರಿ ಕಳಚ್ತ ಕಳಚಿದಲ್ಲಿ ಗುರುತ ಮಯ್ಯಲ್ಲಿ ಉಳಿಸ್ತ, ಬೆಳೀತ ಬೆಳೀತ ಮೇಲಕ್ಕೆ ಮೇಲಕ್ಕೆ ಅಂತ ಇನ್ನೂ ಮೇಲಕ್ಕೆ ಬೆಳೆದು ನಿಂತಿತು.

ಹಬ್ಬದಂದು ನೆಲಕ್ಕೆ ಹೊತ್ತು ಇಳಿಯುತ್ತಿದ್ದಂತೆಲ್ಲ ಪರಸ್ಥಳದಿಂದ ನೆಂಟರಿಷ್ಟರು ಊರಿಗೆ ಒಬ್ಬೊಬ್ಬರಾಗಿ ಇಳಿಯುವುದು ಏರತೊಡಗಿತು. ಬಂದವರು ರೂಢಿಯಂತೆ ಮಾರಿಗುಡಿಗೆ ಮೊಖಹಾಕಿಯೆ ಆಮೇಲಿನದು ಮಾಡುತ್ತಿದ್ದರು. ಕೆಲವರು ಅಲ್ಲೆ ಕುಂತು ಎಲ್ಲಾ ಮರೆತು ಲಾ ವಡೆಯುವಲ್ಲಿ ಲೀನವಾಗಿದ್ದರು. ಅವರವರ ಊರಲ್ಲಿ ಆದ ಹಿಂದಲ ಜಗಳನೆಲ್ಲ ಕೆದಕಿ ಹೆಂಗಾಯ್ತು ಏನ್ಕಥೆ ಎಂಬುದೆ ಅವರ ಬಾಯಿಗೆ ಮುಖ್ಯವಸ್ತುವಾಗಿತ್ತು. ಅಂಥ ಸಂದರ್ಭದಲ್ಲೆ ಹೊರಗೆ ಜೋಳದಕಂತೆ ಕತ್ತಿಸಿ ಬಸಣ್ಣನು ತಮ್ಮಟೆ ಕಾಯಿಸುತ್ತ ಅದರ ದನಿ ಬಿಗಿ ಮಾಡುತ್ತಿದ್ದನು. ಅವನ ಸುತ್ತ ವಾನರಸೇನೆಯಂತೆ ಐಕಳು ಮಕ್ಕಳು ಸುತ್ತಿದ್ದವು. ಅದರೊಳಗೆ ಅಮಾಸನು ಒಬ್ಬನಾಗಿದ್ದನು. ಬಸಣ್ಣ ತಮ್ಮಟೆಯನ್ನು ಎದೆಗೆ ಏರಿಸಿ ಚಡ್ ಚಡ್ ನಕುನ, ನಕುನ ನಕುನ ಬಾರಿಸಲು ಕಂಚಿಗೆ ಬಡಿದಂತೆ ತಮ್ಮಟೆ ದನಿಯು ಊರ ನಾಕ ಮೂಲೆ ಮುಟ್ಟತೊಡಗಿತು. ಸುತ್ತ ಇದ್ದ ಐಕಳು ಸುಮ್ಮನಿರದೆ ಕುಣಿಯತೊಡಗಿದವು. ಬಸಣ್ಣನಿಗೂ ಹುಮ್ಮಸ್ಸು ಬಂದು ಢಂಗ್ ಢಂಗು, ಢಂಗು ಚುಕ್ಕಿ ವಡೀತ ಅವನೂ ಕುಣಿದನು.

ಅದಕ್ಕೆ ಕುಣಿಯೋಕೆ ಐಕಳಿಗೂ ಹೆಜ್ಜೆ ಸಿಕ್ಕಿ ಐಕಳೂ ಕುಣೀತ ಬಸಣ್ಣನೂ ಕುಣೀತ ಹೋಗವರು ಬರುವರು ಸೇರಿ ಒಬ್ಬರ ಮೇಲೆ ಒಬ್ಬರು ಬಿದ್ದು ನಿಂತರು. ಅಮಾಸನಿಗೆ ಯಾರು ಹೇಳಿಕೊಟ್ಟಿದ್ದರೊ ಏನ ಕಥೆಯೊ. ಎಲ್ಲರಿಗಿಂತಲು ವೈನಾಗಿ ಹೆಜ್ಜೆ ಹಾಕುತ್ತಿದ್ದನು. ಎಲ್ಲರು ಬೆರಗಿನಿಂದ ಎಲಾ ಇವ್ನ ಅಂದುಕೊಂಡು ಅಮಾಸನನ್ನೆ ನೋಡುವುದು ಮಾಡುತ್ತಿದ್ದರು. ಅಷ್ಟಕ್ಕೆ ಅಲ್ಲಿಗೆ ಹೆಂಗಸೂ ಅನ್ನದೆ ಬಂದು ನಿಂತು ನೋಡುವುದಕ್ಕೆ ಬಂದುಬಿಟ್ಟಿತ್ತು. ಬಂಗಾರಿಗಂತು ಅಮಾಸನಿಂದ ಕಣ್ಣು ಕೀಳುವುದಕ್ಕೇ ಆಗಲಿಲ್ಲ. ಅಮಾಸನನ್ನು



ನೋಡುತ್ತ ನೋಡುತ್ತ ಮತ್ತೆ ಅವಳೊಳಗೆ ಕಂಕುಳಿಗೆ ಒಂದು ಕಂದ ಅಂತ ಬೇಕು ಎಂಬಂಥ ಅತ್ಯುಗ್ರ ಆಸೆ ಉಂಟಾಯಿತು. ಅವಳಿಗೆ ಮದುವೆಯಾಗಿ ಆರೇಳು ವರ್ಷ ಆಗಿದ್ದೂ ಏನೂ ಫಲ ಕಂಡಿರಲಿಲ್ಲ. ಅವರಿವರು ಆಡೊ ಮಾತಿಗೆ ಅವಳ ಘಟ ರೋಸಿ ಆ ಕಿಚ್ಚಿಗೇ ಮಾಡಬಾರದ್ದನ್ನೆಲ್ಲ ಮಾಡಿಯೂ ನೋಡಿದಳು. ಆದರೂ ಫಲ ಕಾಣಲಿಲ್ಲ. ಅವಳ ವಾರಿಗೆಯವರು ಮುವ್ವತ್ತರ ಸುತ್ತಿಗೇ ಮುಪ್ಪು ಹಿಡಿಸಿಕೊಂಡಿದ್ದರೂ ಅವಳೊ ಇನ್ನೊಂದು ಮದುವೆ ಮಾಡಿಕಳಿಸುವಂತೆ ಇದ್ದಳು. ಅವಳ ಕಂಡವರಿಗೆ ಅರಗಳಿಗೆಯಾರು ಆಸೆಯಾಗುವಂಥ ಬಿನ್ನಾಣ ಅವಳಿಗಿತ್ತು. ಅದಿರಲಿ, ಆದರೂ ಫಲ ಕಾಣಲಿಲ್ಲ. ಆದರೆ ಅವಳ ರೀತಿಯೂ ಹೆಚ್ಚು ದಿನ ಮುಂದುವರೆದುಕೊಂಡೂ ಹೋಗಲಿಲ್ಲ. ರಾತ್ರಿಯಾಯ್ತು ಅಂದರೆ ಹಟ್ಟಿಗೆ ಒಂದೊಂದಾಗಿ ಕಲ್ಲು ಬೀಳಲು ತೊಡಗಿದವು. ಅವಳ ಗಂಡ ಬಂಗಾರಿ ಬೆನ್ನಿಗೆ ಬಾಸುಂಡೆ ಬರಿಸಿ ತಲೆ ಚಚ್ಚಿಕೊಂಡು ಹೊರಕ್ಕೆ ಮೊಖ ಹಾಕದೆ ಕುಂತನು. ಆಮೇಲ ಕಲ್ಲು ಬೀಳುವುದು ನಿಂತು ಈಗ ಮರೆತುಹೋಗುವಷ್ಟು ಆಗಿತ್ತು. ಅವಳ ಕಣ್ಣುಗಳ ಒಳಗ ಅಮಾಸ ಥರಾವರಿ ಕುಣಿಯುತ್ತಿತ್ತು.

ಮೇಲಿನಂತೆ ಆಗುತ್ತಿದ್ದ ಸಂದರ್ಭದಲ್ಲೆ ಇಬ್ಬರು ಯಜಮಾನರು ಕೊಬ್ಬಿದ ಎರಡು ಹೋತಗಳನ್ನು ಅಲ್ಲಿಗೆ ಸೆಳತಂದರು. ಆಗ ಅಲ್ಲಿದ್ದ ಗುಂಪು ಎರಡಾಗಿ ಸೀಳಿತು. ಐಕಳು ಮಕ್ಕಳು ಅತ್ತಗು ಇತ್ತಗು ಚೆಲ್ಲಿಕೊಂಡವು. ಹೋತಗಳೊ ತಮ್ಮಟೆ ಬಿರುಸಿಗೆ ದಿಕ್ಕಾಪಾಲು ಎಳೆಯತೊಡಗಿದವು. ಆ ಬಲಕ್ಕೆ ಹಿಡಿದವರು ಅಲ್ಲಾಡಲು ಮತ್ತೂ ಇಬ್ಬರು ಸೇರಿ ಅವ ಹಿಡಕಂಡು ಮಿಸುಕಾಡದಂತೆ ಮಾಡಿ ಮಾರಿಗುಡಿ ಮುಂದೆ ತಂದು ನೇರಕೆ ನಿಲ್ಲಿಸಿದರು. ಹೊರಗೆ ಹುಮ್ಮಸ್ಸಿಂದ ತಮ್ಮಟೆ ಬಡಿಯುತ್ತಿತ್ತು. ಹೋತಗಳು ಅಲುಗದೆ ಮಿಸುಕದೆ ಕಣ್ಣುಗಳನ್ನು ಮಾತ್ರವೆ ಸುತ್ತಗು ತಿರುಗಿಸುತ್ತಿದ್ದವು. ಎದುರಾ ಗುಡಿ ಬಾಗಿಲು ತೆರದಿದ್ದು ಬೆಳ್ಳಿ ದೇವರು ಹೊಳೆಯುತ್ತಿತ್ತು. ಗುಡಿ ಒಳಗಿಂದ ಪೊದೆಯಾಗಿ ಊದುಬತ್ತಿ ಹೊಗೆ ಹೊರಕ್ಕೆ ತೇಲಿಕೊಂಡು ಬರುತ್ತಿತ್ತು. ಒಳಗಿದ್ದ ಸೊಂಟದಿಂದ ಕೆಳಕ್ಕೆ ಮಂಡಿಯಿಂದ ಮೇಲಕ್ಕೆ ಬಟ್ಟೆ ಸುತ್ತಿದ್ದ ಒಬ್ಬನು ತೀರುತ ಮಾರು ಹೂವ ತಂದು ಹೋತಗಳ ಮುಂದೆ ನೆಟ್ಟಗೆ ನಿಂತು, ಕ್ಷಣ ಕಣ್ಣು ಮುಚ್ಚಿ ತುಟಿ ಅಲುಗಿಸುತ್ತ ವಟವಟ ಆರಂಭಿಸಿದನು. ಅವನ ಮಯ್ಯಿ ಕಪ್ಪಗಿದ್ದು ಮೈಯೆಲ್ಲ ನರ ನರವೆ ಹಬ್ಬಿತ್ತು. ವಟಗುಟ್ಟುವುದಕ್ಕೆ ತಕ್ಕಂತೆ ಅವು ಹಿಗ್ಗುತ್ತ ಕುಗ್ಗುತ್ತ ಇದ್ದವು. ಆಮೇಲ ಅವ ಹೂವ ಎರಡು ಮಾಡಿ ಹೋತಗಳ ಕೊರಳಿಗೆ ಬಿಗಿದನು. ಅದಾದ ಮೇಲ ಬಿಡಿ ಹೂವ ಹೋತಗಳೆರಡರ ನೆತ್ತಿಯ ಮೇಲೆ ಇಟ್ಟು ತೀರುತವನ್ನು ಮೈಮೇಲೆಲ್ಲ ಎರಚಿ ಕೈಮುಗಿದು 'ಏನಾರ ತಪ್ಪಿದ್ದರ ಹೊಟ್ಟ ಒಳಕ ಹಾಕವ್ವ, ಒಪ್ಪಿಗೆ ಕೊಡು" ಅಂದನು. ಅವನ ಆ ಚೂಪು ದನಿ ಮಾರಿಗುಡಿ ತುಂಬ ದನಿಗುಟ್ಟಿತು. ದೂರದಲ್ಲಿ ಗಲಭೆ ಬಿಟ್ಟರೆ ಮಾರಿಗುಡಿ ಒಳಗ ಎಲ್ಲರು ಉಸುರುಕಟ್ಟಿ ನಿಂತಿದ್ದರು. ಅವರು

ಹಾಗೆ ನಿಂತಿರುವುದು ಹೋತಗಳು ಕಣ್ಣುಗಳನ್ನು ಮಾತ್ರವೆ ಸುತ್ತಗು ತಿರುವಿಸುತ್ತ ನೋಡುವುದು ಸ್ವಲ್ಪ ಹೊತ್ತು ನಡೆಯಿತು. ಆಮೇಲ ಹೋತಗಳು ಒಂದೆ ಸಮಕ್ಕೆ ತಲಮಯ್ಯಿ ವದರಿದವು. ತಮ್ಮಟೆ ದನಿಯು ಅಲ್ಲಿಂದ ಏಳುತ್ತಿದ್ದ ಗಲಗು ಗದ್ದಲವನ್ನು ನುಂಗಲು ಆರಂಭಿಸಿತು. ಒಂದಿಷ್ಟು ಐಕಳೂ ಅಮಾಸನೂ ದೊಡ್ಡವರು ಗದರಿಸಿದರೂ ಅವರು ಅತ್ತ ತಿರುಗಿದಾಗ ಇತ್ತ ಚಿಗಿದು ಮುತ್ತುತ್ತಿದ್ದವು. ಕೊಂಟಿನ ಪಕ್ಕವೆ ಬಲವಾಗಿದ್ದ ಒಬ್ಬನು ಚೂರಿ ಹಿಡಿದು ಲೀಲಾಜಾಲವಾಗಿ ನಿಂತಿದ್ದನು. ಇಬ್ಬರು ಹೋತಕ್ಕೆ ಹಿಂಗಾಲು ಮುಂಗಾಲು ಮಾಡಿ ಬಿಮ್ಮಗೆ ಹಿಡಿದು ಅದರ ಕತ್ತನ್ನು ಕೊಂಟಿಗೆ ತರುತ್ತಲೆ ಕಾಯುತ್ತಿದ್ದ ಚೂರಿಯವ ಚಕ್ಕನೆ ಹೋತದ ಕತ್ತಿಗೆ ಚೂರಿಯಿಂದ ಒಂದೇಟು ಹಾಕಿ ಚುರು ಚುರು ಅನ್ನಿಸಿಬಿಟ್ಟಾಗ ದೇಹ ತಲೆ ಎರಡಾದವು. ಕತ್ತರಿಸಿ ಒಕ್ಕಡೆ ಬಿದ್ದ ತಲೆಯ ಬಾಯಿಗೆ ಒಬ್ಬ ನೀರು ಹಾಕಿದನು. ಒಂದೆರಡು ಸಲ ಬಾಯಿ ಪಕ ಪಕ ಅಂದು ಮುಚ್ಚಿತು. ಆ ಕಡೆ ಅದರ ದೇಹ ಎಷ್ಟೆಷ್ಟೊ ಒದ್ದಾಡಲು ಒದ್ದಾಡುತ್ತಿತ್ತು. ತಲೆ ಮಾತ್ರ ಕಣ್ಣುಗಳ ಮೇಲಕ್ಕೆ ಅಗಲಿಸಿ ಆಗಲೆ ಸ್ತಬ್ಧವಾಗಿಬಿಟ್ಟಿತ್ತು. ಒದ್ದಾಡುವ ದೇಹದಿಂದ ರಕ್ತ ಚಲಚಲನೆ ಚಿಮ್ಮುತ್ತ ನೆಲಕ್ಕೆ ದೊದದೊದನೆ ಸುತ್ತಲೂ ಕೆಂಪಗಾವರಿಸಿತು. ಯಾರೊ ಒಂದು ಹೈದ ತವಕನೆ ಓಡಿ ಹೋತಗಳ ಕತ್ತಿಗೆ ಸುತ್ತಿದ್ದ ರಕ್ತ ಸೋರುತ್ತಿದ್ದ ಹೂವಸರವ ತಂದುಬಿಟ್ಟನು. ಅವ ಸುಮ್ಮನಿರದೆ ಅದ ಅಮಾಸನ ಕತ್ತಿಗೆ ಸುತ್ತಿಬಿಟ್ಟು ಕುಣಿ ಅಂತಂದನು. ಅಮಾಸನಿಗೆ ಕತ್ತಿನ ಸುತ್ತೆಲ್ಲ ತಣ್ಣಗುಟ್ಟಿ ಅವನ ಕತ್ತಿನಿಂದಲೂ ರಕ್ತ ತೊಟ್ಟಿಕುತ್ತ ಅಮಾಸ ಬೆದರಿ ಬೆಚ್ಚಿ ಅಲ್ಲಿಂದ ಕಂಬಿಕಿತ್ತನು. ಅವನಂತೆಯೆ ಒಂದಿಬ್ಬರು ಹಾಗೆ ಮಾಡಿದರು. ಮಲಗಿದರೂ ಎಷ್ಟೊ ಹೊತ್ತಿನವರೆಗೆ ಇದೇನೆ ಅಮಾಸನ ಕಣ್ಣಿಗೆ ಕಟ್ಟಿತ್ತು. ಅದರೊಳಗೇ ಅವನು ಬೆಚ್ಚಿ ಬೆದರಿ ಎಷ್ಟೋ ಸಲ ಎದ್ದು ಕೂತನು. ಅವತ್ತು ರಾತ್ರಿಯೆಲ್ಲ ಬೆಳಕು ಹಚ್ಚಿದ್ದರು. ಪರ ಊರಿನವರು ಹೆಚ್ಚಾಗಿ ಬಿಳಿ ದುಪ್ಪಟಿ ಹೊದ್ದು ಮಾರಿಗುಡಿ ತುಂಬಾ ಏಕಾ ಮಲಗಿದ್ದರು. ಅದೆಲ್ಲ ಸೇರಿಕೊಂಡು ಮಾರಿಗುಡಿಗೆ ಮಾರಿಗುಡಿಯೆ ಬೆಳ್ಳಗಿತ್ತು.

ಆ ರಾತ್ರ ರೈಲ್ವೆ ಗ್ಯಾಂಗ್‌ಮೆನ್ನು ಸಿದ್ದಪ್ಪನು ವ್ಯೋವರಾಗಿ ಹೊಟ್ಟೆತುಂಬ ಪರಮಾತ್ಮನನ್ನು ಹಾಕೊಂಡು ಬಂದಿದ್ದನು. ಅವನ ತಪ್ಪಲ್ಲದಿದ್ದರೂ ಅದು ಅವನನ್ನು ಆ ರಾತ್ರಿ ತುಂಬ ಆಡಿಸತೊಡಗಿತು. ಅವನಿಗೋ ಕಣ್ಣು ಮುಚ್ಚಿದರೆ ಪ್ರಳಯ ಆಗುತ್ತಿತ್ತು. ಅದಕ್ಕೇ ಅವನು ಕಣ್ಣುಮುಚ್ಚದೆ ತೂರಾಡುವ ಹಾದಿ ಒಳಗ, ಹಿಡಿದಿದ್ದ ಕೋಲು ಊರುತ್ತ ದಿಕ್ಕಾಪಾಲು ನಡೆದಾಡತೊಡಗಿದನು. ಹಾಗೆ ನಡೆದಾಡುತ್ತಿರುವರಲ್ಲಿ ಉರಿಯೊ ಲೈಟುಕಂಬ ಕಂಡುಬಂದಲ್ಲಿ ಅವನಿಗೆ ರೋಷ ಹೊಮ್ಮುತ್ತಿತ್ತು. ಝಾಡಿಸಿ ಅದಕ್ಕೆ ಒದ್ದು ಬಿದ್ದು ಕೋಲಲ್ಲಿ ಜೋರು ಬಡಿಯುವನು. ಅಲ್ಲಾಗುವ ಸದ್ದು ಸುತ್ತಮುತ್ತನ್ನೆಲ್ಲ ನಡುಗಿಸುತ್ತ ಏಳುತ್ತಿತ್ತು. ಅಷ್ಟಕ್ಕೂ ಮುಗಿಸದೆ ಹಾಹೊ ಚೀರುತ್ತ ಅದನ್ನು ರಾಜಕಾರಣಿಯನ್ನೊ ಕಂಟ್ರಾಕ್ಟರನ್ನೊ



ರೈಲ್ವೆ ಬಾಸನ್ನೊ ಆಣೆ ಬಡ್ಡಿ ಸಾಲಕೊಡೊ ಮಾದಪ್ಪನನ್ನೊ ಮಾಡಿಕೊಂಡು - ಥೂ ಸೂಳೆಮಗ್ನ. ಬಿಳಿ ಬಟ್ಟ ಹಾಕ್ಕೊಂಡು ದೇಸ ಸುತ್ತಿ ದೊಡ್ಡವ ಆಗ್ತಿ ಏನ್ಲೇ? ನನ್ನ ಕಂಡ್ರ ನೀನು ಮೂಗ ಮುಚ್ಕೊಳ್ತೀಯ? ನಾವಾದ್ರ ಪರದೇಸಿಗಳಪ್ಪ. ಎಲ್ಲಂದ್ರ ಅಲ್ಲಿ ಬೀದೀಲಿ ಬಿದ್ದಿರ್ತೀವಿ. - ವ್ಹೊ ಎಂದು ದೊಡ್ಡದಾಗಿ ಬಾಯಿ ದನಿ ತೆಗೆದು ಗೋಳೋ ಎಂದು ಅತ್ತನು. ಮತ್ತೂ ಮಾತು ಜೋರು ಮುಂದುವರಿಸಿದನು - ನಿಮ್ಮ ಕಾರ ನಮ್ಮ ಮೇಲ ಬುಡಬೇಡ್ರಪ್ಪೊ. ನನ್ಮಾತ ಕೇಳಿ ನಗ್ತಾನೆ ನೋಡ್ರಪ್ಪೊ. ನಗಪ್ಪಾ ನಗು. ನಿಂಗ ನಗೊ ಕಾಲ. ನೀ ಏನ ಮಾಡ್ತಿ ನಗ್ದೆ. ನಗು ಮಗ್ನ. ಬಡವ್ರ ಉದ್ಧಾರ ಮಾಡವ ನೀನು. ನಗು ಮಗ್ನ. ಕಮುನಿಸಮು ಬರ್ಬೇಕು, ಆಗ ನೀ ನಗೋದು ಹೋಗ್ಬೇಕು. ಅಲ್ಲಿಗಂಟಾನು ನೀ ನಗ್ತಿ. ನಗಪ್ಪೊ ನಗು - ಅಲ್ಲೆ ಅಲ್ಲೋಲ ಕಲ್ಲೋಲ ಏಳಿಸುತ್ತ ಅವನ ಮಾತು ನಗು ಎಲ್ಲವು ಬೀದಿ ತುಂಬೆಲ್ಲ ಬಿದ್ದು ಎದ್ದು ಆ ಕೊರೆಯುವ ರಾತ್ರಿ ಕತ್ತಲ ಒಳಗ ಒದ್ದಾಡುತ್ತಿದ್ದವು. ಆ ಮಾತು ನಗುಗೆಲ್ಲ ನಿದ್ದೆ ಬಾರದಿದ್ದ ಅಮಾಸ ಬೆಚ್ಚಿ ಬೆಚ್ಚಿ ಕೂರುತ್ತಿದ್ದನು. ಹೀಗೆ ಎಷ್ಟೊ ಹೊತ್ತು ನಡೆದು ಆಮೇಲ ಸಿದ್ದಪ್ಪನ ದೇಹ ಎಲ್ಲಿ ಬಿತ್ತೊ ಹೇಗೆ ಬಿತ್ತೊ ಏನು ಕಥೆಯೊ ಅವನ ಮಾತು ಅವನ ನಗು ನಿಂತವು.

ಮಾರನೆ ದಿನ ಬಂತಲ್ಲ, ಆವತ್ತು ಊರು ಆಕಳಿಸುತ್ತ ಕಳೆಯಿತು. ಯಾವಾವ ಜಗುಲಿ ನೋಡಿದರೂ ಜನವೆ ತುಂಬಿತ್ತು. ಅಷ್ಟಕ್ಕೂ ಎಷ್ಟೊ ಜನ ಇನ್ನೂವೆ ಎದ್ದೆ ಇರಲಿಲ್ಲ, ಉದಾ: ಸಿದ್ದಪ್ಪ. ಮಧ್ಯಾಹ್ನ ಬಂತಲೆ ಹುಲಿಯಾಸದವರಿಂದ ಚಲನ ವಲನ ಮಾರಿಗುಡಿಗೆ ಬಂತು. ಗೌಡರ ಜೀತದಾಳು ಬಂದು 'ಗೌಡ್ರ ಹಟ್ಟಿಗೆ ತಿಂಗ್ನ ಕಾಯಿ ಬೇಕಂತೆ' ಎಂದು ಅಂದು ಕುರಿಯಯ್ಯ ಕಿತ್ಕೊ ಅಂತಲೆ ಅವ್ನು ಮರವ ನಿಮಿಷಕ್ಕೆ ಹತ್ತಿ ಉದುರಿಸಿಕೊಂಡು ಹೋದನು. ಅತ್ತ ಹಟ್ಟಿಗಳ ಒಳಗ ಹೆಂಗಸರು ಚೆಂದಾಗಿ ತಲೆಬಾಚ್ಕೊಂಡು ಹೂ ಮುಡ್ಕಂಡು ಹೊರಕ್ಕು ಒಳಕ್ಕು ಓಡಾಡುತ್ತಿದ್ದರು. ಪ್ರಾಯದ ಹುಡುಗರಂತು ಆಗೀಗ ಆಡೊ ತುಡುಗು ಹುಡಿಗೇರ ರೇಗಿಸುತ್ತ ಅವುಗಳಿಂದ ಬೈಸಿಕೊಳ್ಳುತ್ತ ಇದ್ದವು. ಮಾರಿಗುಡೀಲಿ ಹುಲಿಯಾಸದ ತಮ್ಮಟ ಸದ್ದು ಎಲ್ಲರನ್ನು ಒಕ್ಕಡೆಗೆ ಸೆಳೆಯುತ್ತಿತ್ತು. ಎಲ್ಲರು ಬರೊ ಹುಲಿಗಳನ್ನೆ ಕಾಯುತ್ತ ಕಾದಿದ್ದರು. ಹಾಗೆ ಇದ್ದು ಒಮ್ಮೆಗೆ ಹುಲಿಮನೆ ಬಾಗಿಲು ತೆರಕೊಂಡಿತು. ಎಲ್ಲರ ಕಣ್ಣುಗಳೂ ದಬ ದಬ ಅಲ್ಲಿಗೆ ಬಿದ್ದವು. ಒಂದು ದೊಡ್ಡಯಾಸದ ಹುಲಿ ನಿಂಬೆಹಣ್ಣ ಬಾಯಲ್ಲಿ ಕಚ್ಚಿ ಒಳಗಿನಿಂದ ಹೊರಕ್ಕೆ ನೆಗೆದು ಬಂತು. ಬರುತ್ತಲೆ ಜನವೆಲ್ಲ ಹೌಹಾರಿ ಚದುರಿ ಸರಿದು ಸರಿದು ಅಲ್ಲೆ ರೌಂಡಾಗಿ ಜಾಗವಾಯ್ತು. ಅದಾದ ಮೇಲ ನಾಕಾರು ದೊಡ್ಡ ಹುಲಿಗಳು, ಕತ್ತೆ ಕಿರುಬ, ನಗುಸೊ ಕೋಡಂಗಿ ಒಂದಾದ ಮೇಲೊಂದು ಬಂದುವು. ಬಂದವುಗಳಲ್ಲಿ ಒಂದು ಮರಿ ಹುಲಿಯೂ ಇತ್ತು. ಎಲ್ಲ ಬಂದಾದ ಮೇಲ ಸಾಲಾಗಿ ನಿಂತು ದೇವರಿಗೆ ಕೈ ಜೋಡಿಸಿ ತೀರುತ ತಕ್ಕಂದರು. ಆಮೇಲ ಅಲ್ಲಿಂದಲೆ ಕುಣಿತ ಆರಂಭ

ಆಯ್ತು. ಕತ್ತೆ ಕಿರುಬನು ಎಲ್ಲರಿಗಿಂತಲು ಜೋರಾಗಿ ಮಜಬೂತವಾಗಿದ್ದು ಅವನಿಗೆ ಯಾಸ ಥೇಟಾಗಿತ್ತು. ಅವ್ನು, ಮರಿ ಕಡಿಯುವಾಗ ಲೀಲಾಜಾಲವಾಗಿ ಕತ್ತಿ ಹಿಡಿದು ನಿಂತಿದ್ನಲ್ಲ ಅವ್ನು. ಅವ, ತಮಟೆ ದನಿಗೆ ಹೆಜ್ಜೆ ಹಾಕುತ್ತ ಬಂದ ಅಂದರೆ ಜನಕ್ಕೆ ಜನವೆ ಫರ್ಲಾಂಗು ದೂರ ಜಿಗಿಯುತ್ತಿತ್ತು. ಕುಣಿತ ಬೀದಿಗೆ ಬಂದಾಗ ಹೆಂಗ್ಸು ಮಕ್ಕಳು ಜಗಲಿ ಇಳಿದೇನೆ ಜೀವ ಹಿಡಕಂಡು ನೋಡುತ್ತಿದ್ದರು. ಏನಾರು ಕುಣಿತ ಅವರ ದಿಕ್ಕ ಬಂದರೆ ಗುಡಕ್ಕಂತ ಒಳಕ್ಕೋಗಿ ಚಿಲಕ ಹಾಕ್ಕೊಂಡುಬುಡುವರು. ಸಣ್ಣ ಹೈಕಳಂತು ದೂರ ದೂರವೆ ಇದ್ದು ಕುಣಿತ ಹೋದತ್ತ ಹೋದವು. ಹಾಗೆ ಕುಣಿತ ನಡೆದು ಒಕ್ಕಲಗೇರಿಗು ಬಂದು ಅಲ್ಲಿ ಚಾವಡಿ ಮುಂದ ಕುಣೀತು. ಕುಣಿತಕ್ಕೆ ಗೌಡರು ಶಾನುಭೋಗರು ಎನ್ನದೆ ಮುಂತಾದ ಮೇಲು ಜಾತಿ ಮೊಖಂಡರು ಸೇರಿದ್ದರು. ಅವರೆಲ್ಲ ಕುಣಿತದವರಿಗೆ ತಂತಮ್ಮ ಸ್ಥಾನಮಾನಕ್ಕೆ ತಕ್ಕಂತ ಇನಾಮು ಕೊಟ್ಟು ಶಭಾಷಗಿರಿ ಪಡಕಂಡರು. ಊರ ಮೇಲಕ್ಕೆ ಕತ್ತಲು ಬಿದ್ದು ಕುಣಿತ ಮುಗಿದರೂ ಆದರೂ ಊರವರ ಕಣ್ಣು ಎತ್ತ ಹೋದರೂ ನಿದ್ದೆ ಮಾಡಲು ಕಣ್ಣು ಮುಚ್ಚಿದರೂ ಅಥವಾ ಹೆಂಡ್ತೀಗೆ ಸೀರೆ ಬಿಚ್ಚಿ ಬೆತ್ತಲೆ ಮಾಡಿ ನೋಡಿದರೂ ಕುಣಿತವೆ ಢಂಗು ಢಂಗು ಢಂಗುಚುಕ್ಕಿ ತಮ್ಮಟೆ ದನಿ ಜೊತೆಲೇನೆ ಕಾಣುತ್ತಿತ್ತು.

ಗೌಡರು ಮಲಗಿದರೂ ನಿದ್ದೆ ಬಾರದಕ್ಕೆ ಅಡ್ಡಾಡಲು ಬಂದರು. ಅವರ ಹಟ್ಟಿ ಜೀತಗಾರನು ಎಚ್ಚರವಾಗೆ ಇದ್ದುದರಿಂದ ಗೌಡರು ಬಂತಲೆ ಎದ್ದು ಕುಂತನು. ಗೌಡರು ಬೀಡೀನ ಬಾಯಿಗೆ ಸಿಕ್ಕಿಸಿ ಕಡ್ಡಿಗೀರಲು ಆ ಬೆಳಕಿಗೆ ಆ ಕತ್ತಲಿಗೆ ಅವರ ಮುಖವಷ್ಟು ಕೆಂಪಗೆ ಕಂಡು ನಂದಿತು. ಗೌಡರು ಹೊಗೆ ನುಂಗುತ್ತ ಇದ್ದು ಆಮೇಲ ಜೀತಗಾರನ ದಿಕ್ಕ ತಿರುಗಿ "ಅದೇ ಆ ಮರಿ ಹುಲಿ ಮಾಡಿತ್ತಲ್ಲ, ಆ ಹೈದ ಯಾರ್ದು" ಎಂದರು. ಜೀತಗಾರ "ಅದೇಅಳಿ, ಅಮಾಸ ಅಂತ" ಅಂದನು. "ಅಮಾಸ ಅಂದ್ರು ?" ಎಂದು ಮತ್ತೂ ಕೇಳಿದರು. ಅದಕ್ಕವ 'ಅದೇ ಅಳಿ. ಆ ಕುರಿಯಯ್ಯನ ಜೊತೇಲಿ ಒಂದು ತಾಯಿ ತಂದ ಇಲ್ದ ತಬ್ಬಲಿ ಹೈದ ಇತ್ತಲ್ಲ ಬುದ್ಧಿ, ಅದೇನೆ" ಅಂದನು. ಗೌಡರು ಕೇಳಿದವರೆ ಅತ್ಯಾಶ್ಚರ್ಯ ಆದರು. "ಎಲಾ ಅವ್ನ. ಆ ಮಠದ ಮುಂದ ಹೋಗ್‌ಬರೋರ ಕಾಸ್ ಕೇಳ್ತ ನಿಂತ್ಕಳೊ ಆ ಅಬ್ಬೇಪಾರೀನ! ಹುಲಿಯಾಸ್ದಲ್ಲಿ ಎಷ್ಟು ಬೆಳೆದಂಗೆ ಕಾಣ್ತಾನೆ ನೋಡು" ಅಂದರು. ಗೌಡರ ಕಣ್ಣುಗಳ ಮುಂದಕ್ಕೆ ಅಮಾಸ ಹುಲಿಯಾಸ ಹಾಕಿ ಬಗೆಬಗೆಯಾಗಿ ಕುಣಿಯುತ್ತ ಬಂತೊ.

(1973)